# ಮಂಜಯ್ಯ ಗಣಪತಿ ಶೇಣ್ವಿಯವರ ಎರಡು ಪ್ರಸಂಗಗಳು



ಸಂಪಾದಕರು :
ಶಾ.ಮಂ. ಕೃಷ್ಣರಾಯ

**ಕರ್ನಾಟಕ ಯಕ್ಷಗಾನ ಅಕಾಡೆಮಿ**
೨ನೇ ಮಹಡಿ ಚಾಲುಕ್ಯ ವಿಭಾಗ, ಕನ್ನಡ ಭವನ,
ಜೆ.ಸಿ ರಸ್ತೆ, ಬೆಂಗಳೂರು ೫೬೦ ೦೦೨

ಮಂಜಯ್ಯಾ ಗಣಪತಿ ಶೇಣ್ವೆಯವರ ಎರಡು ಪ್ರಸಂಗಗಳು

# ರತ್ನಾವತೀ ಕಲ್ಯಾಣ

## ಮತ್ತು

# ಉಷಾ ಪರಿಣಯ

ಸಂಪಾದಕರು :
ಶಾ. ಮಂ. ಕೃಷ್ಣರಾಯ

ಕರ್ನಾಟಕ ಯಕ್ಷಗಾನ ಅಕಾಡೆಮಿ
2ನೇ ಮಹಡಿ, ಚಾಲುಕ್ಯ ವಿಭಾಗ, ಕನ್ನಡ ಭವನ, ಜೆ.ಸಿ ರಸ್ತೆ,
ಬೆಂಗಳೂರು 560 002

Manjaiah Ganapthi Shenviyavara Eradu Prasangagalu written by Sri Sha. Mam. Krishnaraya Published by Registrar Karnataka Yakshagana Academy, Kannada Bhavana, J.C Road, Bangalore - 560 002 Ph : 080 2211314

ಈ ಆವೃತ್ತಿಯ ಹಕ್ಕು: ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು – 560 002

ಮುದ್ರಿತ ವರ್ಷ : 2019
ಪ್ರತಿಗಳು : 300
ಪುಟಗಳು : 96
ಬೆಲೆ : ರೂ 80. 00

ಪ್ರಧಾನ ಸಂಪಾದಕರು
ಪ್ರೊ. ಎಂ ಎ ಹೆಗಡೆ
ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

ಪ್ರಕಾಶಕರು :
ಎಸ್. ಹೆಚ್ ಶಿವರುದ್ರಪ್ಪ
ರಿಜಿಸ್ಟ್ರಾರ್, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

ಸಂಪಾದಕರು :
ಶಾ. ಮಂ. ಕೃಷ್ಣರಾಯ
ನಂ.500, ಸಾಹಿತ್ಯ ಸದನ, 11ನೇ ಕ್ರಾಸ್,
ಗಿರಿನಗರ, ಬೆಂಗಳೂರು 85, ಮೊ: 94817–88832

ಮುದ್ರಕರು :
ಶ್ರೀರಾಮ ಪ್ರಿಂಟರ್ಸ್
ಬೆಂಗಳೂರು

# ಅಧ್ಯಕ್ಷರ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವವು ಪ್ರಸಂಗಕೃತಿಗಳು. ಕನ್ನಡ ಸಾಹಿತ್ಯ ನಂದನದಲ್ಲಿ ವಿಕಸನಗೊಂಡ ವಿವಿಧ ಛಂದೋಕುಸುಮಗಳ ಗ್ರಥನದಿಂದ ಸಿದ್ಧಗೊಂಡ ಅನುಪಮ ಕಾವ್ಯಗಳು ಇವು. ಅಲ್ಲಿನ ಪದ್ಯಗಳ ಚೌಕಟ್ಟಿನಲ್ಲಿಯೇ ಆಶುಸಂಭಾಷಣೆಗಳು ನಡೆಯುತ್ತವೆ. ಆಶುಸಂಭಾಷಣೆಗೆ ಸೀಮಾರೇಖೆಯನ್ನೆಳೆದು ಕಥಾಪ್ರವಾಹದ ಗತಿಯನ್ನು ನಿಯಂತ್ರಿಸುವ ಕಾರ್ಯ ಅವುಗಳದು. ಉತ್ತಮವಾದ ಪ್ರಸಂಗ ಕಾವ್ಯ ರಚನೆಯು ಕವಿಯ ಪ್ರತಿಭೆ ಪಾಂಡಿತ್ಯಗಳಿಗೆ ನಿಕಷವೆನಿಸುತ್ತದೆ. ಅಂತೆಯೇ ಉತ್ತಮವಾದ ಪ್ರಸಂಗವು ಸಾವಿರಾರು ವರ್ಷಗಳುರುಳಿದರೂ ನಿತ್ಯನೂತನವೆನಿಸುತ್ತದೆ. ಅಂಥ ಕೃತಿಗಳ ಶೋಧನೆ, ಪ್ರಕಟಣೆಗಳು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅದ್ಯ ಕರ್ತವ್ಯವೆಂದು ಭಾವಿಸಲಾಗಿದೆ.

ಪ್ರಸ್ತುತ ಸಂಕಲನದಲ್ಲಿ ದಿ. ಮಂಜಯ್ಯ ಶೇಣ್ವಿಯವರ ಎರಡು ಪ್ರಸಂಗಗಳಿವೆ. ಮಂಜಯ್ಯ ಶೇಣ್ವಿಯವರು 20ನೆಯ ಶತಮಾನದ ಮೊದಲರ್ಧದಲ್ಲಿ ಬದುಕಿದ್ದವರು. ಅಂಕೋಲೆಯಲ್ಲಿ ವಾಸವಾಗಿದ್ದು ಯಕ್ಷಗಾನದ ಮೇಲೆ ಅಪಾರವಾದ ಪ್ರೀತಿಯನ್ನಿಟ್ಟುಕೊಂಡವರು. ಅವರು ಅನೇಕ ಪ್ರಸಂಗಳನ್ನು ರಚಿಸಿದ್ದಾರೆ. ಆದರೆ ಅವೆಲ್ಲವೂ ಲಭ್ಯವಾಗಿಲ್ಲ. ಅವರ ಮಗ ಪ್ರಸಿದ್ಧ ಸಾಹಿತಿಗಳಾದ ಶಾ.ಮಂ.ಕೃಷ್ಣರಾಯರು ಈ ಎರಡು ಪ್ರಸಂಗಗಳನ್ನು ಸಂಪಾದಿಸಿಕೊಟ್ಟಿದ್ದಾರೆ. ಇವುಗಳಲ್ಲಿ 'ರತ್ನಾವತಿ ಕಲ್ಯಾಣವು ಕರ್ಣ–ರತ್ನಾವತಿಯೆಂದು ಹಿಂದೆ ಪ್ರಸಿದ್ಧವಾದ ಪ್ರಸಂಗವೊಂದರ ಕಥೆಯನ್ನು ಆಧರಿಸಿದೆ. ಕರ್ಣನ ವಿವಾಹದ ವೃತ್ತಾಂತವನ್ನು ರಂಜಕವಾಗಿ ಹೇಳುತ್ತದೆ. 'ಉಷಾಪರಿಣಯವು ಹರಿವಂಶ ಪುರಾಣದ ಪ್ರಸಿದ್ಧವಾದ ಕಥೆಯನ್ನು ಆಧರಿಸಿದೆ. ಮಂಜಯ್ಯ ಶೇಣ್ವಿಯವರಲ್ಲಿ ಸಹಜವಾದ ಕವಿತ್ವಶಕ್ತಿಯಿದ್ದು ಗ್ರಾಮ್ಯ ಸೊಗಡಿದೆ. ಅದರಿಂದ ವಿಶಿಷ್ಟವಾದ ಸ್ವಾದವುಂಟಾಗಿದೆ. ಈ ಪ್ರಸಂಗಗಳನ್ನು ಒದಗಿಸಿ ಪ್ರಕಟಿಸಲು ಅನುಮತಿಸಿದ ಶಾ.ಮಂ.ಕೃಷ್ಣರಾಯರಿಗೆ ಧನ್ಯವಾದಗಳು.

ಈ ಕೃತಿಗಳ ಪ್ರಕಾಶನದ ಹೊಣೆಯನ್ನು ಹೊತ್ತ ಅಕಾಡೆಮಿಯ ರಿಜಿಸ್ಟ್ರಾರ್ ಎಸ್. ಹೆಚ್. ಶಿವರುದ್ರಪ್ಪ, ಮುದ್ರಣ ಮಾಡಿದ ಶ್ರೀರಾಮ ಪ್ರಿಂಟರ್ಸ್, ಅಕ್ಷರ ಜೋಡಣೆಯನ್ನು ಮಾಡಿದ ಅಶ್ವಿನಿ ಮತ್ತು ವಿವಿಧ ರೀತಿಯಲ್ಲಿ ಸಹಕರಿಸಿದ ಸಿಬ್ಬಂದಿಗಳೆಲ್ಲರಿಗೂ ಅಕಾಡೆಮಿಯ ಅಭಿನಂದನೆಗಳು ಸಲ್ಲುತ್ತವೆ. ಯಕ್ಷಗಾನ ಕಲಾಸಕ್ತರು ಈ ಕೃತಿಗಳನ್ನು ಆದರಿಸಲೆಂದು ಹಾರೈಸುತ್ತೇವೆ.

ಪ್ರೊ. ಎಂ.ಎ.ಹೆಗಡೆ

## ಮುನ್ನುಡಿ

ರತ್ನಾವತಿ ಕಲ್ಯಾಣ ಮತ್ತು ಉಷಾಪರಿಣಯ ಮರು ಮುದ್ರಣವಾಗುತ್ತಿರುವ ಸುಸಂದರ್ಭದಲ್ಲಿ ಲೇಖಕರ ಬಗ್ಗೆ ನಾಲ್ಕು ಮಾತು ಹೇಳಲೇಬೇಕಾಗಿದೆ.

ಮಂಜಯ್ಯ ಗಣಪತಿ ಶೇಣ್ವಿಯವರು ಮೂಲತಃ ಅಂಕೋಲೆಯವರು. ಅಂಕೋಲೆಯಲ್ಲಿ ನಮ್ಮ ಮನತನದ ಒಂದು ದೊಡ್ಡ ಚಹದಂಗಡಿ, ಸ್ವಲ್ಪ ಭೂಮಿ ಇತ್ತು ಅದು ಅವರ ತಾತನ ಕಾಲದಿಂದಲೂ ನಡೆದು ಬಂದದ್ದು ಇವರ ತಾಯಿ ರುಕ್ಮಿಣಿ ಮಂಜಯ್ಯನವರು 1908ರಲ್ಲಿ ಅಂಕೋಲೆಯಲ್ಲಿ ಹುಟ್ಟಿದರು. ಮುಲ್ಕಿಯಲ್ಲಿ ಪರೀಕ್ಷೆ ಪಾಸಾಗಿ ಎಸ್.ಎಸ್.ಎಲ್.ಸಿಯವರೆಗೆ ಅಂಕೋಲೆಯಲ್ಲಿಯೇ ಓದಿದರು ಅವರ ಮನೆ ಮಾತು ಕೊಂಕಣಿಯಾದರೂ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಒಳ್ಳೆಯ ಪ್ರಭುತ್ವವಿತ್ತು. ಅವರ ಕನ್ನಡ ಅಕ್ಷರಗಳಂತೂ ತುಂಬಾ ಸುಂದರವಾಗಿದ್ದವು.

ಶಾಲೆಯ ದಿನಗಳಲ್ಲಿ ತುಂಬಾ ಕ್ರಿಯಾಶೀಲರಾದ ಶ್ರೀಯುತರು ಯಕ್ಷಗಾನದತ್ತ ಒಲವು ಬೆಳೆಸಿಕೊಂಡರು ಆ ದಿನಗಳು ಜನಪದ ಕಲೆಗಳು ಮತ್ತು ಯಕ್ಷಗಾನ ಬಿಟ್ಟರೆ ಮನರಂಜನೆಯ ಬೇರೆ ಸಾಧ್ಯಗಳಿರಲಿಲ್ಲ. ಆದ್ದರಿಂದ ಸಹಜವಾಗಿ ಯಕ್ಷಗಾನದತ್ತ ಒಲಿದ ಶ್ರೀಯುತರು ಯಕ್ಷಗಾನ ಸಾಹಿತ್ಯ ಅಧ್ಯಯನದಲ್ಲಿ ತೊಡಗಿ ಪಾತ್ರ ನಿರ್ವಹಿಸುವ ಮಟ್ಟಕ್ಕೆ ಬೆಳೆದರು. ಅಂದಿನ ಅನೇಕ ಪ್ರಚಲಿತ ಯಕ್ಷಗಾನಗಳಲ್ಲಿ ಶ್ರೀಕೃಷ್ಣ, ಶ್ರೀರಾಮ, ರುಕ್ಮಾಂಗದ, ಹರಿಶ್ಚಂದ್ರ, ಕರ್ಣನ ಪಾತ್ರಗಳಲ್ಲಿ ಹೆಸರು ಮಾಡಿದ್ದರೆಂದು ಕೇಳಿದ್ದೇನೆ. ಲಕ್ಷಣವಾದ ಮೈಕಟ್ಟು, ಚುರುಕು ಮಾತು, ಕುಣಿತದಲ್ಲಿ ಪರಿಶ್ರಮವುಳ್ಳ ಅವರು ಹವ್ಯಾಸಿ ಕಲಾವಿದರಾದ್ದರಿಂದ ಅಂಕೋಲೆಯ ಸುತ್ತಮುತ್ತ ಎಲ್ಲಿಯೇ ಆಟಗಳು ನಡೆಯುತ್ತಿದ್ದರೂ ಇವರಿಗೆ ಕರೆ ಬರುತ್ತಿತ್ತು. ಅವರು ಪಾತ್ರ ನಿರ್ವಹಿಸಲು ಹೋಗುವಾಗ ಒಂದು ಬೆತ್ತದ ಪೆಟಾರೆ ಸೈಕಲ್ಲಿನ ಕ್ಯಾರಿಯರ್‌ಗೆ ಕಟ್ಟಿಕೊಂಡು ಹೋಗುತ್ತಿದ್ದರು.

ಅವರು ಹೆಚ್ಚಾಗಿ ಯಕ್ಷಗಾನದ ಪುಸ್ತಕಗಳನ್ನು ಕನ್ನಡ ಕಾವ್ಯಗಳನ್ನು ಓದುತ್ತಿದ್ದರು. ಆದ್ದರಿಂದ ನಮ್ಮ ಮನೆಯಲ್ಲಿ ಪುಸ್ತಕಗಳ ರಾಶಿಯೇ ಇತ್ತು. ಕೆಲವು ತಡೋಲೆಯ ಗ್ರಂಥಗಳು ಇದ್ದವು. ಅವರಿಗೆ ಷಟ್ಪದಿ ಕಾವ್ಯಗಳು ಪ್ರಿಯವಾಗಿದ್ದವು. ಆದ್ದರಿಂದ ನಮ್ಮ ಮನೆಯಲ್ಲಿ ಸಂಜೆ ದೀಪ ಹಚ್ಚಿದ ಬಳಿಕ ಸಾಮೂಹಿಕ ಭಜನೆ ಮುಗಿದನಂತರ ತಂದೆಯವರು ಕುಮಾರವ್ಯಾಸ ಭಾರತ, ಕಥಾಮಂಜರಿ, ಲಕ್ಷ್ಮೀಶನ ಜೈಮಿನಿ ಭಾರತ, ತುರಂಗಭಾರತ, ತೊರವೆ ರಾಮಾಯಣ, ಕೌಶಿಕನ ಕಾವ್ಯದ ರಾಮಾಯಣ, ಹರಿಶ್ಚಂದ್ರ ಕಾವ್ಯ ಇವುಗಳಲ್ಲಿ ಯಾವುದಾದರೊಂದು ಒಂದು ಒಂದು ಸಂಧಿ ನಿತ್ಯ ಪಠಣ ಮಾಡುತ್ತಿದ್ದರು. ಮನೆಯ ಹಿರಿಯರು ಅಕ್ಕಪಕ್ಕದ ಮನೆಯ ಹಿರಿಯರು ಅವರ ಶ್ರೋತೃಗತಾಗಿದ್ದರು. ಆದರೆ ಅವರು

ಓದುತ್ತಿದ್ದುದು ಗಮಕ ಶೈಲಿಯಲ್ಲಲ್ಲ. ಯಕ್ಷಗಾನ ಶೈಲಿಯಲ್ಲಿ ಎಂಬುದು ಗಮನಾರ್ಹ.

ಬಹುಶಃ ಇದರಿಂದಾಗಿ ಅವರಲ್ಲಿ ಕಾವ್ಯ ಕಟ್ಟುವ ಯಕ್ಷಗಾನ ಬರೆಯುವ ಹವ್ಯಾಸ ಬೆಳೆದು ಬಂದಿರಬೇಕು. ಅವರು ಕಾವ್ಯದ ಒಂದೊಂದು ಪದ್ಯ ಓದಿ ಅರ್ಥವಿವರಣೆ ಕೊಡುತ್ತಿದ್ದರು. ಕೆಲವು ಬಾರಿ ಅವರನ್ನು ತಾಳಮದ್ದಳೆಯ ಕಾರ್ಯಕ್ರಮಕ್ಕೂ ಕರೆದೊಯ್ಯುತ್ತಿದ್ದರಂತೆ.

ಅವರು ಬರೆದ ಯಕ್ಷಗಾನಗಳಲ್ಲಿ ರತ್ನಾವತಿ ಕಲ್ಯಾಣ, ಉಷಾ ಪರಿಣಯ ಮಾತ್ರ ನನ್ನ ಬಳಿ ಇವೆ. ಅದಲ್ಲದೆ ಅವರು ಅದಕ್ಕೂ ಮೊದಲು ಚಂದ್ರಹಾಸ ಚರಿತ್ರೆ, ಧೃವಚರಿತ್ರೆ, ಜಯಪ್ರದೆ ಕಲ್ಯಾಣ, ದೇವಯಾನೆ ಕಲ್ಯಾಣ ಪ್ರಸಂಗಗಳನ್ನು ಬರೆದು ಪ್ರಕಟಿಸಿದ ಸಂಗ್ರಹ ಸ್ತೋತ್ರ ಸಂಗ್ರಹ ಭಾಗ–1 ನ್ನೂ ಪ್ರಕಟಿಸಿದ ದಾಖಲೆಗಳಿವೆ.

ಇಲ್ಲಿರುವ ರತ್ನಾವತಿ ಕಲ್ಯಾಣ ಮತ್ತು ಉಷಾಪರಿಣಯ ಪ್ರಸಂಗಗಳು ಕ್ರಿಶ 1932ರಲ್ಲಿ ಕಾರವಾರದ ಸೆಂಟ್ರಲ್ ಪ್ರೆಸ್ಸಿನಲ್ಲಿ ಮುದ್ರಣಗೊಂಡಿವೆ.

ಮಂಜಯ್ಯನವರ ತಂದೆ ತೀರಿಕೊಂಡ ನಂತರ ಹಿರಿಯ ಮಗನಾದ ಮಂಜಯ್ಯನವರ ಮೇಲೆ ಚಹದಂಗಡಿಯ ಜವಾಬ್ದಾರಿ ಬಿತ್ತೆಂದು ಕಾಣುತ್ತದೆ. ಆಗ ಅವರು ಅಂಗಡಿಯ ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಕೆಲಸಗಾರನನ್ನಿಟ್ಟುಕೊಂಡು ಯಕ್ಷಗಾನದ ಕರೆ ಬಂದ ಊರಿಗೆ ಪೆಟಾರೆ ಕಟ್ಟಿಕೊಂಡು ಹೋಗುತ್ತಿದ್ದರು. ಅವರಿಗೆ ಚಹದಂಗಡಿಗಿಂತ ಯಕ್ಷಗಾನ ಮುಖ್ಯವಾಗಿತ್ತು. ಎಂದು ಅವರ ಸಮಕಾಲೀನರು ಮತ್ತು ಅವರ ತಾಯಿ ಹೇಳುತ್ತಿದ್ದರು. ಅಂಗಡಿಯ ಕಡೆ ನಿರ್ಲಕ್ಷ್ಯ ಮಾಡಿದ್ದರಿಂದ ಅಂಗಡಿಯ ವ್ಯವಹಾರ ಬೇರಯವರಿಗೆ ಹಸ್ತಾಂತರ ಮಾಡಬೇಕಾಯಿತು.

ಅವರ ಪ್ರೀತಿಯ ಮಡದಿ (ನನ್ನ ತಾಯಿ) ಅಕಾಲಿಕ ಮರಣಕ್ಕೆ ತುತ್ತಾದುದರಿಂದ ಅವರು ಕೆಲವು ಕಾಲ ದೇಶಾಂತರ ಹೊರಟು ಹೋದರು. ಪ್ರಾಯಶಃ ಅದೇ ಕಾಲದಲ್ಲಿ ಅವರು ಕೇರಳ ಮತ್ತು ಕಲ್ಕತ್ತಾಕ್ಕೆ ಹೋಗಿ ಮಂತ್ರವಾದಿ ಮತ್ತು ಜ್ಯೋತಿಷ್ಯಶಾಸ್ತ್ರ ವಿದ್ಯೆಗಳನ್ನು ಕಲಿತು ಬಂದರು. ಅವರಿಗೆ ಸ್ಮಶಾನ ಕಾಳಿ ಸಿದ್ಧಿಯಾಗಿತ್ತು. ಎಂದು ಹೇಳುತ್ತಾರೆ. ಪ್ರತಿ ಅಮವಾಸ್ಯೆಯ ದಿನ ರಾತ್ರಿ ಸ್ಮಶಾನಕ್ಕೆ ಹೋಗಿ ಜಪಮಾಡಿ ಕಾಳಿಕಾ ಮಾತೆಗೆ ಕೊಡಬೇಕಾದ ಬಲಿಕೊಟ್ಟು ಬರುತ್ತಿದ್ದರು. ಅವರೊಂದಿಗೆ ಪ್ರತಿ ಅಮವಾಸ್ಯೆಗೆ ಸ್ಮಶಾನದ ಪೂಜೆ ಪುರಸ್ಕಾರಗಳಿಗೆ ಹೋಗಲು ಒಬ್ಬನನ್ನು ನೇಮಿಸಿಕೊಂಡಿದ್ದರು.

ಸಾಂಸಾರಿಕ ತಾಪತ್ರಯಗಳಿಂದಾಗಿ ಅವರು ಪ್ರಸಂಗಗಳಲ್ಲಿ ಭಾಗವಹಿಸುವುದನ್ನು ಬಿಟ್ಟರೂ ಯಕ್ಷಗಾನ ಮಹಾಕಾವ್ಯಗಳ ನಿತ್ಯ ಪಠಣ ಬಿಟ್ಟಿರಲಿಲ್ಲ. ಜೀವಿತದ ಕೊನೆಯವರೆಗೆ ಅದೊಂದು ವ್ರತದಂತೆ ನಡೆಸಿಕೊಂಡು ಬಂದರು.

ನಮ್ಮ ಮನೆಯಲ್ಲಿ ಯಕ್ಷಗಾನ ವೇಷಭೂಷಣ ಹಾಕಿಡಲು ಒಂದು ಉದ್ದನೆ ಕಟ್ಟಿಗೆಯ ದೊಡ್ಡ ಪೆಟ್ಟಿಗೆಯಿತ್ತು. ಅದರಲ್ಲಿ ಸಂಪೂರ್ಣ ಪ್ರಸಾಧನ ಸಾಮಗ್ರಿಗಳಿರುತ್ತಿದ್ದವು. ಅದಲ್ಲದೆ ನಾಲ್ಕೈದು ದೊಡ್ಡ ಬೆತ್ತದ ಪೆಟಾರೆಗಳು ಎರಡು ಚಿಕ್ಕ ಪೆಟಾರೆಗಳು ಇದ್ದವು.

ಅವರು ಎಂಬತ್ತೊಂದು ವರ್ಷ ಬದುಕಿದರು ಅವರಿಗೆ ನಿತ್ಯ ಮುಂಜಾನೆ ದಿನ ಪತ್ರಿಕೆ ಓದುವ ಅಭ್ಯಾಸವಿತ್ತು. ಅವರು ಸುತ್ತಿರಲಿಲ್ಲ. ಅವರು ನಮ್ಮನ್ನು ಬಿಟ್ಟಗಲುವವರೆಗೆ ದವಡೆಯ ಎರಡು ಹಲ್ಲುಗಳು ಬಿಟ್ಟರೆ ಮಿಕ್ಕ ಹಲ್ಲು ಗಟ್ಟಿಮುಟ್ಟಾಗಿಯೇ ಇದ್ದವು.

ನಮ್ಮ ಮನೆತನದಲ್ಲಿ ನನ್ನ ಚಿಕ್ಕಪ್ಪ ವಿನಾಯಕ ಶೇಣ್ವಿ ಸ್ವಾತಂತ್ರ್ಯ ಚಳುವಳಿಯಲ್ಲಿ ನೇರವಾಗಿ ಭಾಗವಹಿಸಿ ಜೈಲಿಗೆ ಹೋಗಿ ಬಂದಿದ್ದಾರೆ. ನನ್ನ ತಂದೆಯವರು ಪರೋಕ್ಷವಾಗಿ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸುವವರನ್ನು ಬೆಂಬಲಿಸುತ್ತಿದ್ದರು. ಪಾಯಶಃ ಅವರಿಗೆ ಯಕ್ಷಗಾನದ ಹುಚ್ಚು ಹಿಡಿಯದಿದ್ದರೆ ಚಹದಂಗಡಿಯ ಜವಾಬ್ದಾರಿ ಇರದಿದ್ದರೆ ಅವರೂ ಜೈಲಿಗೆ ಹೋಗುತ್ತಿದ್ದರೇನೋ !.

ಮುಂದೆ ಇವರು ತಮ್ಮ ಜೀವಿತದ ಕೊನೆಯ ದಿನಗಳಲ್ಲಿ ಗೋವೆಗೆ ಹೋಗಿ ನೆಲೆಸಿ ಕನ್ನಡಿಗರನ್ನು ಸಂಘಟಿಸಿ "ಗೋವಾ ಕನ್ನಡ ಸಂಘ" ಕಟ್ಟದರು. ಕನ್ನಡ ಶಾಲೆಗಳನ್ನು ತೆರೆದರು. ಕನ್ನಡ ವಾಚನಾಯ ಆರಂಭಿಸಿ ಕನ್ನಡ ಚಟುವಟಿಕೆಗಳನ್ನು ಹುರಿದುಂಬಿಸಿದರು. ಆ ಕಾಲದಲ್ಲಿ ನಾನೂ ಅವರೊಂದಿಗೆ ಹೆಗಲಿಗೆ ಹೆಗಲು ಕೊಟ್ಟು ದುಡಿದಿದ್ದೇನೆ.

ಅವರ ಕನ್ನಡ ಪ್ರೇಮ, ಯಕ್ಷಗಾನ ಆಸಕ್ತಿ ಸಾಮಾಜಿಕ ಕಾಳಜಿ, ಓದುವ ಅಭಿರುಚಿ ಅವರಿಂದ ನನಗೆ ಬಂದವು ಎಂದರೆ ಅಪ್ರಸ್ತುತವಲ್ಲ.

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಪ್ರೊ ಎಂ ಎ ಹೆಗಡೆಯವರು ಆಸಕ್ತಿಯಿಂದ ಎಂಬತ್ತೇಳು ವರ್ಷಗಳ ನಂತರ ಇವೆರಡು ಯಕ್ಷಗಾನ ಪ್ರಸಂಗಗಳು ಬೆಳಕು ಕಾಣುತ್ತಿವೆ. ಸ್ವತಃ ಯಕ್ಷಗಾನ ಕಲಾವಿದರಾದ ಪ್ರೊ. ಎಂ ಎ ಹೆಗಡೆಯವರಲ್ಲಿ ಗುಣಗಾಹಿತ್ಯ ಇದೆಯೆನ್ನುವುದಕ್ಕೆ ಈ ಪ್ರಸಂಗಗಳ ಮರುಮುದ್ರಣವೇ ಸಾಕ್ಷಿ ಇದಕ್ಕೆ ಬೆಂಬಲವಾಗಿ ನಿಂತವರು ಅಕಾಡೆಮಿಯ ರಿಜಿಸ್ಟ್ರಾರ್ ಎಸ್ ಹೆಚ್ ಶಿವರುದ್ರಪ್ಪನವರು ಇವರಿಗೆ ನನ್ನ ಕೃತಜ್ಞತೆಗಳು.

ಸಂಪಾದಕರು
ಶಾ. ಮಂ. ಕೃಷ್ಣರಾಯ
ನಂ.500, ಸಾಹಿತ್ಯ ಸದನ, 11ನೇ ಕ್ರಾಸ್,
ಗಿರಿನಗರ, ಬೆಂಗಳೂರು 85
ಮೊ: 94817–88832

# ಪರಿವಿಡಿ

1. ರತ್ನಾವತೀ ಕಲ್ಯಾಣ .... 9

2. ಉಷಾಪರಿಣಯ ..... 51

॥ ಶ್ರೀ ॥

ಶ್ರೀ ಮನ್ಮಹಾಭಾರತದೊಳಗಿನ

ಯಕ್ಷಗಾನ

# ರತ್ನಾವತಿ ಕಲ್ಯಾಣ

## (ಕರ್ಣ ವಿವಾಹವು)

ಮಂಜಯ್ಯಾ ಗಣಪತಿ ಶೇಣ್ವೆ ಅಂಕೋಲಾ ಇವರು

ಕಾರವಾರದ ಸೆಂಟ್ರಲ್ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಮುದ್ರಿಸಿ

ಪ್ರಕಟಿಸಿದರು

ಪ್ರಥಮ ಮುದ್ರಣ

1932

# ರತ್ನಾವತಿ ಕಲ್ಯಾಣ

## ॥ ಶ್ರೀ ॥

## ॥ ಶ್ರೀ ಮಹಾಲಕ್ಷ್ಮಿ ದಾಮೋದರ ಪ್ರಸನ್ನಃ ॥

### ॥ ಭಾಮಿನಿ ॥

ಮಂಡೆಯೊಳು ಶರವಿಹನ ಗೃಹದೊಳ । ಹಿಂದು ಗೊಂಡಿರುವವನ ವೈರಿಯೊಳ್ । ಖಂಡಮನವಿರುವವಳ ಸುತನಿಂ । ಬಂಧಿಸಿಹನಿಂದಾ । ಭಂಡತನದಲಿ ಜೀವಗಳೆದ ಪ್ರಚಂಡನಗ್ರಜೆ ಬಸುರಜಾತಳ । ಗಂಡನಯ್ಯನ ಸಖನಸಖಸುತಗೆರಗಿ ಕೈಮುಗಿವೇ ॥ 1 ॥

### ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ಧರಣಿಪತಿ ಜನಮೇಜಯಂಗಾ । ಕರುಣ ನಿಧಿಮುನಿಪುಂಗ ಭಾರತ । ಚರಿತವನು ಪೇಳ್ತಿರಲಿಕೊಂದಿನ । ಅರಸ ನುಡಿದಾ ॥ 1 ॥ ಚಿತ್ತವಿಸು ಮುನಿ ತಿಲಕ ಕುಂತಿಗೆ । ಮತ್ತೆ ತರಣಿಜ ಜನಿಸಿ ಕುರುಕ್ಷಿತಿ ॥ ಪೋತ್ತುಮನ ತಾನ್ಯಾಕೆ ಸೇರಿದ । ಪಾರ್ಥನೊಡನೇ ॥ 2 ॥ ವೈರವೆಂತವಗವನ ಸಹಯದಿ । ಗೌರಭೂಪನ ಸುತೆಯ ವಿವಹವು ॥ ಕೌರವನ ಸಖಿಗೆಂತು ಘಟಿಸಿತು । ವೈರವಿಡದೇ ॥ 3 ॥ ಅರುಹಬೇಕೆಂದೆನುತಲಾಕ್ಷಣ । ಚರಣಕೆರಗಲು ಮನ್ನಿಸುತ ಮುನಿ ॥ ವರನು ಶ್ರೀಶನ ನೆನೆದುಸುರ್ದನು ಧರಣಿಪನೊಳೂ ॥ 4 ॥

### ॥ ವಾರ್ಧಿಕ್ಯ ॥

ಇಂದು ಕುಲತಿಲಕ ಜನಮೇಜಯನೆ ಕೇಳ್ ಭುವನ । ಸಿಂಧುದೆಸೆಯೊಳಗಿಹುದು ಕುಂತಲಾಪುರವು ಸೊಬ । ಗಿಂದಲೀ ಧರೆಯೊಳಿಹ ಪುರವರಕೆ ಮಿಗಿಲೆನಿಸಿ । ನಿಂದಿಪುದು ಸುರಲೋಕವಾ ॥ ಕುಂದುಕೊರತೆಯ ನರಿಯದಾಪುರವ ನಾಳ್ವ ನಲ । ವಿಂದನೃಪ ಕುಂತಳೇಶ್ವರ ಸಕಲ ಸಾಮ್ರಾಜ್ಯ । ದಿಂದ ಮಣಿವರ್ಮ ಗುಣವರ್ಮರೆಂಬುವ ರೀರ್ವ ಮಂದಿ ಮಂತ್ರಿಗಳು ಸಹಿತಾ ॥ 1 ॥

### ॥ ರಾಗ । ಕಾಂಬೋಧಿ । ಝಂಪೆ ॥

ಧರಣಿಪತಿ ಕೇಳ್ ಬಳಿಕ । ಕುಂತಳೇಶ್ವರ ನಾಳ್ವ ಧರೆಯೊಳಿನಿತಿಲ್ಲ ಕಲ್ಮಷವೂ ॥

ಹರಿಯಸದ್ಭಕ್ತರೀ ॥ ಪುರದ ಪ್ರಜೆಗಳು ಪಾಪ । ವಿರಹಿತರು ಶಾಂತಮತಿಯುತರೂ ॥ 1 ॥ ಕಳವು ಕೊಲೆಹಾದರವು । ಪಳಿವುಪೊದ್ದದು ಪುರದ । ಲಲನೆಯರು ಸುರಸ್ತ್ರೀಯರಂತೇ ॥ ಸುಳಿವರ್ಸ್ಯೆ ಸೊಬಗದೇನೆಂಬೆ ಮೌಕ್ತಿಕರತ್ನ । ಬೆಳಗು ಪಸರಿಸೆ ಭುವನಚಯವಾ ॥ 2 ॥ ಎತ್ತನೋಡಿದಡತ್ತ ಕತ್ತಲೆಗೆ ತೆರಪಿಲ್ಲ । ಮುತ್ತು ಮಾಣಿಕದ ಪ್ರಭೆಗಳಲೀ ॥ ಸುತ್ತವಳೆಯದಿ ಕುರುಜು ತೋರಣಗಳೆಸದೀರ್ದು । ದರ್ತಿಯಿಂದಧಿಕ ವೈಭವದೀ ॥ 3 ॥ ಅರಸನಿಂದ್ರನ ತೆರದಿ । ಸುರುಚಿರದ ಪೀಠದೊಳು । ಕರಣಿಕರು ಸಹಿತ ಸಭೆವೆರಸೀ ॥ ಯಿರಲು ನಡೆತಂದಳಾಕ್ಷಣದಿ ಜನಕನ ಪದಕೆ । ಯರಗಿದಳು ಕುಂತಿ ಹರುಷದಲೀ ॥ 4 ॥

## ॥ ರಾಗ । ಕೇತಾರಗೌಳ । ಅಷ್ಟತಾಳ ॥

ತನುಜೆಯ ಕಾಣುತ್ತ ಮನಹರುಷವಾಂತು । ವಿನಯದೀ ಮುದ್ದಿಸುತಾ ॥ ವನಜಾಕ್ಷಿ ಸಭೆಗೈದ ಕಾರಣ ವೇನೆನೆ । ಜನಕಗೆಂದಳು ನಗುತಾ ॥ 1 ॥ ತಂದೆ ಕೇಳೈ ಮಾರನಧಟ ಸೈರಿಸಲಾರೆ । ಬೆಂದುದೆನ್ನೊಡಲುರಿಯಾ ॥ ನಂದಿಸಲ್ಯೆದುವೆ ಶರಕೇಳಿಗಾಜ್ಞೆಯ । ನಿಂದೀವುದೆನಗೆ ಜೀಯ ॥ 2 ॥ ತರಳಾಕ್ಷಿ ಕೇಳ್ ವನದೊಳು ಚರಿಪುದು ದುಷ್ಟ । ಕರಡೀ ಕಾಡ್ಕೋಣಗಳೂ ॥ ಮರೆಯಮಾತಲ್ಲನೀ ॥ ನೋಡುತಂಜುವೆಯೆನೆ । ಮರಳಿ ಜನಕಗೆಂದಳೂ ॥ 3 ॥ ಮಂದಗಮನೆಯರ । ಕೂಡಿ ಪೋಗುವೆಯೋರ್ವ । ಳಿಂದು ತೆರಳೆಯನ್ನನೂ ॥ ವಂದಿಸುವೆನು ದಯದಿಂದನೀ ಕಳುಹೆನ । ಲೆಂದ ಧರಣಿನಾಥನೂ ॥ 4 ॥ ಬಾಲಕೀ ಬಳಲದೀರ್ತೆರಳು ನೀ ಸಖಿಯರ । ಜಾಲಸಹಿತವನಕೆ ॥ ನಾಳಿ ನುದಯದೊಳಗೆನಲೊಪ್ಪುತೊಂದಿಸೆ । ಲೋಲಾಕ್ಷಿ ಪಿತಪದಕೇ ॥ 5 ॥ ತೆರಳೀದಳಾಕ್ಷಣ ನಿಜಗೃಹಕಾದಿನ । ದಿರುಳುಕಳೆದು ತನ್ನಯಾ ॥ ವರಗೆಣತಿಯರನುವೆರಸುತ್ಯೆದಳು ವನ । ಕ್ಕಿರದೆ ಕೇಳ್ ಜನಮೇಜಯಾ ॥ 6 ॥ । 15 ।

## ॥ ರಾಗ । ಪಂತುವರಾಳಿ । ಅಷ್ಟತಾಳ ॥

ಬಂದಳಾಕ್ಷಣ ಜಲಕ್ರೀಡೆಗೇ । ನಲ । ವಿಂದಬಲೆಯರ್‌ಕೂಡಿ ಕಡೆಗೇ ॥ ಮಂದಗಮನೆ ಕುಂತಿಸರಸವನಾಡುತ್ತ । ಚಂದೀರವದನೆಯರ್‌ಚಲುವದೋರುತಲಿ ॥ 1 ॥ ನಡೆತಂದು ನೋಡಿದಕೊರ್ಣವಾ । ಅಲ್ಲಿ । ಬಿಡಿಸುತ್ತ ಸೀರೆಯಕಣವಾ ॥ ತಡಿಯೊಳಗಿರಿಸುತ್ತ ಮೆಲ್ಲನಿಳಿದು ತಮ್ಮ । ಬೆಡಗಿನೊಳಾಡಿದರತಿ ಪ್ರೌಢಿಜನವಾ ॥ 2 ॥ ಬಡುನಡು ಬಳುಕುತ್ತಲಿರಲೂ । ತಮ್ಮ । ಕುಡಿವೊಲೆ ಕುಣಿವ ಭಾರದೊಳು ॥ ಸಡಗರದಿಂದೋರ್ವರೋರ್ವರಿಂಗುದಕವ । ಬಿಡದೆ ಚೆಲ್ಲಾಡುತ್ತಲತಿವಿಭವದೊಳೂ ॥

3 ॥ ವಾರೀಯೊಳಿಂತುಮೀಯುತಲೀ । ತಡಿಯೇರುತೆಲ್ಲರು ಬೆಡಗೀನಲೀ ॥ ನಾರಿಕುಂತಿಯ ಮತವನುಸರಿಸೆಲ್ಲರು । ಸೀರೆಯ ನಡುವೀಗೆ ಸೇರಿಸಿ ವಹಿಲದೀ ॥ 4 ॥ । 19 ।

## ॥ ವಾರ್ಧಿಕ್ಯ ॥

ಧರಣೀಂದ್ರಕೇಳ್‌ಬಳಿಕ ಕುಂತಿಕೊಣನೊಳು ಮಿಂದು । ಹರುಷಗೊಳ್ಳುತ ಪಿಂತೆ ಪಡದೀರ್ದ ವರವೈದ । ಪರಿಯ ನೋಡುವೆನೆನುತಲೊಂದು ಮಂತ್ರದೊಳಾಗ । ತರಣಿಯಂ ಜಪಿಸುತಿರಲೂ ॥ ಕರುಣಮಂಗೈದ ರವಿಯೇನೆಂಬೆ ಜನನಾಥ । ತರಳನೇತ್ರೆಯ ಕರ್ನದೊಳಗೆ ಜನಿಸಿದಬಾಲ । ತರಣಿಮಂಡಲದಂತೆ ಮಿನುಗುತಿರಲಾ ಶಿಶುವ । ಸುರನಿಕರ ಕಂಡುನಲಿಯೇ ॥ 1 ॥

## ॥ ರಾಗ । ಮಾರವಿ । ಯೇಕತಾಳ ॥

ಕಿವಿಯೊಳಗೊಗೆದ್ದಿಹ ಕುವರನಕಾಣುತ್ತ । ತವಕದಿಬಾಲಕಿಯೂ ॥ ಆವಯವವೀಕ್ಷಿಸುವಂತೆಂದಳು ಸಖಿಯರೋಳ್ । ತವಮನ ಸಂಶಯವೂ ॥ 1 ॥ ಮದುವೆಗಳಿಲ್ಲದೆ ಮಗನನು ॥ ಪಡದೀಹ । ಸುದತೀಯನುತಲೆಲ್ಲಾ ॥ ವಿಧವಿಧ ಪಳಿವರು ಮಮಪುರಕೊಯ್ದರೆ । ಚದುರೆ ಕೇಳ್ ತರವಲ್ಲಾ ॥ 2 ॥ ಅದರಿಂದೀತನಿಲ್ಲಿರಿಸುವೆ ಜೋಕೆಯೋಳ್ ॥ ಪದುಮನಯನೆ ಪುರದೀ ॥ ವುದಿಸದೀ ವಾರ್ತೆಯ ನೆನುತತಿವಿನಯದೀ । ಮುದದಿ ಗಂಗೆಯಕರದೀ ॥ 3 ॥ ಪಾಲಿಸು ಕರುಣದಿ ತಾಯೆ ಎನ್ನಯ ಮುದ್ದು । ಬಾಲನ ನೀ ದಯದಿ ॥ ಲೋಲಾಕ್ಷಿ ನಾ ಬಂದು ಕೇಳಲು ಕೊಡು ಸುಪ್ರ । ಶೀಲನ ನೀ ಮುದದೀ ॥ 4 ॥ ಯಂದತಿವಿನಯದಿ ಗಂಗೆಯ ಕರದೊಳ । ಗಂದು ಬಾಲನ ಕೊಡುತಾ ॥ ಚಂದಿರಮುಖಿ ನಡೆತಂದಳು ॥ ಪುರಕೆ ಸಾ । ನಂದದೀ ಸಖಿಸಹಿತಾ ॥ 5 ॥

## ॥ ಭಾಮಿನಿ ॥

ಅರಸ ಕೇಳ್ ಬಳಿಕಿತ್ತ ಬಾಲನು । ಸುರನದಿಯಮಧ್ಯದೊಳಗಿರುತಿರೆ । ಚರಿಸುತಿಹ ಝುಷವೊಂದು ನುಂಗಲು ಬೆಳೆದುದರದೊಳೂ ॥ ಭರದಿ ಬಲೆಯನು ಬೀಸಲಂಬಿಗ । ಭರಿತಗರ್ಭದ ಮತ್ಸ್ಯ ಸಿಲುಕಲು । ಹರುಷದೊಳು ನಡೆತಂದು ಮಂದಿರಕೆಂದ ಕಾಂತೆಯೊಳೂ ॥ 1 ॥

## ॥ ರಾಗ । ಪಂಚಗಾತಿ ಮಟ್ಟತಾಳ ॥

ನೋಡೆ ರಮಣಿ ರಾಧೆ ನಾನು ತಂದವಸ್ತುವಾ । ಕೂಡಿ ಗೆಣೆಯರನ್ನು ಪೋಗಿ ಪಿಡಿದ ಮತ್ಸ್ಯವಾ ॥ ಜೋಡೊಳಿಂದು ಕೂಡಿ ಮೆಲುವದಿದರ ಮಾಂಸವಾ ॥ ಮಾಡು ರುಚಿಯು ಬರುವ ತೆರದಿ ಝಷದ ಪಾಕವಾ ॥ 1 ॥ ತಂದ ಮೀನದಿನದಿ ಮೆಲಲು ಗೃಹದ ಮಧ್ಯದೀ ॥ ಒಂದುಬಗೆಯ ವಸ್ತುವಿಲ್ಲ ಕೇಳು ತ್ವರಿತದೀ ॥ ಮಂದೆಸೆಯೊಳಿರುವ ರಾಜ ಭಟರಿಗೀಯುತಾ ॥ ಬಂದ ಹಣದಿ ತೋಷಪಡುವೆನೆನಲು ಕೇಳುತಾ ॥ 2 ॥ ಖಂಡ ಬೆಳೆದ ಮೀನಮಾರಲಿಂದು ಪೇಳ್ವೆಯಾ । ಪುಂಡತರುಣಿ ಸಾಕಿದೆಲೆಗೆ ನಿನ್ನ ನೀತಿಯಾ ॥ ಕೊಂಡು ಭರದಿ ಪಾಕಮಾಡು ಶೇಷಮುಳಿಯದಾ । ತುಂಡುತುಣುಕುಸಹಿತಲಿಕ್ಕು ಎನಲುಕೇಳ್ದದಾ ॥ 3 ॥ ಭರದಿ ಕೂರಸಿಯನು ಕೊಂಡು ಮತ್ಸ್ಯನುದರವಾ । ಘರಘರನೆ ಶೀಳುತಿರಲುತರಣಿಬಿಂಬವಾ ॥ ಪರಿಕಿಸುತಲಿದೇನಿದೆನುತ ಮತ್ಸ್ಯನುದರವನೂ । ಎರಗಿ ನೋಡಿ ಶಿಶುವ ಕಂಡು ಮನದಿ ಬೆರಗನೂ ॥ 4 ॥ ಗೊಳುತಲಬಲೆ ತಂದು ತನ್ನ ರಮಣನಿದಿರೊಳೂ । ಚಲುವಕರದೊಳಿತ್ತು ಪೇಳ್ದಳವನೊಳೂ ॥ ಅಲಸದಿವನಪರಿಯ ನೋಡು ಮತ್ಸ್ಯನುದರದೀ । ಸುಲಭದಿಂದಲೀರ್ದನಿದರ ಕೇಳಿ ಹರುಷದಿ ॥ 5 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ಕಾಂತೆಯಿತ್ತಿಹ ಶಿಶುವನೋಡುತ । ತಾಂ ತವಕದೊಳಗೆಂದನಂಬಿಗ । ಕಂತುಸನ್ನಿಭನಹಹ ಈತನ । ದಂತಿಪುರದಾ ॥ 1 ॥ ಧರಣಿಪಾಲನಿಗೀಯಲತಿಮುದವೆರಸಿಬೇಡಿದುದೀವನೆನುತಲಿ । ತರುಣಿಯೊಡನರು ಹುತಶಿಶು ಸಹ । ಭರದೊಳೈದೀ ॥ 2 ॥ ಇರಲು ವಡ್ಡೋಲಗಗದಿ ಭೂವರ । ಗೆರಗುತಂಬಿಗಶಿಶುವನೀಯುತ । ವರದನಾಗತಿಶಯನಚರಿತವ ಭರದೊಳಂದೂ ॥ 3 ॥

## ॥ ರಾಗ ॥

ಧೊರೆರಾಯ ಬಿನ್ನಹ ಮಾಣ್ಕು । ಒಳ್ಳೆ । ತರಳನ ತಂದಿಲ್ಲಿ ಬಚ್ಚಿದೆಕಾಣ್ಕೊ ॥ ಪರಿಪರಿ ಗೆಳೆಯರಕೂಡ್ಯಾಕಿಸೀ ನಾವೆಲ್ಲಾ । ತ್ವರಿತದಿ ಶರಧಿಯೋಳ್ ಬೀಸ್ಯಾಕಿಸಿಬಲೆಗಳಾ ॥ 1 ॥ ಜಳಿಹೆಚ್ಚು ನದಿಯೊಳು ಕೇಳ್ಕೊ । ವಂದು । ಮೀನ್ವಂದು ಸಾಗಡಿಬಲೆಯೊಳು ಸಿಲ್ಕು ತೆಳದೋಯ್ದು ಸತ್ವದಿನೋಡ್ಯಾಕಿಸಿನಾವೆಲ್ಲಾ । ರೆಳದೇವುಮೇಲೆಕ್ಕೆಕೂಡ್ಯಾಕಿಸಿಸತ್ವದಿ ॥ 2 ॥ ಮೆಲಬೇಕು ಪಾಕಮಾಡ್ಯಾಕಿಸಿ । ಯೆಂದು । ವಲುಮೆಯೋಳ್ ಗೃಹಕೆ ತಂದ್ಯಾಕಿಸಿ ॥

ಲಲನೆಯೋಳ್ ಪೇಳಲು ಸೀಳ್ಕಾಸಿಮೀನಿನ । ವಳಗೀಹಶಿಶುವನುನೋಡ್ಕಾಸಿನಲಿವುತಾ ॥ 3 ॥ ತಂದೆನ್ನಾಕರದಿಕೊಟ್ಕಾಸಿ । ನಲ । ವಿಂದಯೋಚಿಸಿದೆವ್ ಕೂಡ್ಕಾಸಿ ॥ ಕಂದ ಸಲುವನಿವ ಸನ್ನಿಧಿಗೆಂದ್ಕಾಸಿ । ತಂದೆಧೊರೆಯೆಕೊಡ್ಕುತ್ರಷೆಗೆಬಾಯಾರ್ಕಾಸೀ ॥ 4 ॥

## ॥ ವಾರ್ಧಿಕ್ಯ ॥

ಪುಡವಿಪತಿ ಕೇಳ್ದಲ್ಯೆ ಧೃತರಾಷ್ಟ್ರನಂಬಿಗನ । ನುಡಿಗೇಳ್ದು ತರಿಸಿ ಧನಕನಕವಸ್ತ್ರವನಿತ್ತು । ದೃಢಗ್ಯೆಯ್ದು ತರಳನಿಗೆ ಜಾತಕರ್ಮವ ಮಾಳ್ಪುದೆನುತಲಂಬಿಗನಕಳುಹಿ । ತಡೆಯದಾಕ್ಷಣದೊಳಗೆ ಬರಿಸಿದಂಜೋಯಿಸರ । ಗಡಣಮಂ ಮನ್ನಿಸುತ ಪೆಸರಿಟ್ಟರ್ಭಕಗೆ । ಪೊಡವಿಯೊಳು ಧೀರಕಲಿಕರ್ನನೆಂದೆನುತಾಗ ಹೊಡಿಸಿದರು ಭೇರಿಗಳನೂ ॥ 1 ॥

## ॥ ರಾಗ । ಕಾಂಬೋಧಿ । ಝಂಪೆ ॥

ಗಿಳಿದೇರರೂಪದಲೀ ಚಳಕತನವನು ತೋರೀ ಚಳಿಗದಿರನಂದದಲಿ । ಬೆಳದು ಕಲಿಕರ್ನಾ ॥ ಚಲಿತವಾದುದುಮನವು । ಅಲಗುವಿದ್ಯವಕಲಿಂಯು । ಲೆಳಸಿಮನದೊಳುಪೊರಟನಾಗಾ ॥ 1 ॥ ಬಂದು ದ್ರೋಣನ ಚರಣ । ಕಂದು ನಮಿಸುತ ಬಾಣ । ದಂದವರುಹುವದೆನಗೆಯಿಂದು ನೀ ದಯದಿ ॥ ಯಂದೆನಲು ಕೇಳ್ದು ಕಡು । ಕೋಪದೊಳು ದ್ರೋಣಬಳಿ । ಕೆಂದನಾತಗೆ ಮೊಗವತಿರುಹಿ ॥ 2 ॥ ಅಂಬಿಗನ ಮಗನೆಂದು । ಅರಿಯದೀರ್ದಪೆವೆ ನಾವ್ । ಅಂಬುಧಿಯ ಬಳಿಗತ್ತ ಸಾರೂ । ಅಂಬುವಿದ್ಯಗಳ್ಯಾಕೆ । ಅರುಹುವವರಾವಲ್ಲ ಡಂಬಕದ ಮಾತಿದ್ಯಾಕೆಂದಾ ॥ 3 ॥ ಕೇಳಿದಾಕ್ಷಣ ಕೋಪವೇ । ಳ್ಯೆಸಿತೇನೆಂಬೆ । ಭಾಳನೇತ್ರನ ತೆರದಿ ಬಳಿಕ ಸೂಠಿಯಲಿ ॥ ಬೀಳುಗೆಡದಪೆನಿವನನೆಂದು ರವಿತನಯ ಮನ । ಮೇಲುವರಿಯಲು ದ್ರೋಣ ಮರಳೆ ॥ 4 ॥ ತೆರಳಿದನ ಕಾಣುತಲಿ । ಭರದಿ ನಡದನು ಕರ್ನ । ಯಿರಲಿ ಪ್ರಾಣವನುಳುಹಿಕೊಂಡು ತಾನೆನುತಾ ॥ ಚರಿಸುತಲೆ ಧರಣಿವನವನು ಕಂಡು ಭಾರ್ಗವನ । ಅರರೆಪೊಸತೆಂದು ಮನದೊಳಗೆ ॥ 5 ॥

## ॥ ಭಾಮಿನಿ ॥

ಉಗ್ರತರರೂಪದೊಳಗೆಸದಿಹ । ಭಾರ್ಗವನನೋಡುತಲಿ ರವಿಸುತ ॥ ಅಗ್ರಸರವನು ತಡವುತೆಂದನು ಕ್ಷತ್ರಿರೂಪದಲಿ ॥ ಶೀಘ್ರದಲಿ ನಾ ಪೋದಡೀಕ್ಷಣ । ನಿಗ್ರಹಿಸುವನು ಯನುತ ಬುಧಕುಲ । ದಗ್ರಣಿಯ ವಟುವೇಶದಲಿ ನಡೆತಂದು ವಂದಿಸಿದಾ ॥ 1 ॥

## ॥ ರಾಗ । ಮಾರವಿ । ಯೇಕತಾಳ ॥

ಚರಣದೊಳೆರಗಿದ ತರಳನ ಕಾಣುತ । ಕರುಣದಿ ಭಾರ್ಗವನೂ ॥ ಶಿರವನು ನೆಗಹಿ ನಿಂನಿರವೇನೆನಲಿನ । ತರಳನು ಪೇಳಿದನೂ ॥ 1 ॥ ಕರುಣಿಸು ಭಕ್ತರ ಪೊರವ ಮಹಾತ್ಮನೆ । ಶರಧನುವಿದ್ಯಗಳಾ ॥ ಧರೆಯೊಳುಬಹುಬಲಸುರರುಸಹಿತಹಿಂ । ಜರಿವವನಿಷ್ಟಗಳಾ ॥ 2 ॥ ಯಂದು ಸಂಸ್ತುತಿಸಲು ಭಾರ್ಗವ ಕರುಣದೊ ॥ ಳಂದು ಬಾಲಗೆ ದಯದಿ ॥ ವಂದುಳಿಯದೆ ಶರದ್ವಂದವನರುಹಿದ । ಕುಂದೆಣಿಸದೆ ಮುದದಿ ॥ 3 ॥ ಕಲಿತುವುಪಾಸನ ಕರ್ನನು ಸತ್ವದಿ । ಯಿಳೆಯೊಳಗ್ಗಳನೆನಿಸಿ ॥ ಮಲಗಿದ ಭಾರ್ಗವನರ್ಕಜನೂರಲಿ । ಚಲುವಶಿರವನಿರಿಸಿ ॥ 4 ॥

## ॥ ಭಾಮಿನಿ ॥

ಧರೆಯೊಳಿಹಕ್ಷತ್ರಿಯರಕುಲವನು । ತರಿದಭಾರ್ಗವನಿಂದುಕರ್ಣಗೆ । ವರದನಾದನು ಪುಣ್ಯದಯವೆಂತುಟೊ ಭಾನುನಂದನನಾ । ಅರಸಕೇಳ್‌ಬಳಿಕಿತ್ತಪಾಂಡವ ॥ ರುರುಬಲಾನ್ವಿತಕೌರವರು ಗಜ । ಪುರದಿ ಜನಿಸುತ ಅಳ್ಕಜದಿ ಹೊಯ್ದಾಡುತಿರೆಬಿಡದೆ ॥ 1 ॥

## ॥ ರಾಗ । ಸೌರಾಷ್ಟ್ರ । ತ್ರಿವೆಡೆ ॥

ಯಿತ್ತ ದ್ವಾರಕಪುರದಿ ಶ್ರೀಪುರು । ಷೋತ್ತಮನು ಭಾಮೆಯರಮೇಳದಿ । ಅರ್ತಿಯಿಂದಿರುತಿರಲು ತಿಳಿದನು । ಕೃತ್ಯವದನೂ ॥ 1 ॥ ಧೀರನಾದನೆ ತರಣಿನಂದನ । ಮೂರುಲೋಕದ ವಿಜಯನಿಂದಧಿ । ಕಾರಿಯಾದನೆ ಯನುತವ್ಯಾಕುಲ । ಭೋರನುದಿಸೆ ॥ 2 ॥ ಕಂದಿದಾನನನೋಡಿ ರಮಣನ । ಸುಂದರಾಂಗವ ಬಿಗಿದು ಭಾಮೆಯು । ಯಿಂದಿದೇನತಿದುಗುಡ ಮಗಧನು । ಬಂದನೇನ್ನೈ ॥ 3 ॥ ಯನಲು ಕೇಳುತಲಾಗ ರುಗ್ಮಿಣಿ । ಮನದಿಖಾತಿಯನೆತ್ತಿಭಾಮೆಯೊ । ಳನುಸರಿಸುತುಸುರಿದಳು ಪಿಂದಣ । ಮುನಿಸಿನೊಳಗೆ ॥ 4 ॥

## ॥ ರಾಗ ನೀಲಾಂಬ್ರಿ । ಅಷ್ಟತಾಳ ॥

ಚಂದಿರಾನನೆಯೆ ಮನ । ಯಾವಾಗಲು । ಕುಂದೆಣಿಸುವೆ ಕಾಂತನಾ । ತಂದಳುನೀನೊಬ್ಬಳೇನೆ । ಮಾಗಧನೆಲ್ಲಿ । ಬಂದನು ಪೇಳೆಜಾಣೆ ॥ 1 ॥ ಮುಂದರಿಯದೆ ಪೇಳ್ವೆಯ । ಅಕ್ಕಯ್ಯನಾ । ನೆಂದ ಸೊಗಸಪರಿಯಾ । ಯಿಂದು ನೀನರಿಯೆ ವಿಲಾಸಕ್ಕಾನೆಂದೆನು

। ಸುಂದರಾಂಗಿಯೆಕೇಳವ್ವಾ ॥ 2 ॥ ತರುಣಿಯರ ಮಧ್ಯದಿ । ಮಾಗಧನೆಂಬ । ಬಿರುನುಡಿಗಳ ಮುದದಿ । ಶರಜಾಕ್ಷಿಯಂಬರೆ ಸಲುಗೆ ಹೆಚ್ಚಾಯಿತು । ಹರಿಯಕರುಣದಯದಿ ॥ 3 ॥ ಬಿಡು ನಿನ್ನ ಬಡಿವಾರವಾ । ರಾಜರಾಜಮಡದಿಯೊಳಿಹಕುಜವಾ । ಪುಡವಿಗೆ ಸಲುಗೆಯೊಳ್ ತರಿಸಲೆನ್ನಯಪುಣ್ಯ । ದೆಡೆಯೊಳು ಮುಡಿದೆಪುವಾ ॥ 4 ॥ ಬಲ್ಲೆ ಚಲುವೆ ನಿನ್ನನು । ಕಾಂತನ ಮುನಿ ನಲ್ಲಗೆ ದಾನವನೂ । ವಲ್ಲಭೆಯಾಗಿ ನೀನಿತ್ತೆ ನಾ ಬಿಡಿಸಲು । ನಲ್ಲನೆಂದುಸುರ್ವೆ ನೀನೂ ॥ 5 ॥ ಕಡುಜಾಣೆ ಕಾಣೆ ನೀನು । ಅಣ್ಣಯ್ಯನ ತಡದು ಬಂಧಿಸುತಾತನು । ದೃಢದಿಜುಟ್ಟವಕೋಯ್ಸಿ ಚೈದ್ಯನ ಸೇರದೆ । ಮಡದಿಯಾಗಿರುವೆನೀನೂ ॥ 6 ॥ ಹಂದೆಕೇಳಾನೆಂಬೆನು । ಶತಾಧನ್ವಬಂದು ಲಾವುಕನಾತನು । ಕೊಂದಿರ್ದ ಪರಿ ಮರತಿಂದೆನ್ನರಮಣನ । ಬಂಧಿಪೆ ಗುಣದಿ ನೀನೂ ॥ 7 ॥

## ॥ ವಾರ್ಧಿಕ್ಯ ॥

ಜಡಜವುಖಿ ರುಗ್ಮಿಣಿಯು ವಾತಿಗಾ ಭಾವೆಪ್ರತಿ । ನುಡಿವನಿತರೊಳ್ಪಿಡಿದುತಕ್ಕೈಸುತಾಗಲಿಂ ಗಡಲಳಿಯುಲಿಳಿಕೆಲಿರ್ವರೊಳಿ । ಪಿಡಿದೆತ್ತುತವಳನುರೆ ಸಂತೈಸುತಲೆ ಕಾಂತ । ನೊಡನೆ ಕಂಗಾಲ ಹದನೇನೆಲ್ಬಳಿಕಾಗನುಡಿದಶ್ರೀಹರಿಮುದದೊಳು ॥ 1 ॥

## ॥ ರಾಗ । ಕೆತಾಳ ॥ ಝಂಪೆ ॥

ಶರಜಾಕ್ಷಿ ಕೇಳೆ ನೀನು । ರಾಧೇಯ । ಧುರಧೀರನಾದತಾನು । ಪರಶುರಾಮನೊಳ್ ವಿದ್ಯವಾ । ಕಲಿತುನರಗೆರೆಯನಾಗಿಹ ಕೇಳವಾ ॥ 1 ॥ ಯರೆಯ ಕೇಳಾ ಕರ್ಣನು । ನರಗಧಿಕಧುರಧೀರನಾದರೇನೂ । ಪಿರಿದುಶ್ರಮದಿಂದಲವನು । ಕಲಿತೀರ್ದ ಪರಿಗೆ ಚಿಂತಿಸುವದೇನೋ ॥ 2 ॥ ಏಣಾಕ್ಷಿ ಕೇಳ್ ಪಾಂಡವಾ । ರಕ್ಷಕನು ಪ್ರಾಣವನು ಧುರದಿ ಕಾಯ್ವಾ । ಕ್ಷೋಣಿಯಲಿ ಬಿರಿದಿದೆನ್ನಾ । ಇರೆಕರ್ಣ ತ್ರಾಣಪಿರಿದಾದಮುನ್ನಾ ॥ 3 ॥ ಧರೆಯಲಿಹ ಕ್ಷತ್ರಿಕುಲವಾ । ಅತ್ಯಗ್ರತರದಿಕೊಂದಿಹಭಾರ್ಗವಾ । ತರಣಿಸುತಪಾರ್ಥಿವನಿಗೆ । ಶರವಿದ್ಯ ವರದ ಪರಿಪೇಳ್ವುದೆನಗೆ ॥ 4 ॥ ಅವರೆಡೆಯೊಳಾ ಕರ್ಣನು । ದ್ವಿಜರೂಪ । ದೋರಿ ವಿದ್ಯವ ಕಲಿತನೂ । ನಾರಿಕೇಳ್ನಾಪೋಗುತಾ । ಆರ್ಸೆಯೊಳು । ಕಾರಣವಗೈವೆನೆನುತಾ ॥ 5 ॥

## ॥ ಭಾಮಿನಿ ॥

ತರುಣಿಯೊಡನಿಂತರುಹಿ ಮಾಧವ ಗರುಡವಾಹನನಾಗಿ ಬಂದನು । ಸುರಪುರಕೆ ನಲವಿನಲಿ ನರನೇನ್‌ಸುಕ್ರುತನೋ ಜಗದಿ ॥ ಸುರರುಘೇಯನುತಿರ್ದರಪ್ಸರೆ । ತರುಣಿಯರು ನರ್ತನದಿ ನಲಿದರು । ಸುರರೆರೆಯ ನಡೆತಂದು ನಮಿಸಿದ ಕರುಣಸಾಗರಗೆ ॥ 1 ॥

## ॥ ರಾಗ । ಬೇಗಡೆ । ಯೇಕತಾಳ ॥

ಪಾಲಿಸು ದೇವರದೇವ ಮುಕುಂದಾ । ನೀಲಘನಶ್ಯಾಮನಿಜನಿತ್ಯಾನಂದಾ ॥ ಕಾಲಭಯವಿದೂರಕರ್ತುಸರ್ವೇಶಾ । ಪಾಲಿಪಭಕ್ತರಲೋಲಲಕ್ಷ್ಮೀಶಾ ॥ 1 ॥ ತವಚರಣವು ದಂಯುಗ್ಯೈದುದರಿಂದಾ । ದಿವಿಜಪುರವು ಪುಣ್ಯಪಡದುದಾನಂದಾ ॥ ಭವಭಯಭಂಜನೀನಿಲ್ಲಿಗೈತಂದಾ ॥ ಹವಣ ಡಿಂಗರಿಗಂಗೆ ಅರುಹಬೇಕೆಂದಾ ॥ 2 ॥

## ॥ ರಾಗ । ಸುರ್ಟಿ । ಯೇಕತಾಳ ॥

ಕೇಳ್ಳೈ ದೇವೇಂದ್ರಾ । ಸುರಕುಲ ಪಾಲಕಗುಣಸಾಂದ್ರ । ಪೇಳುವದೇನ್‌ತವಬಾಲಗೆ ರಣದೊಳು । ಸೋಲಹುದರ್ಕಜಮೇಲೆನಿಸುತಲಿಹಾ ॥ 1 ॥ ಪರಶುಧರನೊಳ್‌ತಾನು । ಕಪಟವ ವಿರಚಿಸಿ ವಿದ್ಯವನು । ತ್ವರಿತದಿ ಕಲಿತಿರೆಯಿನಜನ ತೊಡೆಯೊಳು । ಪರಶುಧರನು ಸಲೆ ಶಿರವನುಚಾಚುತಾ ॥ 2 ॥ ವರಗಿಹ ಕೇಳ್‌ಮುದದಿ । ಯೇಳುತವರವನುತಾಂದಯದಿ । ಕರುಣಿಪನದರೊಳು ವಿರಚಿಸು ವಿಘ್ನವ । ತ್ವರಿತದಿ ನೀನೆನೆ ಸುರಪತಿ ಕೋಪದಿ ॥ 3 ॥

## ॥ ರಾಗ । ಪಂಚಗಾತಿ । ಮಟ್ಟೆ ॥

ತರಣಿತನಯನಿಂತು ಶೌರ್ಯ । ವೆರಸಿ ಮೆರದರೆ । ತರಳಗಿಲ್ಲ ಜಯವು ಧುರದೊ । ಳಹುದುಶ್ರೀಹರೆ ॥ ಭರದೊಳಾನುಗಮಿಸುತವನ ವಿದ್ಯವೆಲ್ಲವಾ । ವುರುಹುತೆರನಮಾಳ್ಪೆ ನೋಡಿಗೆಂನ ಸತ್ವವಾ ॥ 1 ॥ ಯನುತ ಖಾತಿವೆತ್ತು ಪವಿಯ । ಧರನು ತ್ವರಿತದಿ । ವನಜನಾಭಗೆರಗುತಶನಿ । ದುಂಬೆ ರೂಪದಿ ॥ ಯಿನಜನೆಡೆಗೆ ಬಂದು ತೊಡೆಯ । ಕೊರೆಯೆ ರಕ್ತದಾ । ವನಧಿ ಪರಿದುದೇನನೆಂಬೆ । ರವಿಜ ಮರುಗಿದಾ ॥ 2 ॥

## ॥ ರಾಗ । ನೀಲಾಂಬ್ರಿ । ರೂಪಕಾ ॥

ಹರಹರ ಭವಣೆಯು ಬಂದುದೆ । ಅರಿತೆನು ಶರಸಂಧಾನವ । ಕರುಣದಿ ಭಾರ್ಗವನೊಡನೊಂ । ದೊರವನು ಪಡೆವನಕಾ ॥ 1 ॥ ಕೊರದುದು ಉರಿದುಂಬೆಯು

ಗುರು । ವರನಿದ್ರೆಯೊಳಿರಲೆಬ್ಬಿಸೆ । ದುರಿತವು ಘಟಿಪುದು ರಕ್ತವು । ಸುರಿವುತಲಿದೆ ಭರದಿ ॥ 2 ॥ ಪೇಳುವದ್ಯಾರಿಗೆ ಗುರುವರ । ನೇಳಿಸದಿರಲೇನೆಂಬೆನೊ । ಕಾಳಾದುದು ಮಮಕಾರಿಯದೇಳಿಗೆಯಿಂದಲಿ ॥ 3 ॥ ಕೆಟ್ಟೆನು ಅಕಟೆನ್ನುತಲಿರೆ । ಥಟ್ಟನೆ ಭಾರ್ಗವನೇಳುತ । ದೃಷ್ಟಿಸಿದನು ರಕ್ತದ ಕಡಲಿಟ್ಟೆಣಿಸಿರುತಿಹುದಾ ॥ 4 ॥

## ॥ ಭಾಮಿನಿ ॥

ಪರಿಕಿಸುತ ರೋಷದಲಿ ಕಂಗಳೊ । ಳುರಿಯನುಗುಳುತ ಹೂಂಕರಿಸುತಿವ । ಧರಣಿಯಮರಜನಲ್ಲ ಭಾಹುಜನರಿತೆ ಕೇಳನಕಾ ॥ ಅರಿಯದಭಿಜನ್ಮುವನು ಯನ್ನಲಿ । ಮರವೆಯಲಿ ಕಲಿತಿರ್ದ ವಿದ್ಯವು । ಧರಣಿಯಲಿ ನಿಷ್ಫಲಿತವಾಗಲಿ ಯನುತ ಶ್ಯಾಪಿಸಿದಾ ॥ 1 ॥

## ॥ ರಾಗ । ಸಾರಂಗ । ಅಷ್ಟತಾಳ ॥

ಪರಶುರಾಮನು ಕೋಪದೊಳಗಂದು । ಯಿನ ತರಳಗೆ ಶ್ಯಾಪವ ಕೊಡಲಂದೂ । ಮರುಗಿದನರ್ಕಜ ಭಾರ್ಗವಾ । ತವ ಶರಣನೊಳಿರಿಸಿಂದುಕರುಣವಾ ॥ 1 ॥ ಜನಕೇಂದ್ರಕ್ಷತ್ರಿಯನಲ್ಲವೆ । ರಾಮ ವನಿತೆ ಪೂರ್ವಜ ಭೀಷ್ಮರಲ್ಲವೆ ॥ ಚಿನುಮಯ ನಿಂಮೊಳುವಿದ್ಯವಾ । ಕಲಿತನಘರಂದದಿ ಪೊರೆಯನ್ನವಾ ॥ 2 ॥

ಆದಿತ್ಯತರಳನಾ ಕರ್ಣನು । ಅಪ ರಾಧವಕ್ಷಮಿಸುತ್ತ ವರವನ್ನೂ । ಸಾಧಿಸಿದಸ್ತ್ರವಿದ್ಯಂಗಳು । ಬಹಭೇದವ ತೋರಿಸು ದಯದೊಳೂ ॥ 3 ॥ ಯಿಂತು ಸಂಸ್ತುತಿಸುತ್ತಲಿರುವನಾ । ದಯವಾಂತು ಭಾರ್ಗವನು ಪೇಳಿದಮುನ್ನಾ । ಅಂತರವರಿಯದೆ ಯನ್ನೊಳು । ನೆಲೆಯಾಂತವಿದ್ಯವು ಪೂರ್ಣವಿರೆ ಕೇಳೂ ॥ 5 ॥ ಅರಿಯ ಜೈಸುವೆನೆಂಬ ಅಧಟಲಿ । ನೀನು । ಭರದಿ ಪೋದರೆ ಪರಾಜಯವಲ್ಲೀ ॥ ಬರೆ ನಿನ್ನ ಜೈಸುವ ಗರ್ವದಿ । ಬಂದ ಧರಣಿಪರ್ಗೆಡರೆನ್ನಾ ಕರುಣದಿ ॥ 6 ॥

## ॥ ಭಾಮಿನಿ ॥

ತರಣಿಸುತಕೇಳ್ಮಾದ್ರದೇಶದ । ಅರಸು ನಿನಗೆ ನಿಯಂತನಾಗಿರೆ । ಧುರದಿ ಜಯವಹುದಾತ ಮತವನುಕರಿಸುತಿರೆ ಬಿಡದೆ ॥ ತೆರಳು ತಡೆಯದಿರೆನುತ ವರವನು । ಕರುಣಿಸುತ ಬೀಳ್ಕೊಟ್ಟು ಕರ್ಕಿ । ಕರನ ಪೊರವ ಮಹಾತ್ಮನಿರ್ದನು ವನವಿಹಾರದಲಿ ॥

1 ॥ ಸುರಪ ತೆರಳುತಲರಮನೆಗೆ ಮುರ । ಹರನಿಗೀ ವಾರ್ತೆಯನು ಪೇಳಲು । ಕರುಣಸಾಗರ ನಸುನಗುತ ಗಮಿಸಿದ ದ್ವಾರಕಾಪುರಿಗೆ ॥ ಅರಸರುಗ್ಮಿಣಿಸತ್ಯಭಾಮೆಯ । ರರಸನನು ಕರರತಂದು ಮೋಹದ । ಸರಸದೊಳು ನಲಿದಾಡುತಿರ್ದರು ಪರಮವಿಭವದಲಿ ॥ 2 ॥

## ॥ ರಾಗ । ಕಾಂಬೋಧಿ । ಝಂಪೆ ॥

ಅತ್ತಲರ್ಕಜನು ತೆರ । ಳುತ್ತ ಯೋಚಿಸಿದ ರುಷಿ । ಪೋತ್ತುಮನು ಮುನಿದಪರೆ ಕೃತ್ಯವೇನೆನುತಾ ॥ ಚಿತ್ತದೊಳಗರಿದು ಸುರ । ಪೋತ್ತಮುನಕೃತಕವಿದ । ಕಿತ್ತಪೆನುಪ್ರತಿಯನೆಂದೆನುತಾ ॥ 1 ॥ ಚೋರತನದಲಿ ಗೈದ । ಕಾರಣವನಾ ಸುರಪ । ಧೀರನಾತ್ಮಜಪಾರ್ಥನಾ ರಣದಿಗೆಲಿದೂ ॥ ತೀರಿಪಡೆ ಮತ್ಸರವ । ವೀರ ಕುರುವರನ ಸಭೆ । ಸೇರುವೆನು ತಾನೆನುತ । ಭೋರನ್ಯೆತಂದಾ ॥ 2 ॥

## ॥ ಭಾಮಿನಿ ॥

ಹರನ ಮರೆಯನು ಹೊಗಲಿಕಾತನ । ಧುರದಿ ಗೆಲುವೆನು ಯನುತ ಘರ್ಜಿಸು । ತಿರಲುತಳವೆಳಗಾಯ್ತು ಧರಣಿಯು ಶರಧಿಕಲಕಿದವೂ ॥ ಉರಗಕಂಚುಕಗಳದ ಕುಪಿತಾ । ತ್ವರದೊಳೈತರುತಿರಲುಗಿರಿವ್ರಜ । ಪುರದೆರೆಯ ನುಡಿಸಿದನುವುಪನಿಷ್ಕರದಿ ಭಾನುಜನಾ ॥ 1 ॥

## ॥ ರಾಗ । ಶಂಕ್ರಾಭರಣ । ಮಟ್ಟೆ ॥

ವೀರಪೋಪುದೆಲ್ಲಿ ಸಮರ । ಭಾರವಾವ ನೃಪರೋಳ್ ನಿನ್ನ । ಭೂರಿನಾಮ । ಜನಕಪೆಸರ । ಭೋರನರುಹಿಸೂ । ಆರಲ್ಯಾಕೆ ತರಣಿತನಯ । ಧೀರಕರ್ಣ ನರನ ಗೆಲಲು ಸಾರಿ ಪೋಪೆ ನಿನ್ನಪೆಸರ ಶೂರನರುಹಿಸೂ ॥ 1 ॥ ಮಗಧರಾಜ ರಾಜರುಗಳ । ಜಗದಿ ಗೆಲುವ ಬಿರಿದಿದೆನಗೆ । ಬಗೆಯಿದೇನು ಪಾರ್ಥನೊಡನೆ । ಸುಗುಣ ವೈರವೂ ॥ ಮಗಧ ಕೇಳು ಕಲಿತವಿದ್ಯ । ಹೊಗುವ ತೆರನ ಗೈದ ಸುರಪ । ಜಗದೊಳಧಿಕದ್ರೋಹಕವನ ಮಗನ ಕೊಲುವೆನೂ ॥ 2 ॥ ಅರರೆ ತರಣಿಜಾತ ನಿನಗೆ । ಹರಿಜವೈರಿಯಹನೆ ಲೇಸು । ಧರೆಯೊಳಾರ ಸೇರಿ ಗೆಲುವೆ । ಧುರದಿನರನನು ॥ ಧರಣಿಪಾಲಪೇಳ್ವುದೇನು । ತ್ವರದಿ ಪೋಪೆ ಕುರುಕುಲಾಬ್ಧಿ । ವರನ ಸ್ನೇಹದಿಂದ ನರನ ॥ ಶಿರವನರಿವೆನೂ ॥ 3 ॥ ಯಿನಜ ಪೋಗಬೇಡ ಯನ್ನೊಳ್ । ವಿನಯದಿಂದಲಿರಲು ವೈರಿ । ಯನುವರದೊಳು ಗೆಲುವೆ ತಾನೆಯಿನಿತಿದೇತಕೆ ॥ ಜನಪ ಕೇಳು ಪಾರ್ಥನೊಡನೆ । ನಿನಗೆ ವೈರವೇನು ಬರಿದೆ ।

ಬಣಗರಂತೆ ನುಡಿವುದ್ಯಾಕೆ ಘನತೆಯಲ್ಲಿದೂ ॥ 4 ॥ ಹರಿಜಕೇಳು ವೈರಿಯನಗೆ । ಹರಿಯು ಹರಿಜ ನಿನಗೆ ವೈರಿ । ತರಿವೆ ಭಾವಮೈದುನರನು ಧುರದೊಳೊಬ್ಬನೆ ॥ ಬರಿದೆ ಸೊರಹಬೇಡ ಮಗಧ । ನರಹರಿಯು ಗೆಲುವ ಸತ್ವ । ವಿರದು ನಿನ್ನೊಳ್ ಭಂಡರಂದಲರುಹಲ್ಯಾತಕೆ ॥ 5 ॥ ಅರಿಯೆನೆನ್ನಧಟ ವೈರಿಕರಿಯ ಕುಲವ ಹನನಗೈವ । ಹರಿಯು ಹರಿಯ ವೈರವೆನಗೆ ಸುರರುಬೆದರ್ವರೂ ॥ ಧರೆಯೊಳಿಂತು ಸುರರ ವೈರವೆರಸಿ ಬಾಳ್ದಗ್ಗಳೆಯರಿಲ್ಲ । ವಿರಲು ನಿಂನೊಳಹುದೆ ಕಾರ್ಯದಿರವು ಯನ್ನದೂ ॥ 6 ॥

## ॥ ರಾಗ । ಮಾರವಿ । ಯೇಕತಾಳ ॥

ನುಡಿಯನು ಕೇಳುತ ಕಂಗಳೊಳಿಂಗಳ । ಕಿಡಿಯುಗುಳುತ ಬಂದಾ ॥ ಫಡತರಣಿಜ ಬಿಡು ಬಿಂಕವನೆಂನಯ । ಸಡಗರ ನೋಡೆಂದಾ ॥ 1 ॥ ನರಹರಿಸುರರನು ಧುರದೊಳಗೆಣಿಪೆನೆ । ತರಣಿಜಗರ್ವದೊಳೂ ॥ ಅರುಹದಿರಹಿಕುಲಚರಿತಮದಾಂಧವ । ಗರುಡನ ಸರಿಸದೊಳೂ ॥ 2 ॥ ಧರಣಿಪರನಿಬರ ಧುರದೊಳು ಸೋಲಿಸಿ । ಸೆರೆಮನೆಬಂಧಿಯೊಳೂ ॥ ಯಿರಿಸಿಹೆ ಗೋವಳನರಿವುತಲಡಗಿಹ । ಶರಧಿಯಮಧ್ಯದೊಳೂ ॥ 3 ॥ ಸಮರಕೆ ಪೋಗಲು ವರುಣಕುಬೇರನು । ಯೆಮಗಿಮರೆಲ್ಲವರೂ ॥ ಅಮರಗಂಧರ್ವರು ಕಮಲಜಸಹಿತಲೆ । ಭೃಮೆಯೊಳಗೋಡುವರೂ ॥ 4 ॥ ಯಿಳೆಯೊಳುದೃಷ್ಟಿಸೆ ಮಲತು ನಿಲ್ಲುವ ನೃಪ । ಕುಲಉರಗರೊಳಿಹರೆ ॥ ಯುಳೆಯುನ ಬಿರುನುಡಿಗಳೆಯುದೆ ನಂಮುಯು । ಬಲುಮೆಯನರಿದಪರೆ ॥ 5 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ತರಳತನದೊಳಗೆಂದ ನಿಷ್ಠುರ । ಕರರೆ ಸ್ವೈರಿಸಿಕೊಳುವೆ ಸ್ನೇಹದಿ । ಧುರಪರಾಕ್ರಮಿಯಂಬುದರಿತೆನು । ತರಣಿತನಯಾ ॥ 1 ॥ ಧೀರನಾಗಿರಲೇನು ಧೀರರ । ಶೂರನಾಗಿರಲೇನು ಸರ್ವಥಾ । ಸೇರೆ ನಡೆನಡೆ ಮಗಧಪೋಗುವ । ದಾರಿಯುಳುಹಿ ॥ 2 ॥ ತರಳಕೇಳ್ ನೀ ಗರ್ವದಲಿ ಯಿ । ಲ್ಲಿರದೆ ಪೋದರೆ ಶಿರವನರಿವೆನು । ಪರಿಕಿಸೆನ್ನಯ ಕ್ಷಮೆಯ ನೀ ಮೊದ । ಲೊರದನುಡಿಗೆ ॥ 3 ॥ ಕಡುಪರಾಕ್ರಮಿಯಾದರೀಪರಿ । ನುಡಿವರೇ ಬಾಯ್ಬಡಿಕತನದಲಿ । ಜಡಜನೇತ್ರನ ಗೆಲುವ ಸುಭಟನೆ । ದೃಢವಿದೆಂದಾ ॥ 4 ॥

## ॥ ರಾಗ । ಭೈರವಿ । ಅಷ್ಟತಾಳ ॥

ಯನಲಾಗಮಗಧಾಖ್ಯನು । ಪೇಳ್ದನು ಕೂಡೆ । ಯಿನಜ ಪೌರುಷದಿ ನೀನೂ ॥

ಮನಬಂದ ತೆರದಲಿ ಮಾತನಾಡಲು ನಿನ್ನ । ರಣದೊಳು ಕೆಡಹುವೆನೂ ॥ 1 ॥ ಗೆಲುವ ಸುಭಟನಹುದೊ । ಯರಡು ಸೀಳು । ಬಲಿತು ಸುಖದೊಳಿಹುದೊ ॥ ಕೊಳುಗುಳಕ್ಕಿದಿರಾಗೆ ಕೊಲುವೆನು ಪ್ರಾಣವ । ನುಳುಹಿರು ಗೃಹವ ಸಾರೂ ॥ 2 ॥ ಕನಲ್ದಾಗ ಮಗಧೇಶನು । ಪೂಡಿದನೊಂದು । ಘನತರದಸ್ತ್ರವನೂ ॥ ಯಿನಜನೆ ಸೈರಿ ಕೊಳ್ಳೆನುತೆಸೆಯಲು । ಕಿನಿಸಿಂದ ಕಡಿದ ತಾನೂ ॥ 3 ॥ ಬಳಿಕ ರೋಷದಿ ಕರ್ಣನು । ಪೇಳ್ದನು ಜರೆಯುಳುಹಿದ ಬಗೆಗೆ ನೀನು ॥ ಯಿಳೆಯೊಳಗ್ಗಳನೆಂದು ವುಲಿಯದಿರೆನುತಸ್ತ್ರಬಲುಮೆಯೊಳ್ತೆಗದೆಚ್ಚನೂ ॥ 4 ॥ ಕಡುಕೋಪದಲಿ ಮಗಧಾ ॥ ಕಡಿದು ಪೂಡೆ ದೃಢತರದಸ್ತ್ರವದಾ ॥ ಪುಡವಿ ಕಂಪಿಸುತಿರೆ ಬಿಡಲು ಕಾಣುತಲದ । ನಡುವೆ ರವಿಜ ಕಡಿದಾ ॥ 5 ॥ ಮಗಧನು ಉರಗಾಸ್ತ್ರವಾ । ಬಿಡಲು ಭಾನು ಮಗನು ಗರುಡಬಾಣವಾ ॥ ತೆಗೆದದ ಕಡಿಯಲು ಪೊಗಳಿದರೇನೆಂಬೆ । ಮಿಗೆಸುರರಾಹವವಾ ॥ 6 ॥

## ॥ ರಾಗ । ಭೈರವಿ । ಯೇಕತಾಳ ॥

ಸುಮನಸರಾಶ್ಚರಿವಡಲು । ಧುರ ಸಮಸರಿಯಾಗುತ ಬರಲೂ । ಕಮಲಜನಾಮಾಸ್ತ್ರವನು । ಪೊಡದಮರಾರಿಯು ಮುಸುಕಿದನೂ ॥ 1 ॥ ಕಂಡರ್ಕಜಕೋಪದೊಳು । ಕೈಕೊಂಡನು ಶ್ರೀಶಾಸ್ತ್ರದೊಳು । ಖಂಡಿಸೆ ಬೇಗದೊಳಾಗಾ ॥ ನೃಪಕೆಂಡವನುಗುಳುತಲಾಗಾ ॥ 2 ॥ ತೆಗೆದನು ಅನಲಾಸ್ತ್ರವನು । ಸುರ ಜಗಸುಡುತಿರೆ ಮಾಗಧನು । ಜಗಚಕ್ಷುವಿನಾತ್ಮಜಗೆ ಬಿಡೆ ಹೊಗೆ । ಕಿಡಿಗಳಮಯಮುಸುಗೆ ॥ 3 ॥ ತರಿದದ ರವಿಜನು ಬೇಗಾ ॥ ಹರಿ-ಶರವನು ಪಿಡಿಯುತಲಾಗಾ ॥ ಭರದಲಿ ಬಿಡಲದ ಮಗಧಾ । ತಮ=ಶರದೊಳು ಕೋಪದಿಕಡಿದಾ ॥ 4 ॥

## ॥ ಭಾಮಿನಿ ॥

ಪರಶುರಾಮನಕಾರ್ತಿವೀರ್ಯನ । ಧುರಪರಾಕ್ರಮಕಿಂಮಡಿಸುತಲೆ । ಧರಣಿಪತಿ ಮಗಧೇಶ ಪೂಡಿದನುರಗಬಾಣವನೂ ॥ ಧರಣಿಯಾವರಿಸಿದುದು ವಿಷದುಬ್ಬರದೊಳೋಡಿದರಮರಭಾಸ್ಕರ । ತರಳ ಫಡ ಕೆಡೆಯನುತೆಸೆಯಲವ ಧರಣಿಗೊರಗಿದನೂ ॥ 1 ॥

## ॥ ರಾಗ । ಭೋಗ । ಮಟ್ಟ ॥

ಅರಸ ಕೇಳು ಕಲಿಸುಕರ್ಣ ಧರಣಿಗೊರಗುತಾ । ಅರೆನಿಮುಷದೊಳೆದ್ದು ಮಗಧನಿರವ

ನೋಡುತಾ ॥ ಪರಶುಧರನ ನೆನದು ದಿವ್ಯಗರುಡಶರವನು । ತಿರುವಿಗೇರಿಸುತ್ತ ಪೊಡದನೇನನೆಂಬೆನೂ ॥ 1 ॥ ಘುಡಿಘುಡಿಸುತ ಬರಲು ನೃಪನ ವಡಲ ಸರಿಸಕೆ । ನಡುವೆಯದನು ಕಡಿವೆನೆಂದು ದೃಢತರಾಂತಕೆ ॥ ತೊಡಚುವನಿತರೊಳಗೆ ನಾಂಟಿ ಪೊಡವಿಗೊರಗುತಾ । ಕಡುಪ್ರತಾಪಿಯೇಳುತಿವನ ಬೆಡಗ ನೋಡುತಾ ॥ 2 ॥

## ॥ ರಾಗ । ಕೆತಾರಗೌಳ । ಅಷ್ಟತಾಳ ॥

ಯಿನಜನ ಶರದುರಿ ತಾಪದೊಳ್ ಮಗಧನು । ರಣದಹಂಬಲವ ಬಿಟ್ಟೊ ॥ ಘನಪರಾಕ್ರಮಿ ಭಾಪುಭಳಿರೆ ನಾ ಮೆಚ್ಚಿದೆ । ನೆನುತ್ತೈದೆ ಕರವಿಡಿದೂ ॥ 1 ॥ ಧುರದೊಳೆಂನೊಡನಿಂತು ಸೆಣಸುವಧಟರನ್ನು । ಸುರನರ ಭುಜಗರೊಳೂ ॥ ಪರಿಕಿಸಲೊರ್ವರ ಕಾಣೆ ನೀ ಜಯಸಿದೆ । ತರಳ ಸಂಗ್ರಾಮದೊಳೂ ॥ 2 ॥ ಹರಿಜನೋರ್ವನೆ ಯನ್ನ ಸರಿಬಲನೆನುತಲೇ । ಅರಿತಿಹೆ ಮೂಜಗದಾ ॥ ಅರಿಕುಲಾಂತಕನೆಂನ ಧುರದೊಳು ಕೆಡಹಿದೆ । ಹರಹರೇನೆಂಬೆನಿದಾ ॥ 3 ॥ ತುಂಗವಿಕ್ರಮ ನಿನಗೀವೆನು ಸರಿಯರ್ಧ । ವಂಗದಧರಣಿಯನೂ ॥ ಹಿಂಗಿದುದ್ಯೆ ಮಮಕ್ರೋಧಸಖ್ಯದೊಳಿಹೆ । ಸಂಗರಬೇಡೆಂದನೂ ॥ 4 ॥ ಅರಸು ಕೌರವನೆನಗಹಿತನೆ ಸಖ್ಯನು । ಸರಿಯರ್ಧವಂಗದೊಳು ॥ ಯಿರುವದಾತನ ಸೇರಲಿರಿಸುವ ನೀ ಸರ್ವ । ಧರಣಿಯಸುಖದೊಳಾಳೂ ॥ 5 ॥

## ॥ ಭಾಮಿನಿ ॥

ಅರಸ ಕೇಳಿಂತೊರದು ಮಗಧೇ । ಶ್ವರನು ಕರತಂದಾಗ ಕರ್ನಗೆ । ವಿರಚಿಸಿದ ಸರಿಯರ್ಧವಂಗದ ಧರಣಿಯೊಡೆತನವಾ ॥ ಅರಸನೆನಿಸಿದನಿನಜ ಮಗಧೇ । ಶ್ವರನ ಸಖ್ಯವ ಪಡದು ಬಂದನು । ಸುರಪಜನ ಮೇಲಧಿಕಮತ್ಸರವೆರಸಿ ಕರಿಪುರಕೆ ॥ 1 ॥

## ॥ ರಾಗ । ಭೈರವಿ । ತ್ರಿವಿಡೆ ॥

ಬಂದನಾಗ-ತರಣಿಜ ಬಂದನಾಗ । ಬಂದನಾಗತಿಶಯದ ರಭಸದೊ । ಳಿಂದ್ರನೆಸಗಿದ ಕುಹಕವಿದ್ಯವ । ನೊಂದಿಸದೆ ಬಿಡೆನೆನುತ ಮನದೊಳ । ಗಂದು ಕೋಪದಿ ಕಿಡಿಯನುಗುಳುತ । ಯಿಂದ್ರಸುತನನು ಗೆಲಲು ಧರೆಯೊಳಗಿಂದು ವೆಗ್ಗಳನಾದೆನೆನುತಲಿ । ಬಂದನಾಗ ॥ 1 ॥ ಘುಡುಘುಡಿಸುತಡಿಯಿಡುತ ಭರದಲಿ । ಪುಡವಿ ತಲೆಕೆಳಗಾಯ್ತು ಭಾನುಜ । ನಡೆದನತಿಭರದಿಂದ ಗಜಪುರ । ದೊಡೆಯನಿರೆನರನಹಿತನೆಂನುವ । ಸಡಗರವ ತಿಳಿದಾಗ ಕೌರವ । ನೊಡನೆ ಸ್ನೇಹವ ಬೆಳೆಸಲೆನ್ನುತ ಬಂದನಾಗಾ ॥ 2 ॥ ಬಂದು

ಬಾಗಿಲ ಬಳಿಯೊಳಿಹ ಚರ । ಗೆಂದನತಿಶೀಘ್ರದಲಿ ತರಣಿಜ । ಬಂದಿಹನು ನರನೊಡನೆ ವೈರಗ । ಳಿಂದ ತವದರುಶನಕೆ ಯನುತಲೆ । ಚಂದಿರಾನ್ವಯಗರುಹೆನಲು ಕೇ । ಳ್ದಂದು ಚರರಾಕ್ಷಣದಿ ಕೌರವ । ಗೊಂದಿಸುತಲರುಹಿದರು ಭೀತಿಯೊಳಂದು ಭರದಿ ॥ ಬಂದನಾಗ ॥ 3 ॥

## ॥ ರಾಗ । ಕಲ್ಯಾಣಿ । ಅಷ್ಟತಾಳ ॥

ಧೊರೆರಾಯ ಲಾಲಿಸ್ಯೆಯ್ಯ । ನಾವೆಂಬುವ-ದರಿಕೆಯಾಗಿರಲಿಜೀಯ ಅರುಹುದೇನ್ । ತವದರುಶನಕೆಂನುತ । ತರಣಿಜ ಬಂದಿಹ ಪೊರವಳೆಮಧ್ಯದಿ ॥ 1 ॥ ನರನೊಳು ವೈರವಂತೆ । ಮತ್ತಾತನ-ಧುರದೊಳು ಗೆಲುವನಂತೆ । ಧೊರೆರಾಯ ನಿಂನೊಳು ವಿರಚಿಸಿ ಸ್ನೇಹವ । ಕರುಣದೊಳಿರುವನಂತೆ ॥ 2 ॥ ಬಲುಪರಾಕ್ರಮಿಯಾತನಾ । ನೋಡಲು ಭೀತಿ-ಗೊಳುವದು ದೇಹಮುನ್ನಾ-ಯಿಳೆಯೊಳಗ್ಗಳನಾತನಿರೆ ಗೆಲ್ವ ನಿನ್ನರಿ । ಕಲಹದಿ ಸುರಪಜನಾ ॥ 3 ॥ ಯನಲಾಗ ಕುರುಭೂಪನು । ದಿಂಮನೆ ಸಿಂಹಾ-ಸನದಿಂದಲಿಳಿದು ತಾನು । ಘನವೇಗ ನಡೆತಂದು ಕಾಣುತ್ತಲಿನಜನ । ಮನದ ತೋಷದೊಳೆಂದನೂ ॥ 4 ॥ ಯಾರ್ಯೆಯ್ಯ ಬಂದಾತನು । ನೀ ಕಂಡರೆ-ಮೂರುಲೋಕದಖ್ಯಾತನು । ಶೂರನಾಗಿಹೆ ನಂಮ ಕರಸಿದಕಾರಣ । ಭೋರನೆವ್ರುಸುರೆಂದನೂ ॥ 5 ॥ ತರಣಿನಂದನನೊಬ್ಬನು ನಮ್ಮಯತಾತ-ವಿನಯದಿ ಸಲಹೆ ತಾನು । ಶರವಿದ್ಯಕಲಿಯಲು ತೆರಳಿದರೆಂಬರಾ । ಧುರಪರಾಕ್ರಮಿಯೆನೀನೂ ॥ 6 ॥

## ॥ ರಾಗ । ಭೈರವಿ ॥ ಯೇಕತಾಳ ॥

ಯನಲಾಕ್ಷಣ ರವಿಸೂನು । ಪೇ-ಳ್ದನು ತವತರಣಿಜ ನಾನೂ । ಜನಪತಿ ನಿಮ್ಮಯಜನಕಾ । ಅತಿವಿನಯದಿ ಸಲಹಿದ ಬಳಿಕಾ ॥ 1 ॥ ಶರಸಂಧಾನವ ಕಲಿಯೆ । ನಾ-ತೆರಳಲು ದ್ರೋಣನು ಮುಳಿಯೆ । ಪರಶುಧರನ ಕರುಣದಲಿ । ಶರ-ವರಿತ್ಯೆತರೆ ಮಾರ್ಗದಲಿ ॥ 2 ॥ ಯಿರುವಾಲಂಬದೊಳೆನುತಾ । ಬಹು-ಪರಿಯಲಿಮಗಧನುನಗುತಾ । ಅರುಹಲಿಕಾನಿರೆನೆನಲು । ಖತಿ-ವೆರಸುತ ಕಲಹಕೆ ಬರಲೂ ॥ 3 ॥ ಸಂಗರವೆಸಗಲು ತ್ವರದಿ । ರಣ-ರಂಗದಿ ಗೆಲಿದೆನು ಭರದಿ । ಹಿಂಗುತ ಸೊಗಸಹ ಪುರದಾ । ವರ-ವಂಗವನಿತ್ತನು ಮಗಧಾ ॥ 4 ॥ ಇಳೆಗಧಿಪತಿಯಾಗಿಹೆನು । ವಂ-ದುಳಿದುದು ಮತ್ಸರವದನು । ಕಳೆಯಲು ನಿನ್ನರಿ ನರನಾ । ಕೊಳು-ಗುಳದಲಿ ಜಯಸಲಿಕವನಾ ॥ 5 ॥ ಬಂದೆ

ನಾನದರಿಂ ನಿನ್ನಾ । ದಯ–ದಿಂದಲಿ ಜೀವಿಸಿಮುನ್ನಾ । ದಂದುಗವೇಳ್ಯದೊಳೆಡರು । ಬರೆ–ನಿಂದಿಸುವರು ನಿರ್ಜರರೂ ॥ 6 ॥

## ॥ ಭಾಮಿನಿ ॥

ಯಿಬ್ಬರೆಸಗುವ ಮತ್ಸರವು ಮ । ತ್ತೊಬ್ಬನಿಗೆ ಹಿತವಾಗದುಳಿವುದೆ । ಉಬ್ಬಿದನು ಕುರುರಾಯನರ್ಕಜನುಬ್ಬರದ ನುಡಿಗೆ । ಅಬ್ಬರವ ನಿಲಿಸುವೆನು ಪಾಂಡವ । ರಿಬ್ಬರೇ ಧುರಧೀರರವರೊಳ । ಗೊಬ್ಬ ನರನನು ಗೆಲಲು ಗೆಲವಿನ ಹಬ್ಬವಾಯ್ತೆಂದಾ ॥ 1 ॥

## ॥ ರಾಗ ॥ ಸೌರಾಷ್ಟ್ರ । ತ್ರಿವಿಡೆ ॥

ತರಣಿಸುತನಹುದಹುದೊ ನೀನತಿ । ಧುರಪರಾಕ್ರಮಿಯಂಬುದರಿತೆನು । ಸರಸಿರುಹಭವನೆನಗೆಸಖ್ಯವ । ಕರುಣಿಸಿದನೂ ॥ 1 ॥ ಯಿರುವದೆಂನೊಡನರ್ಧವಂಗದ । ಪುರವರದಸಿರಿಗೊಡೆಯನೆನಿಸುತ । ಹರುಷದಲಿ ನೀನಲ್ಲಿ ನೆಲಸಿರು । ತರಣಿತನಯಾ ॥ 2 ॥ ಮೈದಡೆಲೆ ರವಿಜಾತ ನೀ ಮೊದ । ಲಾದರಿಸಿದೆಲಾ ನರನ ವೈರದ । ಭೇದವೆನಗರುಹೆನಲಿಕವನತಿ । ಮೋದದಿಂದಾ ॥ 3 ॥

## ॥ ರಾಗ । ಕಾಂಬೋಧಿ । ಝಂಪೆ ॥

ಲಾಲಿಪುದು ಕುರುಕುಲಾಂಬುಧಿಯಬ್ಜ ನಿನ್ನೊಡನೆ । ಪೇಳುವೆನು ನರನ ವೈರವನೂ । ಕೇಳ್ದಿರುವೆಯೈಸೆನಾ । ಕಲಿತೆವಿದ್ಯವನು ಬುಧ । ಬಾಲರೂಪದೊಳು ಭಾರ್ಗವನೂ ॥ 1 ॥ ಕರುಣಿಸಿದಕೃತಪುಂಕನಾಗಲೆನ್ನಯ ತೊಡೆಯೊ । ಳಿರಿಸಿ ಶಿರವನು ರಾಮ ದಯದಿ ॥ ವರಗಿರಲಿಕಾಗ ಶಚಿ । ಯರಸಕುಲ್ಲಟದೊಳಗೆ । ಕೊರದನೆಂನಂಕವನು ಭರದಿ ॥ 2 ॥ ಜಲಧಿ ಪರಿದುದು ರಕ್ತಸುರಿಯೆ ಭಾರ್ಗವನೆದ್ದು । ತಿಳಿದನೆನ್ನಾದಿ ಜಲ್ಮವನೂ ॥ ಯಿಳೆಯಮರನಲ್ಲ ರೂಪವ ಮರಸಿ ಕಲಿತಿಹವಿದ್ಯ । ಫಲಿಸದಿರಲೆನುತ ಶ್ಯಾಪವನೂ ॥ 3 ॥ ಕೊಡಲಾಗಬೇಡಿದೆನು । ಕರುಣದಿಂ ಭಾರ್ಗವನು ದೃಢವರಿತು ವೈರಿಯನ್ನೊಡನೆ ॥ ಕಡುಹದಿಂದ್ಯೆತರಲು ಜಯವೆನುತ ಹುರಿಶ್ಯಾಪ । ಕೊಡಲು ನಡೆತಂದೆ ನೃಪವರನೆ ॥ 4 ॥ ಶಕ್ರನೆಸಗಿದಕುಹಕವಿದ್ಯಕಾತನ ಮಗನ । ಚಕ್ರದೊಳುಗೆಲುವೆ ಪಂಥವಿದೂ ॥ ಚಕ್ರಧವ ನಿನಗಹಿತನರನೆಂಬುದರಿತೆ ತವ । ಚಕ್ರದೊಳಗೆನ್ನನಿರಿಸುವದೂ ॥ 5 ॥

## ॥ ರಾಗ । ಕೇತಾರಗೌಳ ॥ ಅಷ್ಟತಾಳ ॥

ಯಿಂತೆನಲಾಗ ಕೇಳುತಲಿ ಸುಯೋಧನ । ತಾಂ ತವಕದೊಳರಿದೂ ॥ ಕುಂತಿಯಾತ್ಮಜನೋರ್ವನನು ಗೆಲ್ಲೆ ತನ್ನಯ । ಚಿಂತಿತಾರ್ಥಗಳಹುದೂ ॥ 1 ॥ ನರ ನಿನಗಹಿತನಾದನೆ ವಳ್ಳಿತ್ಯಾತಿನ । ತರಳ ಕೇಳಾ ಪಾರ್ಥನಾ ॥ ಧುರದೊಳು ಗೆಲುವಡಸಾಧ್ಯವೆ ನಾವೀರ್ವ । ರಿರಲು ಸ್ನೇಹದೊಳವನಾ ॥ 2 ॥ ದಿಂಡೆಯಾ ಪಾರ್ಥನು ಧುರದೊಳು ಮೂಲೋಕಗಂಡನೆಂದೆನಿಸಿಹನೂ ॥ ಪುಂಡರಿಕಾಂಬಕನಿದಿರೊಳು ತ್ರೈಲೋಕ । ಭಂಡನೆಂದೆನಿಸುವೆನೂ ॥ 3 ॥ ಗಂಡುಗಲಿಯೆ ಧೀರಬಾರೆನುತಾತನ । ಕೊಂಡೋಯ್ದು ಗಜಪುರಿಗೆ ॥ ಚಂಡವಿಕ್ರಮಗರ್ಧಪೀಠವನಿತ್ತನು । ದ್ದಂಡ ತಾ ಬಲದೊಳಗೆ ॥ 4 ॥ ಕರಸಿ ಮಂತ್ರಜ್ಞರ ತರಣಿಸಂಜಾತಗೆ । ಸರಿಯರ್ಧವಂಗದೊಳೂ ॥ ವಿರಚಿಸಿ ಪಟ್ಟವ ಪುರವನಾಳೆನುತಲೆ । ಅರುಹಿದ ತೋಷದೊಳೂ ॥ 5 ॥

## ॥ ವಾರ್ಧಿಕ್ಯ ॥

ಧರಣೀಂದ್ರಕೇಳ್ ಬಳಿಕ ರವಿಜಗಾದುದು ಪೂರ್ಣ । ವರವಂಗದೇಶದವನೆನಿಸಿ ಮೆರದನು ಸಖ್ಯ । ವೆರಸಿ ಕೌರವನೊಡನೆ ಪರಮಸಂಪ್ರೀತಿಯಿಂ ಸುರನಿಕರ ಕೊಂಡಾಡಲೂ । ವರವರ್ರೈತಂದು ದಿನದಿನಕೆ ಬೇಹಿನಚರರು । ಧರೆಯಲಿಹ ಸಕಲವೃತ್ತಾಂತಮಂ ನೊಂದುದಿನ । ತರಣಿಸುತನೋಲಗಂಗೊಟ್ಟಿರಲ್ ನಡೆತಂದು ಅರುಹಿದರ್ಚರರು ಭರದಿ ॥ 1 ॥

## ॥ ರಾಗ । ಪುನ್ನಾಗ ॥ ಯೇಕತಾಳ ॥

ಸಲಾಮುತೆಕ್ಕೊ ಧೊರೆಕರ್ನಪ್ಪ । ವಿಲಾಸದಿಂದತಿಬೇಗಾ । ಬಲುಬಲ್‌ದೇಶವ ತಿರುಗುತ ಬಂದೆವು । ಸಲುಗೆಯೊಳ್ ನಿಮ್ಮೆಡೆಗೀಗಾ ॥ 1 ॥ ಸುರಪುರದಂದದಿ ಶೋಭಿಪ ರತ್ನಾಪುರವರವೊಂದಿಹುದದಕೆ । ವರಚಂದ್ರೇಶನು ಮೆರವನು ಸತ್ವದಿ । ಅರಸನೆನುತ ಪರಾಕೆ ॥ 2 ॥ ತಂನೃಪವರನಿಗೆ ಜನಿಸಿಹಳೋರ್ವಳು । ಕನ್ನಿಕೆ ಸೊಬಗಿನೊಳವಳೂ ॥ ಮನ್ಮಥನರಗಿಣಿ ಶಚಿಯೂರ್ವಶಿಯರ । ಗಣ್ಯಕೆ ತರದಿರುತಿಹಳೂ ॥ 3 ॥ ನೋಡಿದರಾ ಸುಕುಮಾರಿಯುನೊಲಿಸುತ । ಜೋಡೊಳು ಕುಳಿತೊಂದು ನುಡಿಯಾ ॥ ಆಡದಿರುವವಿಟಪುರುಷನೆ ಕಂಡೆವು ಪಾಡಿನೊಳಿಹ ಸತಿಜೀಯಾ ॥ 4 ॥ ವಾರದೊಳಗೆ ಯರಡ್ಬಾರಿಯು ಬರುವಳು । ಧಾರುಣಿಪನ ಮತವನುಕರಿಸಿ ॥ ವಾರಿಜಲೋಚನೆ ಕ್ರೀಡೆಗೆ ಶರವನ । ದಾರಾಮಕೆ ಸಖಿವೆರಸಿ ॥ 5 ॥ ಚಂದಿರವದನೆಯ ಕಂಡೆವು ವನದೆಡೆ ।

ಗಿಂದವಳುರೆ ಪೋಗುತಿರೆ ಬಳಿಕಾ ॥ ಬಂದೆವು ನಿಂಮೊಡನರಿಕೆಯಗೈದಪೆ । ವೆಂದೆನುತಲೆಕೇಳ್ ಗುಣತಿಲಕಾ ॥

## ॥ ರಾಗ । ಭೈರವಿ ॥ ಯೇಕತಾಳ ॥

ಚರರೆಂದ ನುಡಿಯನು ಕೇಳುತ್ತಾ । ರವಿ–ತರಳನುನ್ನತತೋಷ ತಾಳುತ್ತಾ ॥ ಅರರೆ ಸುಂದರಿಯನ್ನುತೊರವಿರಿ । ಲೋಕ–ತರುಣಿಯಂದವಿದಲ್ಲ ಯನುವಿರಿ ॥ 1 ॥ ಅಂಥಚನ್ನಿಕೆಯಾಗಲವಳನು । ನೋಡ–ದಂಥ ನಯನವಿರ್ದು ಫಲವೇನೂ । ಕಂತುವಿನರಗಿಣಿಯಂತಿರೆ । ಸ್ಮರ–ನಂತೆನ್ನ ಲಾವಣ್ಯವಿರೆ ಖರೆ ॥ 2 ॥ ಪೋಗಲುಬೇಕು ನಾವೀಕ್ಷಣ । ಯನು–ತಾಗ ರವಿಜನೇಳುತಾಕ್ಷಣ । ಹೀಗೆಂದು ಯೋಚಿಸುತಿರ್ದನು । ಯಂಗ–ಭಾಗದಿ ತಾ ತೆರಳಲಿಕಿನ್ನೂ ॥ 3 ॥ ತರುಣಿಸೊಬಗ ನೋಡೆ ತೆರಳಿದಾ । ರವಿ–ತರಳನಧಿಕನೆಂದುಲೋಕದಾ । ಬಿರುನುಡಿಬಾರದತೆರದಲಿ । ಪೋಪೆ–ತ್ವರಿತಾ ಬೇಟೆಯ ನೆವದಿಂದಲಿ ॥ 4 ॥ ಬೇಗದಿ ಮಂತ್ರಿಮಾಣಿಕ್ಯನೆ । ಕರೆ । ಸೀಗ ಕೈರಾತರ ಪಡೆಯನ್ನೆ । ಪೋಗುವೆ ಬೇಟೆಗೆ ವನದೊಳು । ಯನು–ತಾಗ ರವಿಜ ಪೇಳೆ ಭರದೊಳೂ ॥ 5 ॥

## ॥ ಭಾಮಿನಿ ॥

ತರಣಿಸುತನಾಜ್ಞೆಯಲಿ ಕರಣಿಕ । ಚರರ ಕಳುಹುತ ಕರಸಲೈದಿದ । ವರಪುಳಿಂದನು ವಂಗದೇಶಕೆ ಸಕಲಸೈನಿಕದಿ ॥ ಕರಿಯದಾಡೆಯ ಸಿಂಹನುಗುರನು । ಶರಭಚರ್ಮವು ವ್ಯಾಘ್ರಬಾಲವ । ತರಣಿಜಗೆಕಾಣಿಕೆಯನಿತ್ತಡಿಗೆರಗಿದರು ಭರದಿ ॥ 1 ॥

## ॥ ರಾಗ । ಮಾರವಿ । ಯೇಕತಾಳ ॥

ತೆಕೊ ಸಲಾಂ ಮಹಧೊರೆ ತವಚರಣದೊ । ಳಿಕ್ಕೆವೆ ಕಾಣಿಕೆಮ್ಯಾ । ಸೊಕ್ಕಿದಮಿಕಗಳು ಚರಿಸುತಿಹುದು ವನ । ದಿಕ್ಕೆಲದೊಳು ಕೇಳಯ್ಯಾ ॥ 1 ॥ ಮಿಕಗಳ ಮಾಂಸವ ತಿನ್ನದೆ ನಮಗೊಂದು ಯುಗದಂತಾಗೈತಿ ॥ ಹಗಲಿಡಿತಿನಿಸುಗಳಿಲ್ಲದರಿಂ ನಮ್ಮ । ಮೊಗಹೊಲಸಾಗೈತೆ ॥ 2 ॥ ವೋಟು ಗೆಣೆಯರನು ಕೂಡುತ ನಾವಿಂ । ದೀಟಿಬಲೆಯಕೊಂಡೂ ॥ ಕೂಟಾಳಿಗಳೊಡನಾಡುವ ಸಾಮಿಯೆ । ಬೇಟೆಯ ಮನಗೊಂಡೂ ॥ 3 ॥ ಅಡವಿಯ ಮಿಕಗಳ ಸದವುತ ನಾವತಿ । ಬೆಡಗಿಲಿ ಮಾಂಸವನೂ ॥ ಅಡಿಗೆಯ ಮಾಡುತ ಹಸಿಬಿಸಿಗಳ ಬ್ಯಾಗಡಚುವೆವೆಲ್ಲವನೂ ॥ 4 ॥

## ॥ ಕಂದಪದ್ಯ ॥

ವನಚರರೆಂದುದ ಕೇಳುತ । ಮನದಂದಗಳಾಯ್ತೆನುತಲೆ ಕರ್ಣನು ಭರದಿಂ । ವಿನಯದೊಳವರನುವೆರಸುತ ವನಕೈದಿದ ಬಲಸಹ ಬೇಟೆಗೆ ಮುದದಿಂ ॥ 1 ॥

## ॥ ರಾಗ । ಮುಖಾರಿ ॥ ಯೇಕತಾಳ ॥

ಬೇಟೆಗೆಂದೆನುತ ಬಂದಾ ಕರ್ನಾ । ಗಿಳಿದೇರವರ್ನ–ಬೇಟೆಗೆಂದೆನುತ ಬಂದಾ ಕರ್ನಾ ॥ ಪಲ್ಲ ॥ ಬೇಟೆಗೆಂದೆನುತಲೆ ನೋಟಕಜನರಿಗೆ । ನಾಟ್ಯವ ದೋರುತ ಕಾಟಕಬಲದೀ ॥ 1 ॥ ಮನದೊಳಗಿದ್ದುದ ನೆನವುತೆನ್ನಯ । ಅನುಚರರರು –ಹಿದ ವನಿತೆಯ ನೋಡಲೂ ॥ ಬೇಟೆ ॥ ॥ 2 ॥ ಕರಡಿಕಾಡ್ಕೋಣಹರಿಣಮೊಲಂಗಳ । ಶರಭಸಾರಂಗವ । ತರಿತರಿದಿಡುತಾ ॥ 3 ॥ ಅಡವಿಯ ಮೃಗಗಳ ತರಿವುತ ಶಬರರ ॥ ಪಡೆಸಹ ಶರವನದೆಡೆಗತಿ ಭರದಿ ॥ ಬೇಟೆಗೆಂದೆನುತಬಂದಾಕರ್ನಾ ॥ 4 ॥

## ॥ ವಾರ್ಧಿಕ್ಯ ॥

ಅವನೀಶ ಕೇಳ್ ಬಳಿಕ ಮೃಗಬೇಟೆವ್ಯಜನದಿಂ । ದಿವರಿರ್ದರತ್ತ ಚಂದ್ರೇಶಭೂವರನತನೂ । ಭವೆಕೊಣದಿಕ್ರೀಡೆಯುಂ ತಂನಾಪ್ತಗೆಳತಿಯರನಿವಹದಿಂದಾಡುತಿರಲೂ ॥ ಜವನಂತೆ ಕೋಲಾಹಲವೇನೆನುತ ತರುಣಿಯರ್– ತಮತಮಗೆ ಬೆದರುತಡಿಗಡರುತಾಕ್ಷಣದಿಯಿರ । ಲಿವರ ನೋಡುತ ಚರರುಸಂನ್ನೆಯೋಳ್ತೋರಲ್ಕೆ ರವಿಜ ಕಂಡನಾ ಕಾಂತೆಯಾ ॥

## ॥ ರಾಗ । ಶಂಕ್ರಾಭರಣ । ಮಟ್ಟ ॥

ಯಲಲೆ ಶಬರ ನೋಡುನೋಡು ಸುಲಲಿತಾಂಗಿಯ । ಚಲುವತನವ ಕಂಡು ಮನವು ಚಲಿಪುದೆನ್ನಯ ॥ ಮಲಯಜಗಂಧಿನಿಯನಗೆಸಲುವಳ್ಕೆಸಲೆ । ಯಿಳೆಯೊಳಿರೆನುವಿವಹವೆಸಗದುಳಿದೆನಾದರೆ ॥ 1 ॥ ಬರಲಿ ಹರನು ಹರಿಯು ತಾನೆ ನಿಲಲಿ ಸಮರಕೆ । ತರುಣಿಮಣಿಯನೊಯ್ವೆ ಗೆಲಿದೀಗೆನ್ನ ನಗರಕೆ ॥ ಪರಶುಧರನ ಕರುಣವಿರಲಿಕಿವಳ ಲಗ್ನವಾ । ವಿರಚಿಸುವೆನು ತರಿದು ಬಹಳ ಬರುವ ವಿಘ್ನವಾ ॥ 2 ॥ ಯಿನಿತು ಮಾತಂಗನೊಳು ಪೇಳುತಾಗ ರವಿಜನು । ವನಿತೆಯಡೆಗೈತಂದು ಸ್ಮರನಬಾಣದುರಿಯನೂ । ಅನಕ ಸೈರಿಸುತಲಿ ಕಾಂತೆವದನ ನೋಡುತಾ । ಮಿನುಗುತಿರಲು ಚೋದ್ಯವೇನೆಂದೆಣಿಸಿ ಬಳಲುತಾ ॥ 3 ॥

## ॥ ಭಾಮಿನಿ ॥

ಮಾಧವನ ಮಗನರಸಿಯೋ ಮಧುಸೂದನನ ಪ್ರಿಯದರಗಿಣಿಯೊ ಕಲಿ । ತಾವಿದ್ಯವನೆಲ್ಲವೆಚ್ಚಿಸಿ ಕುಶಲ ತಂತ್ರದಲಿ ॥ ಬೇದಬಿಜ್ಜಗಸೃಜಿಸಿದನು ಯಿವಳೀ ಧರೆಗೆ ಪೊಸತೆನುತ ತಾಪದೊ । ಳಾ ದಿವಾಕರಸೂನು ನುಡಿಸಿದ ಮಂದಗಾಮಿನಿಯಾ ॥ 1 ॥

## ॥ ರಾಗ । ನಾದನ ॥ ಆದಿತಾಳ ॥

ಚಂದಿರವದನೆ ನೀನ್ಯಾರೆ । ನಲ–ವಿಂದೆನ್ನೊಳರುಹು ನೀ ನೀರೆ ॥ ಮಂದಗಮನೆಯರ ಕೂಡಿ । ನಿಲುವಂದವಿದೇನೆನ್ನ ನೋಡಿ ॥ 1 ॥ ವಾರಿಜನೇತ್ರೆ ನೀನಿರುವಾ ॥ ಪುರಧಾರುಣಿಪನ ಪೆಸರಿರವಾ ॥ ಚಾರುಹಾಸಿನಿ ಪೆಸರೇನೆ । ದಯ–ದೋರೆನ್ನೊಳರುಹುಸುಜಾಣೆ ॥ 2 ॥ ಕಕ್ಕಸಕುಚಯುಗ್ಮೆ ನಿನ್ನಾ ॥ ನೋಡೆ–ಚಿಕ್ಕವಳಾಗಿಯೆ ಮುನ್ನಾ ॥ ತಕ್ಕವರನು ಸಂಗಡಿರದೆ । ಯಿಹು–ದಕ್ಕಜವಲ್ಲ ನಾನರಿದೆ ॥ 3 ॥ ಬಂದೆನೀ ನೀ ವನಕ್ಯಾಕೆ । ನಲ । ವಿಂದೆನ್ನ ನೋಡುವ ಬಯಕೆ । ಬಂದುದೆ ನೀ ನಡೆತಂದಾ । ಪರಿ–ಗಿಂದು ಗಮಿಸಿದೆ ತಾನೆಂದಾ ॥ 4 ॥

## ॥ ರಾಗ । ಶಂಕ್ರಾಭರಣ । ಯೇಕತಾಳ ॥

ಸ್ಮರನತೇಜ ಕೇಳ್ಳೈ ನಾನಿಂ । ನಿರವನೊಳ್ಪಬಗೆಗ್ಯೆತಂದ । ಪರಿಯಿದಲ್ಲಯಿಹುದುಕಾರ್ಯ–ದಿರವುಯನ್ನದೂ ॥ ಸರಸಿಜಾಕ್ಷಿ ಕೇಳೆ ಮತ್ತೇ । ನಿರುವದ್ಯೆಸೆ ವನಕೆ ಸಖಿಯರ್ । ವೆರಸಿ ಬಂದ ಕಾರಣಂಗಳರುಹು ಯನ್ನೊಳೂ ॥ 1 ॥ ಬರಿದೆ ಗಳಹಬೇಡ ಯಿನಿತೀಪರಿವಿಚಾರಗ್ಯೆಯ್ಯಲಾವ । ಧರಣಿಪಾಲನೆಂಬುದೆನ್ನೊಳ್ ಅರುಹು ಮೊದಲಲಿ ॥ ಹರಿಣನೇತ್ರೆ ಕೇಳ್ ಚಪ್ಪಂನ ಪುರದಿ ದ್ವಿತಿಯರಾಜ್ಯವಾಳ್ವ । ನರಸರೆಂಬರೆಲೆಗೆ ನಿನ್ನಪುರವನರುಹಿಸೂ ॥ 2 ॥ ವಂಗದವನಿಪಾಲ ನಿನಗ್ಯಾ । ಕಂಗನೆಯ ಪುರವು ರತ್ನ । ಶೃಂಗರದ ನಗರ ಕೇಳು ತುಂಗವಿಕ್ರಮಾ ॥ ತುಂಗಪಯೋಧರಿಯೆ ಪರಮಾ । ತಂಗಗಮನೆ ಜನಕ ಪೆಸರ । ಹಿಂಗದುಸುರು ಯನ್ನೊಳು ಕುರಂಗಲೋಚನೆ ॥ 3 ॥ ಗಣಿಸದುಸುರ್ವದೇನು ನೀ ಪೇಳ್ದನಕನುಡಿವಳಲ್ಲ ಮೊದಲು । ಜನಕರೆಂದುಸುರಲೋಕನಾ ॥ ಯಿನಿತಿದ್ಯಾದಿಕೆ ವನಜನೇತ್ರೆ ತನುವಹನನಗ್ಯೆವ ಹರಿಯು । ಜನಕ ಯನುವರ್‍ಯೆಸೆ ಜಗದೊ ಳರುಹು ಫಣಿಪವೇಣಿಯೆ ॥ 4 ॥ ಅಂದವಾದುದಹುದೊ ತರಣಿ । ನಂದನ ನೀನಾದ ಬಳಿಕ । ಕುಂದುದುಸುರ್ವೆ ಯನ್ನ ಪಿತನು ಚಂದ್ರಭೂಪನೂ ॥ ಮಂದಗಮನೆ ಕನಕಮಯದ ।

ಸುಂದರಾಂಗಕೊಲಿದು ಕರ್ನ । ನೆಂದು ಕರವರ್ನಿಂನ ಪೆಸರೇನೆಂದು ಭೂಪಜೆ ॥ 5 ॥ ಯಿನಜ ಕರ್ನ ಕೇಳ್ವುದೆನಗೆ । ಜನರೊಳೆಲ್ಲ ರತ್ನವದನೆ । ಯನುವರ್ನೈಸೆ ಮೊಗದಿ ರತ್ನಘನತೆ ಮಿನುಗಲೂ ॥ ವನಜಜಾತಗೆಣೆಯೆ ಲೋಕ । ಯಿನಿತುಕಾರ್ಯಗೈವನೆನ್ನ । ಗುಣವಿನ್ನೆಂತು ಕನಕರತ್ನ । ವನಿತೆಕೂಡಿತೂ ॥ 6 ॥

## ॥ ರಾಗ । ಮಾರವಿ । ಯೇಕತಾಳ ॥

ಯಾತಕಿಂಥ ಮಾತನುಡಿವೆ । ಭೂತಳೇಶ ನಿನಗೆ । ನೀತಿಯಲ್ಲ ಸಲುಗೆ ಸತಿಯೊಳ್ ನೀ ತೆರಳುಮನೆಗೆ ॥ ಖ್ಯಾತಿವಂತನೆಂಬುದರಿತು । ವಾತನುಡಿದರೀಗ । ಭೀತಿಯುಳುಹಿಮುಂದಕೈವು । ದ್ಯಾಕೆತೆರಳುಬೇಗಾ ॥ 1 ॥ ಜಗದೊಳಧಿಕಜಾಣೆ ನಿಂನೀವನದೊಳಿರಿಸಿ ಮನೆಗೆ । ಹೊಗುವದೆಂತು ಸಂಗಡೈವ । ಬಗೆಯೊಳ್ಳೈದೆನೆಲೆಗೆ ॥ ಸುಗುಣೆ ಕೇಳು ಕನಕಕಿವಿಯೊ । ಳಿರಿಸೆ ರತ್ನಾಮೊಗವ । ಸೊಗಸ ನೊಳ್ಪೆ ಚಲವ್ಯಾಕಿನಿತು ಮುಗುದೆಗೃಹಕೆಪೋಗುವಾ ॥ 2 ॥ ಭಂಡರಂದನುಡಿವುದ್ಯಾತ । ಕೆಲವೊ ತರಣಿಜಾತ । ಕಂಡಸತಿಯರ್ಸರಸ ಮೃತ್ಯು । ಯಂಬುದರಿಯೆ ವ್ಯರ್ಥಾ ॥ ಪುಂಡತನದಿ ನುಡಿದರೀಗ ॥ ಪಿತನಿಗರುಹಿ ನಿನಗೆ ಚಂಡಶಾಸನವನು ಮಾಳ್ಪೆ । ಪುಂಡ ಕೆಲಕೆಸಾರ್ ಕಡೆಗೆ ॥ 3 ॥ ಯಲೆಗೆ ತೆಗೆನಿನ್ನಜನಕಗಿನಕ । ಸುಲಭವೆ ಯಂನೊಡನೆ । ನಿಲಲು ಪುರುಹೂತಾದಿಗಳನು । ಗೆಲುವೆ ಧುರದಿ ತಾನೆ ॥ ಚಲುವೆ ದಯದೊಳೆನ್ನ ವರಿಸ । ದುಳಿದೆಯಾದರಾನು । ವುಳಿಯಲಾರೆ ಕರುಣದಿಂದ ಸಲಹೆನ್ನ ಪ್ರಾಣವನೂ ॥ 4 ॥

## ॥ ಭಾಮಿನಿ ॥

ಭ್ರಷ್ಟನುಡಿಯನು ನುಡಿವುತೆನ್ನನು । ಮುಟ್ಟಲೈದುವನೆನುತ ಸಖಿಯರ । ವಟ್ಟಿನೊಳು ಗಮಿಸಿದಳು ಬೇಗದಿ ಹರಿಣಲೋಚನೆಯೂ ॥ ಸೃಷ್ಟಿಪತಿಕೇಳಿತ್ತಲರ್ಕಜ ನೆಟ್ಟಕಂಗಳ ಕೀಳಲಾರದೆ । ಥಟ್ಟನೊರಗಿದನಾಗ ಮನ್ಮಥಶರದಿ ಬಸವಳಿದೂ ॥ 1 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ಯಿನಜ ಧರಣಿಯೊಳೊರಗಲಾಕ್ಷಣ । ಕಿನಿಸಿನೊಳು ಮಾತಂಗಪಡೆಸಹ । ವನಜನೇತ್ರೆಯಸೆರೆಯಪಿಡಿದಪೇ ನೆನುತಭರದಿ ॥ 1 ॥ ನೀರೆಯರುನಡೆತರುವಪಥವಿವ । ರಾರುಭಟೆಯೊಳು ತಡೆಯಲಾ ಸುಕು ॥ ಮಾರಿಯರು ಗೋಳಿಡಲು ಕೇಳ್ದನು । ವೀರರವಿಜಾ ॥ 2 ॥ ತೆರದು ಕಂಗಳ ಮೆಲ್ಲನೇಳುತ । ಕರಸಿದನು ಕೈರಾತರಸುರರು । ಚರಿಪಕಾರ್ಯವ

ಸಲ್ಲದೆಮಗೆನು । ತರುಹುತವರಾ ॥ 3 ॥ ಕಳುಹಿದನು ಪುರಕತ್ತ ತಂನಯ । ನಿಳೆಯಕಭಿಮುಖವಾಗಿ ತಾಪದ । ಬೆಳವಿಕೆಯೊಳೈತಂದನರ್ಕಜ । ಬಳಲಿ ಮನೆಗೆ ॥ 4 ॥

## ॥ ವಾರ್ಧಿಕ್ಯ ॥

ಮಗನಿಂತು ವಿರಹದೊಳ್ ಬಳಲುತಿರಲೆನಗ್ಯಾಕೆ । ಜಗದಕಾರ್ಯವಿದೆನಗೆ ದುಗುಡದಿಂ ಪಡುಗಡಲ । ಗಗನಮಣಿಪೊಕ್ಕು ಕಳುಹಿದ ಬಿಡದೆ ಮೋಹದಿಂ ಜಗಕೆ ತನ್ನಾಪ್ತಚರರಾ ॥ ಬಗೆಯಿದೇನೆಂಬೆ ಗೃಹಪೊಕ್ಕು ಸೊಡರಾಳಿಗಳ್ । ಸೊಗಸಿದುದು ಬಳಿಕಿನಜ ನೀಹದನ ಕೌರವಗೆ । ಪೇಳ್ವುದೆನುತರುಹೆ ನಿಶಿಯೊಳೈತಂದು ಗಜನಗರಪತಿಗೆಂದರ್ಚರರೂ ॥ 1 ॥

## ॥ ರಾಗ । ಲಾವಣಿ ॥

ಧರಣಿಪಾಲ ಪೇಳ್ವುದೆಂವು । ಧೊರೆಕರ್ನಪ್ಪ ಕಳುಹಲ್ಯೆದೆ । ಭರದಿ ನಿಶಿಯೊಳೋಡಿಬಂದೆವು–ಕೇಳ್ಯೆಯ್ಯ ಧೊರೆಯೆ ॥ 1 ॥ ವನದೊಳೊಂದ ಹೆಣ್ಣ ನೋಡಿ । ಮನದಿ ಬಯಸಿ ಮರುಗುತಿಹನು । ಯಿನಜನುಳಿಯ ಬೆಳಗು ಪರಿಯಂತಾ । ಕೇಳ್ಯೆಯ್ಯ ಧೊರೆಯೆ ॥ 2 ॥ ಅರಸನಿಂಮೊಳರುಹುತಿದನು । ಕರತಾರೆಂದು ಪೇಳ್ದ ಭರದಿ । ಧರಣಿಪಾಲ ತೆರಳು ಬೇಗದಿ । ಕೇಳ್ಯೆಧೊರೆಯೆ ॥ 3 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ಧರಣಿಪತಿ ಕೇಳ್ದನಿತುಮನದೊಳು । ತರಹರಿ ಸುತಸುರಿದನು ಕರ್ನಗೆ । ಬರುವ ಕಷ್ಟವಿದ್ಯೆಸೆ ನಂಮಯ । ಹರಣಕೆನುತಾ ॥ 1 ॥ ದೂತರನು ಕಳುಹುತಲೆ ತನ್ನನು । ಜಾತಮುಖ್ಯರವೆರಸಿ ವಂಗಕೆ । ಪ್ರೀತಿಯಲಿ ನಡೆತಂದ ವಹಿಲದಿ । ಭೂತಳೇಶಾ ॥ 2 ॥ ಮೊರವುತಿರಲಾ ವಾದ್ಯ ನಿಶಿಯೊಳು । ಧರಿಸಿರುವ ದೀವಿಗೆಯ ಬೆಳಕಲಿ । ತ್ವರಿತದಲಿ ನಡೆತಂದನರ್ಕಜ । ನಿರುವ ಗೃಹಕೆ ॥ 3 ॥ ಅವನಿಯೊಳು ವಿರಹದಲಿ ಬದ್ದಿಹ । ರವಿಕುಮಾರನ ಕಂಡು ಮೆಲ್ಲನೆ । ಹವಣಿದೇನೆನುತೆತ್ತಿ ಕೇಳ್ದನು । ಭುವನಪತಿಯೂ ॥ 4 ॥ ಮನದಮರುಕ್ಯಾಕೆಲವೊ ಬಿಡಿಸುವೆ । ಜನಪ ಜವಮುಖ್ಯರನುಬಂಧಿಸಿ । ನೆನದಕಾರ್ಯವ ಮಾಳ್ಪೆನೆನಲಿನ । ತನುಜನುಡಿದಾ ॥ 5 ॥

## ॥ ಭಾಮಿನಿ ॥

ಹೇಳಲಾರೆನು ಭೂಪ ನಿನ್ನೊಳು ॥ ಹೇಳದುಳಿಯಲಿದೆಂತು ಮನ್ಮಥ । ಕಾಳುಮಾಡಿದನಕಟ ವನದಲಿ ಕಂಡಕಾಮಿನಿಯಾ ॥ ಖೇಳಮೇಳದೊಳಿರದೆ ಸರ್ವಥಾ ಬಾಳಲಾರೆನು ಚಂದ್ರಭೂಪನ । ಬಾಲಕಿಯ ತಂದೀಯದುಳಿಯದಬಳಿಕತಾನೆಂದಾ ॥ 1 ॥

## ॥ ರಾಗ । ಕೆತಾರಗೌಳ । ಅಷ್ಟತಾಳ ॥

ತರಣಿಜನಿಂತೆನೆ ಕೇಳುತ್ತ ಕೌರವ । ರರಸ ತನ್ನನುಜರೊಳು ॥ ಅರುಹಿದ ತಾಂಕೇಳ್ದಿರವನು ಮೆಲ್ಲನೆ । ಪರಿಪರಿವಿಭವದೊಳೂ ॥ 1 ॥ ಯನಲದ ಕೇಳ್ದಾಕ್ಷಣದಿ ವಿಕರ್ಣನು । ಜನಿಪನೊಳರುಹಿದನೂ ॥ ನನೆಕಣೆಯನು ತನ್ನಧಟನು ತೋರಿದ । ರಿನಜನು ಸ್ಯೆರಿಸನೂ ॥ 2 ॥ ಬಗೆವನೇ ತರಣಿಜ ಲೋಕದ ಮಾನಿನಿ । ಬಗೆಯವಳಲ್ಲೆನಿತು । ಸೊಗಸಿನೊಳಿರುವಳ್ಗೊ ಕೊಡಿಸುವೆ ಕರ್ನಗೆ । ಹಗರಣವ್ಯಾಕಿನಿತೂ ॥ 3 ॥ ಸುರನರಭುಜಗರ ಲೋಕದೊಳಾಸತಿ । ಯಿರಲವಳನು ತಂದೂ ॥ ವಿರಚಿಸದುಳಿವೆನೆ ವಿವಹವಭಾನುಜ । ಹರುಷದೊಳಿರಲಿಂದೂ ॥ 4 ॥ ಅನುಜನ ವಾಕ್ಯವ ಕೇಳುತ ಕೌರವ । ಜನಪಮಾದ್ರೇಶನನೂ ॥ ವಿನಯದಿ ಕರಸಲ್ಯೆತಂದಾ ಕುರು । ಜನಪನೊಳರುಹಿದನೂ ॥ 5 ॥

## ॥ ರಾಗ । ಭೈರವಿ । ಯೇಕತಾಳ ॥

ಯಾತಕೆ ಬರಸಿದೆ ಯನ್ನಾ । ಕುರು-ಭೂಪತಿಪೇಳ್ಯೆ ಮುನ್ನಾ ॥ ಈಪರಿ ಯಾಮಿನಿಯೊಳಗೆ । ಅನು-ಜಾತರವೆರಸುತ ಕಡೆಗೆ ॥ 1 ॥ ಯನಲಾ ಕುರುಭೂವರನು । ಅತಿವಿನಯದಿ ಪಾದಾರ್ಘ್ಯವನು । ಅನುಕರಿಸುತ ರವಿಜಾತಾ । ಪೇಳ್ದಿನಿತರುಹಿದನು ಪ್ರಖ್ಯಾತಾ ॥ 2 ॥ ತರಣಿಜ ವನಿತೆಯ ದೆಸೆಗೆ । ಮನ । ಮರುಗುತ ರಾತ್ರೆಯೊಳೆನಗೆ । ಚರರನು ಕಳುಹುತ ಭರದಿ । ಕರ । ಸಿರುವದನರುಹಿದತ್ವರದಿ ॥ 3 ॥ ಭೂಪ ಚಂದ್ರೇಶನ ಸುತೆಯ । ರವಿ । ಜಾತನಿಗೊಲಿಸುವ ಬಗೆಯ । ಮಾತುಳ ನೀ ದಯದಿಂದಾ । ರಚಿ । ಸೀತನ ಸಲುಹುವದೆಂದಾ ॥ 4 ॥ ಜನಪತಿಕೇಳ್ತವಮತವಾ । ಯಿನ । ತರಳನ ವಿವಹೋತ್ಸವವಾ । ಅನುಕರಿಸದೆ ಬಿಡಲೆನಗೆ । ಸುರ । ವನಿತೆಯರ್ನಗುವರು ಕಡೆಗೆ ॥ 5 ॥

## ॥ ವಾರ್ಧಿಕ್ಯ ॥

ಅವನಿಪತಿಕೇಳ್ದಲ್ಯೆ ಶಲ್ಯನೆಂದುದಕೆ ಕರಿ । ಭುವನಪತಿ ಮೆಚ್ಚಿ ನಗುತೆಂದನರ್ಕಜ

ನಿನಗೆ । ಕುವರಿಯನು ಸಾಮದಿಂದೀಯದಿರಲಾ । ನೃಪನ ಜವನಪುರವನು ಪೊಗಿಸುತಾ ॥ ಯುವತಿಯನು ಸೆರೆಹಿಡಿದು ತಂದು ಬಹಳೋತ್ಸವದಿ । ವಿವಹಮಂ ಯಸಗದೊಡೆ ನಿನಗಾಪ್ತನಲ್ಲೆನುತ । ತವಕದೊಳ್ ನಂಬುಗೆಯನಿತ್ತು ಸೈನಿಕವೆರಸಿ ರವಿಯುದಯದೊಳ್ ಪೊರಟನೂ ॥ 1 ॥

## ॥ ರಾಗ ॥

ನಡೆತಂದ ಕೌರವ ಭರದಿ । ಸೇನೆಯೊಡಗೊಂಡುದೇನೆಂಬೆತ್ವರದಿ । ಪೊಡವಿ ಬ್ಯಾಬಿಡುತಿರೆ ನಡವ ಭರಕೆ ಅಹಿ । ಕೊಡಚಿ ಕೂರುಮ ಗಜ ನಡುಗಲು ರೋಷದಿ ॥ 1 ॥ ಭೇರಿ ತಂಬಟೆ ಕಹಳಾರವವು । ಗಜ । ವಾರವಂಗಳ ಧ್ವನಿಕರವು । ವಾರಿಜೋದ್ಭವಜಾಂಡ ಬಿರಿಯಲು ಪಯಣದೊಳ್ । ವೀರಚಂ ದ್ರೇಶನ ಪುರವನು ಸಾರುತಾ ॥ 2 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ಕಾಪಿನವರನು ಕರವುತಾ ಕುರು । ಭೂಪನುಸುರ್ದನು ಬೇಗ ನಿಂಮರ । ಸಾಪತಿಯೊಳೆಮಗಿಹುದು ಕಾರ್ಯ ನಿ । ರೂಪವಿದನೂ ॥ 1 ॥ ಅರುಹುವದು ನಡೆತಂದ ಕೌರವ । ರುರುಬಲಾನ್ವಿತನೆಂಬ ಹದನವ । ಧರಣಿಪನೊಳೆಂದೆನಲು ಕೇಳುತ । ಚರರ ಭರದಿ ॥ 2 ॥ ಬಂದರರಮನೆರತ್ನಪೀಠದಿ । ಚಂದ್ರಭೂಪನು ನೆಲಸಿರಲಿಕವ । ರಂದು ವಂದಿಸುತರುಹಿದರು ನಡೆ । ತಂದುಭರದಿ ॥ 3 ॥

## ॥ ರಾಗ । ಮುಖಾರಿ । ಯೇಕತಾಳ ॥

ಕೇಳು ಕೇಳೈಯ್ಯ ಪೇಳ್ವ ಮಾತ । ರತ್ನಾವತಿತಾತ । ಕೇಳು ಕೇಳೈಯ್ಯ ಪೇಳ್ವಮಾತಾ ॥ ಪಲ್ಲ ॥ ಜಾಲಮಾತಲ್ಲವಿದಲ್ಲವೈಯ್ಯ । ಬಂದಿದೆ ಸೈನ್ಯ ಯೇಳು ಶರಧಿಯಂತೆ ಜೀಯ । ಆಳುಕುದುರೆರಥ । ಗಡಣದಿ ಕರಿಘಟೆ । ನೀಲಗಿರಿಯ ತೆರ । ನಂದದಿ ತೋರ್ಪುದು । ಪೇಳಲು ಬೆದರುವೆ । ಬಂದಿಹ ಕೌರವ । ಭೂಲೋಲನೆ ಕೇಳೆನುತೆರಗಿದರೂ ॥ 1 ॥

## ॥ ರಾಗ । ಕಾಂಬೋಧಿ । ಝಂಪೆ ॥

ಚರರ ನುಡಿಗೇಳ್ದು ಚಂದ್ರೇಶಭೂವರನಾಗ । ಕರಸಿ ತನ್ನಾಪ್ತಮಂತ್ರಿಗಳಾ ॥ ತೆರಳಿದನು ಗಡ ಕೌರ । ವೇಂದ್ರ ನಮ್ಮಯ ನಗರ । ಪೊರವಳೆಯೊಳಿನಿತು ವೈಭವದಿ ॥ 1 ॥ ಬಂದ ಹದನೇನೊ ನಾ । ವರಿಯೆ ಬರಲಾ ನೃಪನ । ದಂದುಗವ ಕೇಳ್ದು ಬಳಿಕಿನಲಿ ॥ ಬಂದನಾದರೆ ಕಲಹ । ಕವನ ಪಾಡೇನೆನುತ । ಲೆಂದು ಘರ್ಜಿಸಿ ಮಂತ್ರಿಯೊಡನೆ ॥ 2

॥ ರಾಜನಲ್ಲವೆ ಕುರುಕು । ಲೇಂದ್ರನೈತರಲವಗೆ । ರಾಜೋಪಚಾರವನು ಗೈವಾ ॥ ರಾಜಧರ್ಮವ ಮರೆಯ । ದೆನುತ ತರಿಸಿದನಖಿಳ । ರಾಜವೈಭವದ ವಸ್ತುಗಳಾ ॥ 3 ॥ ಕರಿಘಟೆಗಳೆಂಟುಸಾ । ವಿರಕೋಟಿ ರಥವು ರಥಿ । ಕರುಗಳೆಂಭತ್ತುಲಕ್ಷವನೂ ॥ ತುರಗಪ್ಯಾದಳದೆಣಿಕೆ । ಯರಿಯೆ ರಥವೇರಿ ಶತ । ತರುಣಿಯರ ನರ್ತನದೊಳೊಲಿದೂ ॥ 4 ॥ ಪರಿಪರಿಯವಾದ್ಯರಭಸದಲಿ ನಡೆತಂದು । ಮುದವೆರಸಿ ಬಾಗಿಲನು ಕಳಿಕಳಿದೂ ॥ ಬರುತ ನೋಡಿದ ಸಪ್ತ । ಶರಧಿಸೈನ್ಯದೊಳಿರುವ । ಕುರುವರನ ಕಂಡು ರಥವಿಳಿದೂ ॥ 5 ॥ ಪಟ್ಟೆಪೀತಾಂಬರವು । ಗಂಧಕಸ್ತುರಿಗಳನು । ಯಿಟ್ಟು ಕೌರವನ ಮುಂದೆಸೆಗೆ ॥ ಸೃಷ್ಟಿಪರ ಪದ್ಧತಿಯೊಳೊಲಿದು ಮನ್ನಣೆವೆಸಗಿ । ಕೊಟ್ಟು ಕರ್ಪುರದ ವೀಳೆಯವಾ ॥ 6 ॥

## ॥ ರಾಗ । ಮಾರವಿ । ಯೇಕತಾಳ ॥

ಯಿನಿತೀಪರಿಯುಪಚರಿಸುತ ಕೇಳಿದ । ಜನಪತಿ ನಾಮವನೂ ॥ ವಿನಯದೊಳರುಹು ನೀನಾಳುವ ಧರಣಿಯ । ನೆನಲೆಂದ ಕುರುವರನೂ ॥ 1 ॥ ಅರಿತು ಬಲ್ಲೆಯ ಗಜನಗರವನಾಳುವ । ಧರಣಿಪಾಲಕನೆನಗೆ ॥ ಕುರುವರನೆನುತರುಹುವರೆನಲೆಂದನು । ಮರಳಿ ಸುಯೋಧನಗೆ ॥ 2 ॥ ಬಲ್ಲೆ ನೀನೇಕಚ್ಛತ್ರಾಪತಿಯಂಬುದ । ರೊಳ್ಳಿತೆಂಮಯ ಪುರಕೆ ॥ ಮಲ್ಲಸುಭಟರೊಡನೈದಿದ ಪರಿಯನೂ । ಸೊಲ್ಲಿಸು ಯನಲದಕೆ ॥ 3 ॥

## ॥ ವಾರ್ಧಿಕ್ಯ ॥

ಅರುಹಿದನು ಭೂಪಕೇಳ್ ನಿನ್ನಾತ್ಮಭವೆಯು ಶರ । ವರವನದಿಕಂಡು ಮನದೊಳ್ ಬಯಸಿ ಮರುಗುತಿಹ । ತರಣಿಸುತ ಧೀರ ಕಲಿಕರ್ನನಂಮಾಪ್ತನೆಲೆ । ಅರಿಭಯಂಕರನಾತಗೆ ॥ ತರಳೆ ರತ್ನಾವತಿಯನಿತ್ತು ವೈವಾಹಮಂ । ವಿರಚಿಸುವಡೈತಂದೆ ನೀವುದೆಂದೆನೆ ಕೇಳ್ದು । ವುರಿಮಸಗಿ ಚಂದ್ರೇಶಭೂಪನತಿಕೋಪದಿಂ । ಕಡುಗಿ ಖತಿಯಿಂದೆಂದನೂ ॥

## ॥ ರಾಗ । ಭೈರವಿ । ಅಷ್ಟತಾಳ ॥

ಯೇನಂದೆ ಘಡಭೂಪನೆ । ಅರಸನೆಂದು । ಮಾನಿಸಲೆನ್ನೊಡನೆ ॥ ಹೀನತನವತೋರ್ದೆ । ಖುಲ್ಲಕೊಡೆನು ಸುಪ್ರ । ವೀಣೆಯ ನಡೆ ಘಮ್ಮನೆ ॥ 1 ॥ ಅಂಬಿಗನರ್ಕಜನು । ಯೆನ್ನಂಯ ಮುದ್ದು । ಬಿಂಬಾಧರೆಗೆ ವರನು ॥ ಕುಂಭಿನಿಯೊಳಗಪ್ಪುದುಂಟೆ ಕೇಳೆಲೊ ಭ್ರಷ್ಟ । ರೆಂಬರೆಲ್ಲರು ನಿನ್ನನೂ ॥ 2 ॥ ಕುಲಹೀನನನು

ಕರಿಸಿ । ತಂನಯಸರಿಬಲದಿ ಗದ್ದುಗೆಯೇರಿಸಿ ॥ ಕುಳಿಸುವ ನೀ ಭಂಡಭೂಪನೆ ಗಜಪುರ । ದಿಳೆಯೊಳಗತಿಸಾಹಸೀ ॥ 3 ॥ ಭಂಡ ನಿನ್ನಯ ಪುರದಿ । ಗೈದುದ ಕೆಲ್ಲ । ಕೊಂಡಾಡುವರು ಜಗದಿ ॥ ಕಂಡು ಸೈರಿಪುದೆಂತು ನಡೆ ಷಂಡಸೈನ್ಯವ । ಕೊಂಡು ನೀನತಿಭರದಿ ॥ 4 ॥ ಕೇಳ್ದಾಗ ಕುರುಭೂಪನು । ಉನ್ನತರೋಷ । ತಾಳ್ದುಗಜರುತೆಂದನು । ಖೂಳಧರಣಿಪನಿನ್ನ । ತನುಜೆಯ ಕೊಡದಿರೆ । ಶೀಳ್ದುಬ್ಯಾಹ್ಯೊಸುವೆನೂ ॥ 5 ॥

## ॥ ರಾಗ । ಶಂಕ್ರಾಭರಣ । ಮಟ್ಟೆ ॥

ಯಂದನುಡಿಯ ಕೇಳ್ದು ಕನಲಿ । ಚಂದ್ರಭೂಪನು । ಮಂದಮತಿಯೆ ಕೊಡೆನು ಅಂಬಿ । ಗನಿಗೆ ಸುತೆಯನೂ ॥ ಕೊಂದು ಕಳವೆನೆಲವೊ ನಿಲ್ಲೆ ॥ ನುತ್ತ ಬಾಣವಾ ॥ ಸಂಧಿಸುತಲೆಪೊಡದನೇನ । ನೆಂಬೆ ಚೊದ್ಯವಾ ॥ 1 ॥ ಕಡುಗಿ ಕುರುಕುಲೇಂದ್ರ ನಿನ್ನ । ಜವನ ಸದನಕೆ ಬಡನೃಪಾಲ ಕಳುಹಿ ನಿಂನ । ಸುತೆಯ ವಿವಹಕೆ ॥ ತೊಡಗಿಸುವೆನು ಭಾನುಸುತನಿ । ಗೆನುತ ಶರವನು । ಕಡಿದು ಕೋಪದಿಂದ ಪರ್ವ । ತಾಸ್ತ್ರವೆಚ್ಚನೂ ॥ 2 ॥ ಕಂಡು ರತ್ನವದನೆಜನಕ । ಕುಲಿಶಶರದಲಿ । ತುಂಡುಗೈವುತನಲಶರವ । ಪೂಡಿ ಭರದೊಳೂ ॥ ಭಂಡನೃಪತಿ ಸೈರಿಸೆನುತ । ಬಿಡಲು ರೋಷದಿ । ಡಂಡೆಣಿಸುತಲೊರಗೆ ಕುರುಕು । ಲೇಂದ್ರ ನಿಮುಷದಿ ॥ 3 ॥

## ॥ ಭಾಮಿನಿ ॥

ಧರೆಯೊಳೊರಗಿದ ಕುರುವರನ ಕಂ । ಡುರುತರದ ರೋಷದೊಳಗತಿರಥ । ರುರವವಣಿಸುತಿರಲವರಗೆಲಿದನು ನಿಮುಷಮಾತ್ರದಲಿ ॥ ಕರದಿ ಧನುಶರವಾಂತು ಕಂಗಳೊ । ಳುರಿಯುನುಗುಳುತಲಾ ವಿಕರ್ಣನು । ಧರೆಬಿರಿಯಲಾರ್ಭಟಿಸುತೆಂದನು । ಚಂದ್ರಭೂಪನೊಳೂ ॥ 1 ॥

## ॥ ರಾಗ ॥ ಶಂಕ್ರಾಭರಣ । ಮಟ್ಟೆ ॥

ಖುಲ್ಲನೃಪತಿ ಕೇಳುಸಮರ । ದೊಳ್ಳಿತಲ್ಲ ನಿನ್ನಸುತೆಯ । ಮಲ್ಲಸುಭಟಭಾನುಜನಿಗೆ ವಲ್ಲಭೆಯಳನೂ । ಬಲ್ಲವಿಕೆಯೊಳೆಸಗದಿರಲು । ಕೊಲ್ಲದುಳಿಯೆನೆನುತ ಭರದಿ । ಬಿಲ್ಲನೇರಿಸುತ್ತ ಪೊಡದ । ಬಲ್ಮೆಯಿಂದಲಿ ॥ 1 ॥ ಯಲೆದುರಾತ್ಮ ಬೇಡ ನಿನಗೆ । ಸಲುಗೆಯಿನಿತಿಥ್ಥೇನು ಕೊಡೆನು । ಚಲುವ ಸುತೆಯ ಭಾನುಜನೊಳು । ಸುಲಭದಿಂದಲಿ ॥ ಬಲೆಯ ಬೀಸಿ ಮತ್ಸ್ಯ ಪಿಡಿವ । ಕೆಲಸಕ್ಕೆರವಗೈದರಿನಜ । ನೊಲಿವ ನಿನಗೆಂದೆನುತ ಕಡಿದ । ಬಲುತರಾಸ್ತ್ರವಾ

॥ 2 ॥ ಬಣಗುಭೂಪ ಯಾತಕಿನಿತು । ಗಣಿಸದುಸುರ್ವೆ ನಿನ್ನಶಿರವ । ರಣದಿಕೆಡಹುತರ್ಕಜನಿಗೆ ವಿನಯದಿಂದಲಿ ॥ ವನಿತೆಯನ್ನುನೆಸಗದುಳಿದ । ರನುಜನಲ್ಲ ಕುರುಕುಲೇಂದ್ರ । ಗೆನುತಲಂಡಜಾಸ್ತ್ರಪೊಡದ । ಕಿನಿಸಿನಿಂದಲಿ ॥ 3 ॥ ಬರುವಶರವ ಚಂದ್ರಭೂಪ । ತರಿದು ಪ್ರತಿಶರಾಸ್ತ್ರವೆಸೆಯೆ । ತರಿದು ಬಿಸುಟಧರೆಯೊಳಧಿಕಧುರ ವಿಕರ್ತನೂ । ಅರಸನೋಡುತನಿಲಶರವ । ತಿರುವಿಗೇರಿಸುತ್ತಬಿಡಲು । ಧರೆಯೊಳೊರಗಿ ನಿದ್ರೈದ ಧುರಸಮರ್ಥನೂ ॥ 4 ॥

## ॥ ಭಾಮಿನಿ ॥

ಅರಸನನುಜನ ಧರೆಯೊಳರಗಿಸಿ । ಧುರಕೆ ನಡೆತಹ ದುಶ್ಯಾಸನಾದ್ಯರ । ನೆರಡುಶರದಲಿ ಗೆಲಿದು ಕೊಂದನು ಕೋಟಿ ಸೈನ್ಯವನೂ ॥ ತರುಬಿದನು ಬೆಂಬಿಡದೆಯಾಪ್ತರನೆರವಿಮುರಿದೋಡುತಿರೆ ಶಲ್ಯನು । ವುರಿಯೆನುಗುಳುತ ಸೂಟಿಯಲಿ ನಡಹಾಯ್ದನತಿಭರದಿ ॥ 1 ॥

## ॥ ರಾಗ । ಮಾರವಿ । ಯೇಕತಾಳ ।

ಜನಪತಿ ಕೇಳ್ತವ ತನುಜೆಯ ಕೊಡದಿರ । ಲಿನಜಗೆ ಗರ್ವದೊಳೂ ॥ ರಣದಲಿ ಕೆಡಹುವೆ ನುಡಿಮತವೇನೆನೆ । ಘನತರಕಿನಿಸಿನೊಳೂ ॥ 1 ॥ ಅರುಹಿದ ಶಲ್ಯನೃಪಾಲನೆ । ಜಗದೊಳು । ಗರುವನೆನೆಸಿ ಮೆರದೆ ॥ ತರಣಿಜ ಹೀನನಕಾರ್ಯಕೆ ನೀನಡೆ । ತರುವದು ಹಿತಕರವೆ ॥ 2 । ಭುವನದಿ ಖ್ಯಾತಿಯ ಪಡೆದಿಹ ಕೌರವ । ನವನಿಪಸಖ್ಯದೊಳು ॥ ತವೆಸಿಂಹಾಸನವಿತ್ತುಪಚರಿಸುವ । ನವನೆಕುಲಜಕೇಳೂ ॥ 3 ॥ ಅರಸ ವನೌಕಸನಾಗಲು ಗರ್ಧಭ । ಕರುಣಿಕ ಧರೆಯೊಳಗೆ ॥ ವರಪ್ರಜೆಗಳುಮವರಂತೆ ನಡವ ಪರಿ । ಯರಿತೆನು ನಿನ್ನೊಳಗೆ ॥ 4 ॥ ಧರ್ಮಕಥನವನು ಬಿಡು ತವಸುತೆಯನು । ಕೂರ್ಮೆಯೊಳಿನಜನಿಗೆ ॥ ವೋರ್ಮನದಲಿ ಕೊಡದೀರ್ದರೆ ಪ್ಲವಗರ । ವರ್ಮವ ನೋಡ್ಕಡೆಗೆ ॥ 5 ॥ ಕಿಡಿಕಿಡಿಯುಗುಳುತಲೆಂದನು ಶಲ್ಯಗೆ ॥ ಕೊಡೆ ಕೊಡೆ ತನುಜೆಯನೂ ॥ ಕಡಿದುರುಳಿಚುವೆನು ನುಡಿಯದಿರೀಪರಿ ॥ ನಡೆನಡೆಯನಲವನೂ ॥ 6 ॥

## ॥ ರಾಗ । ಶಂಕ್ರಾಭರಣ । ಮಟ್ಟ ॥

ಯನಲುಕೇಳುತಾಗ ಶಲ್ಯ । ನಿವನ ಶರವನು । ಕ್ಷಣದಿತರಿವೆನೆನುತಭರದಿ ।

ರೋಷಮಳೆಯನು ॥ ಜನಪಸ್ಯೆರಿಸೆಲವೊ ಕೀಶ ॥ ನೆನುವದೀಕ್ಷಣ । ಗುಣಿಸಿತೋರ್ಪೆನೆನುತ ಪೊಡೆದ । ನತಿವಿಚಕ್ಷಣಾ ॥ 1 ॥ ನಡದು ಬರುವ ಶರವ ಕಡಿದು । ಚಂದ್ರಭೂಪನು । ಘುಡುಘುಡಿಸುತಮೇಘಶರವ । ಬಿಡಲುಶಲ್ಯನೂ ॥ ನಡುವೆತುಂಡುಗೈವುತದನು । ವರುಣವಿಶಿಖವಾ ॥ ಫಡಫಡೆನುತಲೆಸೆಯೆತರಿದ । ರತ್ನಪುರಧವಾ ॥ 2 ॥ ಬಳಿಕ ರೋಷದಿಂದ ಶಲ್ಯ । ನುರಗಶರವನು ಸೆಳೆದು ಬಿಡಲು ನೋಡಿ ನೃಪತಿ । ನಡುವೆ ತರಿದನೂ ॥ ಅಳಿಯದಿವರಪಂಥ ಯೇಳು । ಜಾವತನಕರಾ । ಘುಳಿಲನಗ್ನಿಶರವನೆಸದ । ರತ್ನಪುರವರಾ ॥ 3 ॥ ಕೆಂಡನುಗುಳುತ್ತೈವಶರವ । ನೋಡಿಶಲ್ಯನು । ತುಂಡುಗೈವುತಿರಲುರೋಷ । ದಿಂದಲರಸನೂ ॥ ಕಂಡುಭರದಿ ತೇನಪವಿಯಶರವನು । ಗೊಂಡುಪೊಡೆಯರಥದಿನಿದ್ರೆಗೈದಶಲ್ಯನೂ ॥ 4 ॥

## ॥ ಭಾಮಿನಿ ॥

ಮಾದ್ರಭೂವರರಥದೊಳೊರಗ ಸ । ಮುದ್ರದಂತೆಸದೀರ್ದ ಸೈನ್ಯವ । ಕದ್ರುವಾತ್ಮಜಶರದಿ ಕಾರ್ಮುಡುವಗ್ರಜನಪುರಿಗೆ ॥ ಭದ್ರಿಸುತಬಳಿಕುಳಿದಸೈನ್ಯವ । ವಿದ್ರುಮಂಗೈಸುತಲಿತಿರುಗಿದ । ಗೆದ್ಧಗೆಲವಿನ ಭೇರಿನಾದದಿ ಸಕಲಬಲಸಹಿತಾ ॥ 1 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ಯಿತ್ತ ಕೌರವ ಕಲ್ಮಶದ ಶಿರ । ವೆತ್ತು ತನ್ನನುಜಾತಮುಖ್ಯರ । ಹತ್ತಿರಕೆ ನಡೆತಂದು ನೆಗಹಿದ ಚಿತ್ತಮರುಗಿ ॥ 1 ॥ ಬಾಣವನು ತೆಗತೆಗದು ಮೆಲ್ಲನೆ । ಹೂಣಿಸಿದನೌಷಧಿಯನೆದ್ದರು । ಪ್ರಾಣವುಳಿದವರೊಡನೆಪೇಳ್ದನು । ಕ್ಷೋಣಿಪತಿಯೂ ॥ 2 ॥ ನೋಡಿದಿರೆ ಚಂದ್ರೇಶನಧಟನು । ರೂಢಿಯೊಳು ವರಗಿಸಿದನೆಲ್ಲರ । ಪಾಡುಪಂಥವುಸಂದುದಿನ್ನಿದ । ಕಾಡಲೇನ್ನೈ ॥ 3 ॥ ಮರಳಿಕಲಹದೊಳೊದಗಲೆಲ್ಲರ । ಹರಣಗೊಂಡಪ ಕೊಡನು ಸುತೆಯನು । ತರಣಿಜಗೆ ಬದಲೊಂದು ಜಾಯೆಯ । ವಿರಚಿಸುವೆನೂ ॥ 4 ॥ ಯನುತರುಹಿ ಬೆದರುತಲೆ ಸೇನೆಯ । ನನುಕರಿಸಿ ನಡೆತಂದ ವಹಿಲದಿ ಜನಪದುಯೋರ್ಧನನು ವಂಗಕೆ । ವಿನಯದಿಂದಾ ॥ 5 ॥

## ॥ ರಾಗ । ಸಾಂಗತ್ಯ । ರೂಪಕ ॥

ಕೌರವ ಬರುವದ ಕಾಣುತರ್ಕಜನಾಗ । ತೀವ್ರದಿಂದೆದ್ದುವಂದಿಸುತಾ ॥ ಸೌರಭ್ಯವಸ್ತುಮುಂದಿರಿಸುತಾಸನವಿತ್ತು । ಭೈರ ತಾಂಬೂಲವ ನೀಡಿದನೂ ॥ 1 ॥ ಧೊರೆರಾಯ

ಕೇಳೆನ್ನ । ಹರಣವನುಳುಹುವ । ತೆರನಗೈದೆಯೊ ಪ್ರಾಣಗಳೆವಾ ॥ ಪರಿಯಗೈದೆಯೊ ಯೇನೊಂ । ದರುಹಬೇಕೆನಲಾಗ । ಕುರುವರದುಗುಡದೊಳೆಂದಾ ॥ 2 ॥ ಯಿನಜಾತ ನೀಪೇಳ್ದ । ವನಿತೆಯ ದೆಸೆಗಾಗಿ । ಜನಪಚಂದ್ರೇಶನೊಳರುಹೆ ॥ ಮುನಿದಾತಕೊಡೆನೆನೆ । ಸೆಣಸಲೆಂಮಯ ಸೈನ್ಯ । ವನು ಕೊಂದು ಕೆಡಹಿದ ರಣದಿ ॥ 3 ॥ ವೀರಮಾದ್ರೇಶ ವಿಕರ್ನ ದುಶ್ಯಾಸನ । ಭೂರಿಶ್ರವನು ಪಾಂಡ್ಯನೃಪನೂ ॥ ನಾರಿದುಸ್ಸಳೆಪತಿ । ಶಕುನಿ ಮಂತಾಗಿಹ । ವೀರರಗೆಲಿದ ಸಂಗರದಿ ॥ 4 ॥ ತುಂಗವಿಕ್ರಮನಾತ । ನನು ಗೆಲ್ವ ಭಟರುಂಟೆ ಭಂಗುರವ್ಯಾತೆಂಮಬಲವೊ ॥ ಪುಂಗಥೆಂಯೆನೆಸಾಕು । ಬದಲೋರ್ವಚಲುವೆಯಾ । ದಂಗನೆಯನು ಗೈವೆನಿನಗೆ ॥ 5 ॥ ಯಂದಮಾತನುಕೇಳಿ । ಖಿಡಿಖಿಡಿಯುಗುಳುತ್ತ । ಲೆಂದನರ್ಕಜನು ರೋಷದಲಿ ॥ ತಂದಲ್ಲದಿರೆ ಗೌರ । ಭೂಪನಾತ್ಮಜೆಯನೀ ಮಂದಿರ ಪೊಗೆನು ತಾನೆಂದಾ ॥ 6 ॥

## ॥ ವಾರ್ಧಿಕ್ಯ ॥

ಬಿಡುಬಿಡೆಲೆ ಕುರುಕುಲೋದ್ಭವ ಪೊಗಳದಿರು ಬರಿದೆ ಬಡನೃಪಾಲನ ತ್ಕರಿದು ॥ ತಾರದಿರೆತರುಣಿಯನು । ಪೊಡವಿಯೊಳು ಭಾರ್ಗವನ ಶಿಷ್ಯತಾನಲ್ಲೆನುತ ಘುಡುಘುಡಿಸುತಡಿಯಿಟ್ಟನೂ ॥ ತಡೆಯದೇರಿದ ರಥವಮಂತ್ರಿಪ್ರಜ್ಞಾನಿಗಳ । ಗಡಣದಿಂ ತ್ವರದಿ ನಡಸೆನುತ ಸಂಜ್ಞನಿಗಾಗ । ಅಡಿಗಡಿಗೆ ಘರ್ಜಿಸುತ ವೇಗದಿಂದಾ ರತ್ನಪೊಡವಿಪನ ಮನೆಗೈಯ್ಯಲೂ ॥ 1 ॥

## ॥ ರಾಗ । ಕಾಂಬೋಧಿ । ಝಂಪೆ ॥

ಬರಲು ಪೊರವಳೆಯದೊಳು । ತಡದರಾಕ್ಷಣದಿ ಚರ । ರುರವಣಿಸುತಧಿಕ ಬಿಂಕದೊಳೂ ॥ ತರಣಿಸುತನವರಹಾ । ದಡ್ಡವಿಸಿ ಮೂಗಿನೊಳು । ಬರದು ಸುಣವನು ಕರಬಿಗಿದೂ ॥ 2 ॥ ನೂಕಿದನು ನಿಮ್ಮರಸೆ । ಗರುಹಿ ಬೇಗದೊಳು ಕರೆ । ಸಾಕಿದನನೆನುತ ಘರ್ಜಿಸಲೂ ॥ 3 ॥ ಬೇಕುಬೇಡೆಂಬವರ । ಕಾಣದೋಡಿದರರಸ । ನಾಕೆಲನಸಾರುತರುಹಿದರೂ ॥ 4 ॥

## ॥ ಲಾವಣಿ ॥

ಪುಡವಿಪಾಲ ಬಿನ್ನಹನಾವ್ । ನುಡಿಯೇ ಬೆದರಿಕೆಯಾಗೈತೆ । ದಡಿಗನೋರ್ವ ಪುರದ ಬಾಹ್ಯದಿ । ಬಂದಿಹ ಧೊರೆಯೆ ॥ 1 ॥ ಬಿಡೆವು ಪೋಗಬೇಡ ಯನಲು ।

ಹಿಡಿದು ಬಡಿದು ಬಿಗಿದು ಕರವ । ಘುಡುಘುಡಿಸುತ ನೂಕಿಕಳುಹಲು । ಬಂದೆವು ಧೊರೆಯೆ ॥ 2 ॥ ಮಿಕ್ಕಿಮುಂದೆಬರುತಾನೆಂದು । ಯಿಕ್ಕಿದೆವ್‌ಬಾಗಿಲವನೆಂಮ । ಸೊಕ್ಕಮುರಿದು ಬಿಗಿದು ಕಟ್ಟಿದಾ । ತಡೆಯದೆ ಧೊರೆಯೆ ॥ 3 ॥ ಯಾತಕ್ಕೆದನೆಂಬುದರಿಯೆ । ಭೂತಳೇಶ ಹೊರಡು ಬೇಗ । ಲಾತ ಬರದ ಸುಂಣ ಮೂಗಿಗೆ । ನೋಡ್ಯೆಯ್ಯಧೊರೆಯೆ ॥ 4 ॥

## ॥ ಭಾಮಿನಿ ॥

ದೂತರಾಡಿದ ನುಡಿಯಕೇಳುತ । ಭೂತಳೇಶ್ವರ ರೋಷದಿಂದಲಿ । ಮಾತ ನಿಲಿಸೆಂದೆನುತ ಮುನಿದಾರ್ಭಟಿಸುತಿಂತೆಂದಾ ॥ ಜಾತೆಗೋಸುಗ ಬಂದನೆಂಬುವ । ನಾತತ್ತೂಕ್ಷಣವರಿದು ನಡೆತಂ । ದೀತನನು ನುಡಿಸಿದನು ಬಲಸಹ ಮಧುರವಚನದಲಿ ॥ 1 ॥

## ॥ ರಾಗ । ಕೇದಾರಗೌಳ । ಅಷ್ಟತಾಳ ॥

ಯಾರ್ಯೆಯ್ಯ ನೀ ಸು । ಕುಮಾರನಾಗಿಯೆ ಚಲ್ವ । ಮಾರನಿಂದಧಿಕತೇಜಾ ॥ ಭೂರಿವಿಕ್ರಮ ನಿನ್ನ । ಪೆಸರರುಹುವದೆನ । ಲಾ ರವಿಸುತ ನುಡಿದಾ ॥ 1 ॥ ಜಗದಜೀವವರಿಗೆಲ್ಲ । ವಾಶ್ರಯವಾಗಿರ್ಪ । ಗಗನಮಣಿಯಮಗನು ॥ ಜಗಧೀರಕರ್ನನೆಂ । ದರುಹುವರೆನಗೆನೆ । ನಗುತೆಂದಭೂವರೂ ॥ 2 ॥ ಧೀರನೀನಾದರೊಳ್ಳಿತು ನಮ್ಮ ನಗರವ । ಸಾರಿ ಬಂದಿರುವದೇನು ॥ ಕಾರಣ ವಿನಯದೊಳರುಹೆನಲರ್ಕಜ । ನಾರಿಜನಕಗೆಂದನೂ ॥ 3 ॥ ವಾವ ಕೇಳ್‌ನಿನ್ನಾತ್ಮಭವೆಯನು ಯನಗಿತ್ತು । ಠೀವಿಯಿಂ ಲಗ್ನವನು । ಸಾವಧಾನದಿಗ್ಯೆವುತುಳುಹೆಂನ ಪ್ರಾಣವ । ಸಾವೆನಲ್ಲದಿರೆಂದನೂ ॥ 4 ॥

## ॥ ರಾಗ । ಕೆತಾರ । ಝುಂಪೆ ॥

ಯನಲರ್ಕಜನಮಾತನು । ಕೇಳುತ್ತ । ಜನಪಚಂದ್ರೇಶ ತಾನೂ । ಮುನಿಮುನಿದು ಮತ್ತೆ ನಗೆಯ । ಗೈದಾಪ್ತ । ಜನಕೆಂದನಿವನ ಬಗೆಯಾ ॥ 1 ॥ ಈತನಾರೆಂದರಿಯಿರ್ಯೆ । ಅಂಬಿಗರ । ಜಾತನೀತನು ಕಾಣಿರ್ಯೆ । ಈತ ದಿನದಿನದಿ ನದಿಯ । ಚರಿಸಿ ಪಿಡಿವಾತಮತ್ಸ್ಯಗಳಬಳಿಯಾ ॥ 2 ॥ ಕಂಡರತಿಚಲುವನಿಹನು । ಅಂಬಿಗರ । ಹೆಂಡಿರೊಡನಾಡಿದವನೂ । ಗಂಡುಡುಗೆ ಧರಿಸಲಿವಗೆ । ದಯುಗೈದ । ಭಂಡರಾರ್‌ಲೋಕದೊಳಗೆ ॥ 3 ॥ ಕೊಡಲಹುದೆ ನಮ್ಮಣುಗೆಯ ಜಗನಿಂದ್ಯ । ಕ್ನೊಡೆಯನಾಗೆಂತೀಪರಿಯ । ಸಡಗರದಕಾರ್ಯವೆಮಗೆ । ಸಲುವುದೆ॥ ಫಡಮರುಳೆ

ತೆರಳು ಮನೆಗೆ ॥ 4 ॥ ಹರಿಯಸುತೆಯನು ಶುನಕಗೆ । ಕೊಡಲಹುದೆ । ಧರಣಿಪರು ಕೈವರ್ತವೆ ॥ ತರಳೆಯನು ಮತ್ಸ್ಯಪಿಡಿವಾ । ಬಲೆಗೈಯ್ಯ । ಲರಿಯದಿಹ ಮುದ್ದುಮಗುವಾ ॥ 5 ॥ ಯೇನೆಲವೊ ಬೋವಿರವನೆ । ನಿನ್ನಕುಲ । ಮಾನಿನಿಯನರಸುತದನೇ । ಹೀನನಿಂನಿಷ್ಟದಂತೆ ॥ ರಚಿಸು ನೃಪ । ಜಾಣೆಸೇರುವಳೆ ಭ್ರಾಂತೆ ॥ 6 ॥

## ॥ ವಾರ್ಧಿಕ್ಯ ॥

ಸಾರುಸಾರೆಲೊ ಕಬ್ಬಿಗಾತ್ಮಜನೆ ಕೊಡೆನಿನಗೆ । ನಾರಿಯನು ಬರಿದೆ ಕುಲಹೀನ ನಿನಗ್ಯಾಕಿನಿತು । ಭೂರಿಬಿರಿದುಗಳಕಟ ಮತ್ಸ್ಯವನು ತರಿವವಗೆ । ನಾರಿ ನೃಪಸುತೆಯಪ್ಪಳೆ ॥ ತೋರದಿರ್ ವದನವಂ ನಡೆಯನಲು ಕೇಳ್ದುಖತಿ । ವೇರಿಕುಡಿಮೀಶೆಕುಣಿದಾಡುತುರಿಕಂಗಳೊಳ್ । ಕಾರಿಕಲ್ಪಾಂತಭೈರವನಂತೆ ರವಿತನಯ । ಧಾರುಣಿಯನೊದದೆಂದನೂ ॥ 1 ॥

## ॥ ರಾಗ । ಭೈರವಿ । ಅಷ್ಟತಾಳ ॥

ಕಡುಭಂಡಭೂಪಕೇಳು । ನಿನ್ನಯ ಗ್ರೀವ । ಕಡಿದುರುಳಿಚುವೆತಾಳು ॥ ಮೃಡನು ತಾನಿದಿರಾಂತು । ತಡದರು ಬಿಡೆನಿನ್ನ । ಪಡದಸುತೆಯನೆಂದನೂ ॥ 1 ॥ ಕುಲದಿವಿವರ್ಣನೆಂದು । ಜರದೆಯೊಯನ್ನ । ಭಳಿರೆಮೆಚ್ಚಿದೆನಾನಿಂದು । ಯಿಳೆಯೊಳಗ್ಗಳಧೀರ । ನೆಂಬುದರಿಯೆಧೂರ್ತ । ಕೆಲೆಯದಿರ್‌ವ್ಯರ್ಥನೀನೂ ॥ 2 ॥ ಬಲ್ಲೆನಂಬಿಗ ನಿನ್ನನು । ಕೊಡೆನೆನುವ । ಮಲ್ಲಿಕಗಂಧಿಯುನು ॥ ವಲ್ಲಭೆಯುನಿಸುವೆ । ತ್ರೈಲೋಕವಿಜಯನೀಗಲ್ಲದೀಯೆನುಯಂದನೂ ॥ 3 ॥ ನಾರಿಜನಕನೆನ್ನುತಾ । ಕೈತಡದರೆ । ಮೀರಿ ನುಡಿದೆಯ ಭ್ರಾಂತ ॥ ಅರಣ್ಯದೊಳುಚರಿಪಾತಗೀವರೆಖೂಳ । ನಾರಿಯಕೊಲಿಸದಿರ್ವೆರ್ಥಾ ॥ 4 ॥ ನರನತಿವೆಗ್ಗಳನು । ಲೋಕದೊಳೆಂಬು । ದರಿಯುದೀರ್ದಪೆವೆನಾವು । ಬರಿದೆಗಳಹಬೇಡಸಾಯುದಿರ್ನಡೆಯುನ । ಉರಿಸೂಸಿರವಿಜಾತನೂ ॥ 5 ॥ ತೆಗೆದುರಿಬಾಣವನು । ಶೆಳದುಕೆನ್ನೆ । ಗುಗಿದೆಚ್ಚರವಿಜಾತನು । ಜಗಸುಡುತ್ಯೆತರೆಕಂಡದ । ತರಿದೆಂದ ಮಿಗೆಕೋಪದೊಳು ಭೂಪನೂ ॥ 6 ॥

## ॥ ರಾಗ । ಮಾರವಿ । ಯೇಕತಾಳ ॥

ಅಂಬಿಗ ನಡೆನಡೆಬೇಗದಿನೀನಪ । ರಾಂಬುಧಿತಡಿವಿಡಿದು । ಯಿಂಬದಲಬಲೆಗಳ ಬೀಸದೆ ಕಲಹದ । ಸಂಭ್ರಮವ್ಯಾಕಹುದೂ ॥ 1 ॥ ಸಿಕ್ಕಿದ ಝುಷವನು ವಿಕ್ರೈಸುತ ಬಹ ।

ರೊಕ್ಕದಿ ಜೀವಿಸುವಾ ॥ ತಕ್ಕ ಸುದತಿಯರನೊಡನಾಡೆನಲದ । ಕೊಕ್ಕಣಿಸಿದ ನಗುತಾ ॥ 2 ॥ ಶರಧಿಯ ಮತ್ಸ್ಯವತರಿದಂದದಿ ತವ । ಶಿರವನು ಕೆಡಹುವೆನೂ ॥ ಧುರದೊಳುನಿಂನನುಕಾಯುವಸುಭಟರ । ಕರಸೆನುತಸ್ತ್ರವನೂ ॥ 3 ॥ ಬಿಡದೈತರಲದ ಕಾಣುತ ಲರಸನು । ಕಡಿಕಡಿದುರುಳಿಚುತಾ ॥ ಪೊಡವಿಯು ಮುಸುಕುವ ತೆರದೊಳು ಬಾಣವ । ಪೊಡೆಯಲು ತರಣಿಸುತಾ ॥ 4 ॥ ಕೆಂಡವನುಗುಳುತ ನೃಪ ಪೊಡದಸ್ತ್ರವ । ತುಂಡಿಸಿ ರೋಷದೊಳು । ಚಂಡಪರಾಕ್ರಮಿ ಮಾರುತಶರವನು । ಕೊಂಡಿಡೆನಿಮುಷದೊಳೂ ॥ 5 ॥ ತರಿದದ ನೃಪನತಿರೋಷದೊಳದ್ರಿಯ । ಶರವನು ರವಿಸುತಗೆ ॥ ತ್ವರಿತದೊಳಿಡಲದು ನಾಂಟೆ ವರಗಿ ತರ । ಹರಿಸುತ ಧರೆಯೊಳಗೆ ॥ 6 ॥

## ॥ ರಾಗ ಪಂಚಗಾತಿ । ಮಟ್ಟೆ ॥

ತರಣಿಜಾತ ಭರದೊಳೇಳು । ತರಸಗೆಂದನೆಲವೊನಿಂನ । ಶಿರವ ತರಿವೆ ನೋಡೆಂದೆನುತ । ಉರುತರಾಸ್ತ್ರವಾ ॥ ಕರದಿ ಧರಿಸಿ ಪೊಡೆಯೆ ಕೆನ್ನೆ । ಗೆರಗಲವನು ಜೊಂಪಿನಿಂದ । ಧರೆಯೊಳೊರಗಿಚೇತರಿಸುತ । ಲರಸನೆಂದನೂ ॥ 1 ॥ ಯಿನಿತುಬಲುಹಿಂದುಂಟೆ ರಣದಿ ಸೆಣಸುವಧಟ ನೋಳ್ಪೆನೆಲವೊ । ಬಣಗು ಸೈರಿಸೆನುತ ಪೊಡದ ಘನತರಾಸ್ತ್ರವಾ ॥ ದಿನಪಜಾತನುರವನಾಂಟೆ । ರಣದೊಳೊರಗಲರುಣಜಲದ । ವನಧಿ ಪರಿದುದನಕ ಬಿಡದೆಜನಪಕ್ರೋಧದಿ ॥ 2 ॥

## ॥ ವಾರ್ಧಿಕ್ಯ ॥

ಮೆಟ್ಟಿದಂ ಚರಣದಿಂದಡಿಗಡಿಗೆ ವದನಮಂ । ಕುಟ್ಟಿದಂ ತರಣಿಜನ ಸರ್ವಾಂಗವೆಲ್ಲವಂ । ಹೆಟ್ಟಿದಂ ಶರದಿಂದ ಪೊರಳಾಡುತಿರ್ದನೆಲೆ ಸೃಷ್ಟಿಪತಿಕೇಳ್‌ಚಿತ್ರವಾ ॥ ಕೊಟ್ಟಿರ್ದ ರುಷಿವರನವರವಿದಲ್ಲದೆ ಧುರದೊ । ಳಟ್ಟಹಾಸದಿಮೊದಲುಸೆಣಸಿರ್ದರಿಂದಲಿವ । ಸೃಷ್ಟಿಗೊರಗಿದನಲ್ಲದೀತನೊಳ್‌ಮಲತವರು ಕಷ್ಟಕೊಳಗಾಗದಿಹರೆ ॥ 1 ॥

## ॥ ಭಾಮಿನಿ ॥

ಯಿತ್ತ ಸೌಧವನೇರಿ ಕರ್ನನ । ಚಿತ್ತದೊಳು ನೆನವಬಲೆ ಕಂಡಳು । ಪೃಥ್ವಿಯೊಳು ಪೊರಳಾಡುತಿರ್ಪನ । ಮನದಮರುಕದಲಿ ॥ ಮತ್ತಕಾಶಿನಿರತ್ನವದನೆಯು । ಪೆತ್ತವಳ ಬಳಿಗೈದು ತನ್ನಯ । ಚಿತ್ತದೊಲವನು ಪೇಳ್ದಳೊಂದಿಸಿ । ಬಿಕ್ಕಿಬಿರಿದಳುತಾ ॥ 1 ॥

## ॥ ರಾಗ । ಘಂಟಾರವ । ಆದಿತಾಳ ॥

ಜನನಿ ಕೇಳೆಂನಯ ಮನದಪತಿಯನಿಂದು । ಜನಕ ಕೊಲ್ಲುವನೈಯ್ಯ ನಿನಗಿದು ಹಿತವೆ ॥ ತನುವ ನೀಗುವೆನೆಂನ । ವಿನಯದೊಳಿನಜಗೆ । ಘನಬೇಗಕೊಡದಿರಲೆನಲೆಂದಳವಳ್ಗೆ ॥ 1 ॥ ಕುವರಿ ನೀನೆಂತು ಬಗೆದೆ ಕಾಂತನನು ಕಂಡ । ಹವಣೆಲ್ಲಿಯರುಹು ಬೇಗದೊಳೂ ॥ ಕವಲು ಮನವ ಬಿಡು । ಪತಿಯನಿಸುವೆಪೋಗಿ । ಬವರವ ನಿಲಿಸುವೆನೆನಲೆಂದಲವಳೂ ॥ 2 ॥ ತರುಣಿಯರನು ಕೂಡಿ । ಶರಕೇಳ್ವೆಗೈದಲಾ । ತರಣಿಜ ನಡೆತಂದೆನ್ನೆಡೆಗೆ ॥ ಪರಿಪರಿಯಿಂದುಪ । ಚರಿಸಿ ಮಾತಾಡಿದ । ತರುಣಿಗರ್ವದೊಳ್ಳೈದೆಮನೆಗೆ ॥ 3 ॥ ಬಾಲಕಿ ನಿನಗಿಂತು ಮನವಿರಲೆಂಮೊಳು । ಪೇಳದಿನಿತು ರಹಸ್ಯದೊಳೂ ॥ ಲೀಲೆಯಿಂದೀರ್ದೆ ಯಾ । ಕೆನಲೆಂದಳೊಯ್ಯನಾ । ಲೋಲಾಕ್ಷಿ ಮರುಗಿ ಮಾತೆಯೊಳೂ ॥ 4 ॥ ಶೂರನಾತನು ಕಂಡಮೇಲೆನ್ನಬಿಡಬಂದು । ಧಾರುಣಿಪನ ಮತವಿಡಿದೂ ॥ ಕಾರಣಗೈದಪನೆಂತು ನಾ ಬಗದಿರ್ದೆ । ಬಾರದಿರನು ಯಂಬುದರಿತೂ ॥ 5 ॥ ಮಗಳೆ ಕೇಳರಿತೆ ನಿನ್ನಿಷ್ಟದಂತಾಗಲಿ । ಪೊಗುವೆ ನಾಕಣದ ಮಧ್ಯದೊಳೂ ॥ ಬಗೆಯಿದೆಲ್ಲವನರುಹುತ ವರನಿಗೆ ನಿನ್ನ । ಜಗಚಕ್ಷುಜನಿಗೀವೆನೆನುತಪೇಳಿದಳೂ ॥ 6 ॥

## ॥ ಭಾಮಿನಿ ॥

ಬಾಲಕಿಯ ಬಹುವಿಧದಿ ನಂಬಿಸಿ । ಲೋಲಜಾಂಬಕಿ ರತ್ನಗರ್ಭೆಯು । ಬಾಲೆಯರಗಣದಲಿ ಬಂದಳು ತನ್ನ ಪತಿಯೆಡೆಗೆ ॥ ಬಾಲಸೂರ್ಯನ ತೆರದೊಳಿಹನನು । ಕಾಲಿನಿಂದೊದೆಯುತಿರೆ ಕಾಣುತ । ಭಾಳವನು ಬಡಿದೊಡನೆ ಪತಿಪದಕೆರಗಿ ಪೇಳಿದಳೂ ॥ 1 ॥

## ॥ ರಾಗ । ಕೆತಾರಗೌಳ । ಅಷ್ಟತಾಳ ॥

ಯರೆಯ ಕೇಳೆನ್ನಯ । ತರಳೆಯ ಪತಿಯನ್ನು । ಚರಣದಿಂದೊದದು ಹೀಗೆ ॥ ಧುರದೊಳು ಕೆಡಹುವ । ಪರಿಯೇನು ಬಾಲಕಿ । ಹರಣವಿರಿಸಿಬಾಳ್ವಳೆ ॥ 1 ॥ ಯೇನಿದೆತ್ತಣ ಮಾತು । ಮಾನಿನಿ ನಡೆನಡೆ । ಭಾನುಜಾತಗೆ ನಂಮಯಾ ॥ ಪ್ರಾಣದಾತ್ಮಜೆಗೆಂತು । ರಮಣನಹನೆ ಕುಲ । ಹೀನನೆಂಬುದನರಿಯಾ ॥ 2 ॥ ಮಗಳಂದು ಜಲಕೇಳಿಗೈದಾಗಲ್ಯೆದಿಹ । ಜಗಚಕ್ಷುವಾತ್ಮಜನಾ ॥ ಬಗದಳು ಗಡಹೀನ । ನಲ್ಲ ನೀನಾತಗೆ । ಮಗಳನೀವುದು ರಮಣಾ ॥ 3 ॥ ಯನಲೆಂದನೆಲೆಗೆ । ಮಾನಿನಿ ಕೇಳು ನಿನ್ನಯ । ಮನದಂದವಾಗಲಿನ್ನೂ

॥ ಯಿನಜನ ಸಂತೈಸು । ತೀವೆ ಪುತ್ರಿಯನೆಂದು । ಜನಪ ನಂಬುಗೆಯಿತ್ತನೂ ॥ 4 ॥ ರಾಣಿಯು ಮತವಿಡಿ । ದರಸನು ಪ್ರೇಮದಿ । ಭಾನುನಂದನನೊಡನೆ ॥ ಜಾಣೆಯನೀವೆಯೇಳೆನುತೆತ್ತಿ ಮುದ್ದಿಸಿ । ಕ್ಷೋಣಿಪ ತಂನೊಡನೆ ॥ 5 ॥ ಕರತಂದು ಸ್ನಾನವ । ವಿರಚಿಸಿ ಕೊಣನೊಳು । ಪರಿವಾರಸಹಿತಲಂದೂ ॥ ತೆರಳಿ ಗೃಹಕೆ ನೀ । ವಾರ್ತೆಯದುಹಿತೆಯೊಳ್ । ವರದಳಾಜನನಿ ಬಂದೂ ॥ 6 ॥

## ॥ ರಾಗ । ಸಾಂಗತ್ಯ । ರೂಪಕ ॥

ಧರಣೆಂದ್ರ ಕೇಳ್‌ಬಳಿ । ಕರಸ ಚಂದ್ರೇಶನು । ಕರಸಿ ತನ್ನಾಪ್ತಮಂತ್ರಿಯೊಳು ॥ ತರಣಿಸಂಜಾತಗೆ । ಕೊಡುವೆ ಪುತ್ರಿಯನಮ್ಮ । ಪುರವ ಶೃಂಗರಿಸು ಬೇಗದೊಳೂ ॥ 1 ॥ ಅರಸನಪ್ಪಣೆಗೊಂಡು । ಮಂತ್ರಿವರ್ಯನು ಬೇಗ । ಕರಸಿ ಶಿಲ್ಪಿಗಳನಾಕ್ಷಣದಿ ॥ ಪರಿಪರಿವಿಭವದಿ । ಪುರವ ಶೃಂಗರಿಸಿದ । ಕೆರೆಕೊಣಸಹಿತ ವಿಸ್ತರದಿ ॥ 2 ॥ ಕುರುಜು ತೋರಣವು ಮೇ । ಲ್ಗಟ್ಟುಗಳಲ್ಲಲ್ಲಿ । ಸುರಪನ ಸಭೆಗತಿ ಮಿಗಿಲೂ ॥ ವರರತುನದಮಂಟ । ಪಗಳನ್ನು ಗೈದತಿ । ವರಸನೊಳರುಹೆ ಬೇಗದೊಳೂ ॥ 3 ॥ ಕಂಡದ ಧರಣೆಂದ್ರ ॥ ಕರಸಿ ವಿಬುಧ್‌ನುತ । ಗೊಂಡುತಾಂಬರಿಸಿಲೇಖನವಾ ॥ ಚಂಡದೂತರೊಳುಡುಗೆರೆಸಹಿತೀಯೆಕೈ । ಕೊಂಡವರ್ಪೊರಟುವೈಭವವಾ ॥ ಅರುಹುತ್ತರಸರಿಂಗೆ । ಯುಡುಗೆರೆ ವಾಲೆಯ । ಹರುಷದಿಂದೀಯುತ್ತ ಭರದಿ ॥ ಕರಿನಗರವ ಸಾರ್ದು ಕಾಣುತ್ತರಸನಿಂಗೆ । ಚರರು ಲೇಖನವೀಯೆ ಮುದದಿ ॥ 5 ॥

## ॥ ರಾಗ । ಕಾಂಭೋದಿ । ಝಂಪೆ ॥

ಅರಸಕೌರವನತುಳ । ವಿಭವದೊಳುಪತ್ರಿಕೆಯ । ಕರುಣಿಕರೊಳಿತ್ತವಾಚಿಸುತಾ ॥ ಹರುಷದೊಳಗೆಂದ ನೋಡಿದಿರೆ ರವಿಯಾತ್ಮಜಗೆ । ಅರಸನಿತ್ತಪನಂತೆ ಸುತೆಯಾ ॥ 1 ॥ ಯಿನಜನುದ್ವಾಹದೆಸೆ । ಗನುಜಮಿತ್ರರುಸಹಿತ । ಘನಬೇಗ ಪೋಗಬೇಕೆನುತಲಾಕ್ಷಣ ದಿ ॥ ಅನುವರದೊಳಾದಪರ ಜಯವೆಣಿಸದಾ ನೃಪನು । ವಿನಯದೊಳು ಪೊರಟನುತ್ಸವದಿ ॥ 2 ॥ ಭೂರಿಮಾರ್ಬಲಸಹಿತ ನಡೆತಂದ ಕೌರವನು । ನಾರಿಯರ ನರ್ತನದೊಳೊಲಿದೂ ॥ ಸಾರಿದನು ಚಂದ್ರೇಶ । ನರಮನೆಯ ಕಂಡುಮುದ । ವೇರಿ ನೃಪನಿದಿರ್ಗೊಂಡು ಭರದಿ ॥ 3 ॥ ಪರಿಪರಿಯೊಳುಪಚರಿಸಿ । ಅರಸನೊಡನೆಂದನೆಲೆ । ಧರಣಿಪತಿ ಕಲಹಕೆಂಮೊಡನೆ ॥ ತೆರಳಿಬಂದೆಯೊ ಮೇಣು ವಿವಹಕ್ಕೈದೆಯೊಯಂಬುದರಿ ।

ಯೆನರುಹೆಂದ ನಗೆಮಿನುಗೆ ॥ 4 ॥ ಯೆಂದೆನಲು ಕೇಳ್ದುಕುರುವರನೆಂದನರಸನೀ । ನಿಂದಿಪೆಯ ಕರಸಿವೈಭವದಿ ॥ ಬಂದೆವ್ವೈ ವಿವಹಕ್ಕೈ । ತಂದವರ ಸಮರಕೆನೆ । ಚಂದ್ರೇಶ ಮನ್ನಿಸಿದ ಭರದಿ ॥ 5 ॥ ಯಿನಜ ನಡೆತಂದು ಕುರು । ಜನಪರಂಘ್ರಿಗೆ ನಮಿಸೆ । ವಿನಯದೊಳು ಪಿಡಿದೆತ್ತಿ ಮುದದಿ ॥ ಕನಕಸಿಂಹಾಸನವನೇರ್ದರಿವರತ್ತಲಾ ॥ ದಿನಪಜನಸುತನೆಡೆಗೆ ಭರದಿ ॥ 6 ॥

## ॥ ಭಾಮಿನಿ ॥

ಚರರು ನಡೆತಂದಾಗ ಲೇಖನ । ವಿರಿಸುತುಡುಗೆರೆಯಿತ್ತು ನಮಿಸಲಿ । ಕರಸನತಿ ಶೀಘ್ರದೊಳು ಕರಸುತ ತನ್ನಸಹಭವರಾ ॥ ಕರದಿ ಧರಿಸುತ ಪತ್ರಿಕೆಯ ಬಹು । ಬಿರಿದಿನೊಳು ಬಂಧಿಸಿದ ಮುದ್ರೆಯ । ನರನನೊಡದಾಕ್ಷಣದಿವಾಚಿಸಿಕೇಳ್ದರೆಲ್ಲವರೂ ॥ 1 ॥

## ॥ ವಾರ್ಧಿಕ್ಯ ॥

ಯಿಂದುಕುಲತಿಲಕ ರವಿಜಾತಸುತಧರ್ಮಜನಿ । ಗೊಂದಿಸುವೆ ನಮ್ಮ ತನುಜಾತೆಯಂ ಭಾಸ್ಕರನ । ನಂದನನಿಗೀವೆನಿದೆ ಶುಕ್ಲಪಕ್ಷದ ದಶಮಿಗೊಂದುದಿನಮುಳಿಯಲದಕೆ ॥ ಬಂದುಕಾರ್ಯವನುಕೊನೆಗಾಣಿಸೈದುವದು ನಲ । ವಿಂದ ರತ್ನಪುರದಿ ಮಿತ್ರರೊಡನಿಹುದುಮಿತಿ । ನಂದನಸಂವತ್ಸರದ ಚೈತ್ರ ಪ್ರತಿಪದೆಯ ದಿನ । ಚಂದ್ರೇಶ ಕೈಮುಗಿವೆನೂ ॥ 1 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ವರಲಿಖಿತ ವಾಚಿಸುತಲೆಮಸುತ । ನರನೊಳೆಂದನು ತೆರಳು ಸಹಭವ । ತರಣಿಜನ ಪರಿಣಯಕೆರತ್ನಾ । ಪುರಕೆ ಭರದಿ ॥ 1 ॥ ಆತನಮಗರಿಯನುತ ಗೃಹಿಸದೆ । ಯೀತತೂಕ್ಷಣ ತೆರಳು ಕುರುಕುಲ । ವ್ರಾತದೊಳಗತಿಬಲನು ನಮ್ಮವ । ರಾತರ್ರೈಸೆ ॥ 2 ॥ ಅರಸನಾಜ್ಞೆಯ । ಕೊಡಲು ಬೇಗದಿ । ತರಿಸಿ ಮಣಿಮಯ ರಥವನೇರ್ದನು । ಧುರವಿಜಯ ಕಲಿಪಾರ್ಥಪೊರಟನು । ನೆರಹಿಬಲವಾ ॥ 3 ॥ ವದರುತಿಹ ಕಹಳಾದಿ ರವದೊಳು । ಪದುಮನಾಭನ ಮೈದುನನು ಘನ । ಮುದದಿ ಬಂದನು ಚಂದ್ರಭೂಪನ । ಸದನಕೊಲಿದೂ ॥ 4 ॥

## ॥ ಭಾಮಿನಿ ॥

ಬಂದ ನರನೆಂದೆನಲುಕೇಳುತ । ಚಂದ್ರಭೂವರ ಕಲಶಕನ್ನಡಿ । ಯಿಂದ ನಡೆತಂದಿದಿರುಗೊಂಡನು ಸಕಲಸಂಭ್ರಮದಿ ॥ ಮಂದಿಗಳು ನೆರೆಸಾರೆ ಪಾರ್ಥನ । ತಂದು ಕುಳಿಸಿದ ರತ್ನಪೀಠದೊ । ಳಂದು ತರಣಿಜ ನುಡಿಸಿದನು ನಲವಿಂದ ಫಲಗುಣನಾ ॥ 1 ॥

## ॥ ರಾಗ ॥ ಬೇಗಡೆ ॥ ಅಷ್ಟತಾಳ ॥

ಲಾಲಿಸ್ಯೆ ದೇವೇಂದ್ರಜಾತ ವಿಖ್ಯಾತ । ಪೇಳುವೆ ನಿನ್ನೊಳು ಕಲಹಖದ್ಯೋತಾ ॥ ಪಲ್ಲ ॥ ತರುಣಿಯಾಸೆಗೆ ಬಳಲುತ್ತಿರ್ದನೆಲೆಗೆ । ಪರಶುಧರನ ದಯದಿಂ ನೃಪನೆನಗೆ । ವಿರಚಿಪಲಗ್ನವನಿಂದು ಭೂಮಿಪರಾ । ನೆರವಿಯೊಳೈತ ಹವಿಘ್ನುಕಾಹುರರಾ ॥ 1 ॥ ತರಿದೆನ್ನ ಕಾರ್ಯವ ದಯದಿಂದ ನೀನು । ವಿರಚಿಸು ನೀನೆನಗರಿಯಾದರೇನೂ । ಮರದು ಮನದೊಳಿಹ ವೈರಭಾವಗಳ । ಕರುಣಿಸು ಯನಲೆಂದ ಶಚಿಕೆಂದ್ರತರಳಾ ॥ 2 ॥

## ॥ ರಾಗ । ಶಂಕ್ರಾಭರಣ । ಮಟ್ಟ ॥

ತರಣಿಜಾತನಹುದೊ ವೈರಿ । ಯನಗೆ ನಿನ್ನಯ । ಪರಿಣಯವನು ನೋಳ್ಪೆನೊಲಿಸಿ । ತರುಣಿರನ್ನೆಯಾ ॥ ಧರಣಿಪಾಲರೆಲ್ಲ ಕಲಹ । ಕೈದಲವರನೂ । ಧುರದಿ ಗೆಲಿದು ನಿನ್ನ ಕಾರ್ಯ । ವಿರಚಿಸುವೆನೂ ॥ 1 ॥ ನುಡಿದ ಭಾಷೆ ನಡೆಯದುಳಿದ । ರಸ್ತ್ರಕರದಲಿ । ಪಿಡಿಯೆ ದಹಿಪೆನೊಡಲನೋಳ್ಪುದಗ್ನಿಮುಖದಲಿ ॥ ಮೃಡಸುರೇಂದ್ರಮುಖ್ಯರಮರ । ರಿಂದು ಸತ್ವದಿ ತಡದರವರ ಗೆಲುವೆ ಬಿಡುಯಿಂದುಸಮರದಿ ॥ 2 ॥ ನರನನುಡಿಯ ಕೇಳ್ದು ತರಣಿಜಾತನೆಂದನೂ । ತರುಣಿಮಣಿಯನೊಲಿಸುತೆನ್ನ । ಕಾರ್ಯದಿರವನೂ ॥ ವಿರಚಿಸಲ್ಕೆ ಧುರದಿ ಕಾಯ್ವೆ ಶಿರವ ನಿಂಮಯ । ಯರಡುಗೈದರೀನುಡಿಗೆಕೇಳ್ವುದೆನ್ನಯಾ ॥ 3 ॥ ಭಾಷೆ ಯಲವೊ ವೈಶ್ಯರೊಳಗೆ । ಹುಟ್ಟಿದಾತನು । ದಾಸ ಹರಿಯ ಕೊಂದರವರ ಗತಿಯು ಸಾರ್ವನೂ ॥ ಲೇಸು ಲೇಸೆಂದೆನುತಲೀರ್ವ । ರಗ್ನಿಸಾಕ್ಷದಿ । ವಾಸಿಪಂಥವೊರದರೇನನೆಂಬೆ ಸಖ್ಯದಿ ॥ 4 ॥

## ॥ ವಾರ್ಧಿಕ್ಯ ॥

ಅರಸಕೇಳ್‌ಬಳಿಕ ವಿವಹೋತ್ಸವಕೆ ಧರಣಿಪರು । ತೆರಳಿ ಬಂದಿರೆ ಭೂಪ ಮನ್ನಿಸುತ

ಭೂಸುರರ । ವರದಮುಹೂರ್ತದೊಳ್ ಬಾಸಿಗವ ಕಟ್ಟಿತರಣಿಜನ ಕರತಂದು ಮಂಟಪದೊಳೂ ॥ ಭರದಿ ಕುಳ್ಳಿರಿಸಿ ಸುಕುಮಾರಿಯುಂ ಶೃಂಗರಿಸಿ । ಕರತಹುದೆನಲ್ಕಾಂತೆಯರ್ಬಂದು ಮನ್ಮಥನ । ಅರಗಿಣಿಯ ಪೊಲ್ವ ರತ್ನಾವತಿಯ ಶೃಂಗರಿಸಿ ಕರದು ಮಂಟಪದಿ ಕುಳಿಸೆ ॥ 1 ॥ ಧರೆಗೆ ನೂತನವಾಯ್ತು ಭೇರಿಕಹಳಾವ ರಂ । ಧರಣಿಸುರರಧಿಕಮಂತ್ರಘೋಷದಿಂ ನೃಪತರಳೆ ಮಂದಾರಪೂಮಾಲೆಯಂ ತರಣಿಜನ ಕೊರಳಸಾರ್ಚುವಸಮಯದೀ ॥ ದುರುಳರಾ ದಂತವಕ್ತ್ರಾದಿಶಿಶುಪಾಲಕರ್ । ವೆರಸಿ ದಾನವಬಲವನಂದು ಪೊಕ್ಕರುಸಭೆಯೊ । ಉರವಣಿಸೆ ತರುಣಿಯರ್ಚಲಿಸೆ ಧರಣಿಪರೆಲ್ಲ । ತರಹರಿಸುತಿರೆ ಪಾರ್ಥನೂ ॥ 2 ॥

## ॥ ರಾಗ । ಸೌರಾಷ್ಟ್ರ । ತ್ರಿವಿಡೆ ॥

ನೋಡಿ ನುಡಿಸಿದ ಚೈದ್ಯ ಬಾ ಕುಳು । ರೂಢಿಪಾಲನ ಸುತೆಯ ವಿವಹವ । ನೋಡಿ ತೆರಳುವ ನಿಲಿಸು ಗಲಭೆಯ । ಗಾಡದಿಂದಾ ॥ 1 ॥ ಯೇನೆಲವೊ ಕಲಿಪಾರ್ಥನೆಂಬೀ ॥ ಜಾಣತನವನು ತೋರದಿರ್ನಡೆ । ಮಾನಿನಿಯ ಪಿಡಿದೊಯ್ದುಸೆರೆಯೊಳ । ಗಾನಿಸುವೆನೂ ॥ 2 ॥ ಭಂಡತನವ್ಯಾಕಿನಿತು ಬಿಡು ವೃಥಾ । ಕಂಡವರು ನಗುವಂತೆ ಸಭೆಯೊಳ । ಗಂಡೆಲೆಗೆಮೈಗೊಡದಿರೀಕ್ಷಣ । ಷಂಡತೆರಳೂ ॥ 3 ॥

## ॥ ರಾಗ । ಭೈರವಿ । ಯೇಕತಾಳ ॥

ನರನಿಂತೆನಲದಕೇಳಿ । ಚೈದ್ಯ । ನುರುತರ ಕೋಪವ ತಾಳಿ । ಶರವನು ತೆಗದಾಕ್ಷಣದಿ । ಸುರ । ರೆರೆಯನಸುತಗಿಡೆ ಭರದಿ ॥ 1 ॥ ದಾರಿಯೊಳಾ ಶರ ಕಡಿದು । ನರ । ನಾರುಭಟಿಸಿ ಭೋರ್ಗರದೂ । ಧಾರುಣಿಪರ ವದನವನು । ಕಂ । ಡೇರಿಸಿ ಬಿಡೆ ಬಾಣವನೂ ॥ 2 ॥ ಕಡಿದದನು ರೋಷದೊಳು । ಫಡ । ಫಡಕೇಳ್‌ನರಗರ್ವದೊಳೂ ॥ ತಡೆಯದಿರೆನುತಸ್ತ್ರವನು । ತಾಂ । ಬಿಡಲದ ಖಂಡಿಸಿ ನರನೂ ॥ 3 ॥ ವೀತಿಹೋತ್ರಾಸ್ತ್ರವ ಬಿಡಲು । ಚೈದ್ಯ । ಧಾತುಮರದಂತಿರಲೂ ॥ ನೀತನುರಗಬಾಣವನು । ಪೊಡ । ದಾತನ ಭುಜಕಟ್ಟಿದನೂ ॥ 4 ॥

## ॥ ರಾಗ । ಶಂಕರಾಭರಣ । ಮಟ್ಟೆ ॥

ಧುರದೊಳಿಂತು ಚೈದ್ಯ ನರನೊಳ್ । ಕಟ್ಟುವಡದನೂ ॥ ದುರುಳ ದಂತವಕ್ತ್ರ ನೋಡಿ । ಧುರಕೆ ನಿಂದನೂ । ಹರಣದಾಸೆತೀರಿತೆಲವೊ । ಮನುಜ ನಿನ್ನಯ । ಶಿರವ

ತರಿವೆನೋಳ್ವುದೆನುತ । ಪೊಡದನಾಗ್ನೆಯಾ ॥ 1 । ಬಾಣತರಿವುತೆಂದ ಪಾರ್ಥ । ನೆಲವೊ ದುರುಳನೆ । ಮಾಣಿಸುವೆನು ನಿಂಮೊಳಿರುವ । ಕುಹಕಮತಿಯನೆ । ಹೀನತನದಿ ಲಗ್ನದೊಳಗೆ । ವಿಘ್ನವೆಸಗುವಾ । ಕ್ಷೋಣಿಮೂಢ ಸೈರಿಸೆನುತ । ಪೊಡದನಸ್ತ್ರವಾ । 2 ॥ ಹುಲ್ಲುಮನುಜ ನಿನಗ್ಯಾಕಿನಿತು । ಬಲುಹಿದೆಂಮೊಳು । ಮಲ್ಲಸುಭಟರೆಲ್ಲರಂಜು । ತಿಹರು ಧುರದೊಳು । ನಿಲ್ಲು ಬಲುಹ ತೊರ್ಪೆನೆನುತ । ಶರವ ಖಂಡಿಸಿ । ಖುಲ್ಲ ಪೊಡದನಾಗ ಪರ್ವ । ತಾಸ್ತ್ರ ಕೋಪಿಸೀ ॥ 3 ॥ ಧೀರಪಾರ್ಥಬರುವಶರವ । ನಡುವೆ ತರಿದನೂ । ಮಾರಪಿತನ ನೆನದು ಭುಜಗಶರವಬಿಟ್ಟನು ॥ ಕಾರುಕೈದೆಹಾಲಹಲವ । ದುರುಳಸಂಗವಾ । ಸೂರೆಗೈದುಬಿಗಿದರೇನ ನೆಂಬೆಚೋದ್ಯವಾ ॥ 4 ॥

## ॥ ಭಾಮಿನಿ ॥

ಧರೆಯೊಳು ಬಾಹುಪ್ರತಾಪರ । ಧುರದಿ ಬಂಧಿಸುತಾ ಧನಂಜಯ । ನರಫಳಿಗೆಯೊಳು ಗೆಲಿದನೀರ್ವರ ಸೈನ್ಯವೋಡುತಿರೆ ॥ ಧರಣಿಪರು ಬೆರಗಾಗಿ ಪಾರ್ಥಗೆ । ಕರವ ಮುಗಿದರು ಕರ್ನ ಹಿಗ್ಗಿದ । ಸುರರು ಸುಮವೃಷ್ಟಿಯನು ಸುರಿದರು ಕಲಿಧಸಂಜಯಗೆ ॥ 1 ॥

## ॥ ದ್ವಿಪದೆ ॥

ಬಳಿಕಾ ಪಾರ್ಥನು ಕರದು ಚಂದ್ರಭೂಪನೊಳು ॥ ನಲವಿಂದ ಪೇಳ್ವನೆಲೆ ಜನಪ ಬೇಗದೊಳು ॥ 1 ॥ ತರಣಿಸುತನಿಗೆ ನಿನ್ನ ತನುಜೆ ವಿವಹವನು ॥ ವಿರಚಿಸಿಂನಾವ ಭಯವಿಲ್ಲ ಯನಲವನು ॥ 2 ॥ ನರನ ಕೊಂಡಾಡುತಡಿಗಡಿಗೆ ಬಾಲಕಿಯಾ ॥ ಕರೆದು ಮಾಲೆಯ ಹ್ಯಾಕು ಕರ್ನಗೆನೆ ಮತಿಯಾ ॥ 3 ॥ ಕೇಳಿರತ್ನಾವದನೆ ನಾಚಿ ತರಣಜಿಗೆ ॥ ಮಾಲೆಯನು ಯಿಕ್ಕಿದಳು ನಗೆಯಮಳೆಮಿನುಗೆ ॥ 4 ॥ ಧರಣಿಸುರರಂದು ಮಂತ್ರವ ಪಾಡುತಿರಲೂ ॥ ಅರಸಧಾರೆಯನೆರದನಧಿಕ ವಿಭವದೊಳೂ ॥ 5 ॥ ತರುಣಿಯರು ತಂದಾಗಲಾರತಿಯ ಭರದಿ ॥ ವರವಧುಗಳಿಂಗಿತ್ತು ಪಾಡಿದರು ಮುದದಿ ॥ 6 ॥

## ॥ ರಾಗ ಡವಳಾರ ॥

ರತ್ನಪ್ರಭೆಯ ಶೋಭಿಪ ಮಂಟಪದೊಳು । ಅರ್ತಿಯಿಂ ವಧುವರಣ್ಯೆದೆ ಕುಳ್ಳಿರಲು । ಮತ್ತಾ ಮಾನಿನಿಯರು ಕೂಡಿ ಭರದಿ । ಜೊತ್ತಿನೊಳಾರತಿಪಿಡಿಯುತ ಕರದಿ । ಮತ್ತಕಾಶಿನಿಗೆ ಚಂ ದ್ರೇಶನ ಪುತ್ರಿಗೆ । ಭಾಸ್ಕರನ ಪುತ್ರ ಕರ್ನಗೆ । ನವರತ್ನದಾರತಿಯಾ ಬೆಳಗೀರೆ ॥ 1

॥ ಧುರದೊಳತೀದೀರ ಕರ್ನನಿಗೆ । ತರುಣಿಯು ಶರವನದಲಿ ಕಂಡವಗೆ । ವಿರಹವತಾಳ್ವುಶೋಕದಿ ಬಂದುವುರಕೆ । ಕುರುವರಗರುಹುತ ಕಳುಹೆ ಕದನಕೆ । ಧರಣಿಪನೊಳು ಅತಿಯುದ್ಧವೆಸಗುತ । ಸರಸಿಜಾಕ್ಷಿಯಕೊಡೆನೆನೆ ಖಾತಿವೆರಸಿ । ಕಲಹಕೆ ಬಂದು ಭೂಪನ ತರಳೆಯನೊಲಿಸಿದ ಕರ್ನಗೆ । ಸುರಚಿರದಾರತಿಯ ಬೆಳಗೀರೆ ॥ 2 ॥

## ॥ ವಾರ್ಧಿಕ್ಯ ॥

ಅರಸ ಚಂದ್ರೇಶ ಬಳಿಕಾಗ ವಿಬುಧರಿಗಿತ್ತ । ವರಕನಕಗೋವ್ಗಳಂ ಮನದಣಿಯ ತೆರದಿಂದಭೂಮಿಪರ । ನೆರವಿಂಯಂ ಮನ್ನಿಸುತ ಭೋಜನಂಗೈ ಸಿ ಶತತರುಣಿಯರ್‌ಗೊವುಗಳನೂ ॥ ತರಳೆಗಿತ್ತನುಬಳುವಳಿಯಕನಕಾಭರಣಮಂ । ತರಣಿಜಗೆಕ್ಯೆಗೂಡಿಸಿದ ತನ್ನತನುಭವೆಯ । ಕುರುಪತಿಯ ನೇಮದಿಂ ಪೊರಟುದ್ಯೆ ದಿಬ್ಬಣವು ಭರಿತ ವಾದ್ಯದ ರಭಸದಿ ॥ 1 ॥

## ॥ ಭಾಮಿನಿ ॥

ನರನ ಮನ್ನಿಸಿ ಕರ್ನ ತೆರಳಲಿ । ಕರಸರೆಲ್ಲರು ಪೊರಡುತಿರ್ದರು । ಧುರವಿಜಯ ಪೊರಡಲ್ಕೆ ಸೆರೆಬಿಡಿಸೆನುತ ಖಳನಿಕರಾ ॥ ಮರುಗುತಿರ್ದರು ಲೆಕ್ಕಿಸದೆ ನರ । ಸರಿವುತಿರಲಾಕ್ಷಣದಿ ನಾರದ । ಸರಸಿರುಹಭವನಾಜ್ಞೆಯಲಿ ನಡೆತಂದು ನರಗೆಂದಾ ॥ 1 ॥

## ॥ ರಾಗ ॥ ಕೆತಾರಗೌಳ । ಅಷ್ಟತಾಳ ॥

ಬಿಡಿಸು ಸೆರೆಯೊಳಿಟ್ಟ ಶಿಶುಪಾಲಾದ್ಯರ ಪಾರ್ಥ । ಕಡುಖೂಳರವರಾದರು ॥ ಪಿಡಿಯಲಾಗದುಯನೆಕೇಳುತ್ತಮುನಿಪತಿ । ಯಡಿಗೆರಗುತಲೆಂದನೂ ॥ 1 ॥ ಧರೆಗೆ ಬಾಹಿರರಿವರಖಿಳಸಜ್ಜನರಿಗೆ । ಪರಿಪರಿ ಕಷ್ಟವನೂ ॥ ವಿರಚಿಪರಿವರ ಬಂಧಿಸೆ ಬಿಡಿಸುವ ಪರಿ । ಯರುಹೆನೆ ಮುನಿಪೇಳ್ದನೂ ॥ 2 ॥ ಮಗನೆ ಕೇಳಹುದು ನಾ ಬಲ್ಲೆ ನಿವರ ಗೆಲ್ವ । ನಗಧರ ಚಕ್ರದೊಳೂ ॥ ಪೊಗುವರಿರ್ವರು ವೈಕುಂಠದ ದ್ವಾರಪಾಲಕ । ರಿಗೆ ಮೂರನೆಯ ಭವವೂ ॥ 3 ॥ ಯನಲಚ್ಚರಿಯಗೊಳುತಾಗ ಕರದ ಪಾರ್ಥ । ಘನತರದುರಗಾಸ್ತ್ರವಾ ॥ ಮುನಿಪತಿ ವಾಕ್ಯದಿ ಬಿಡಿಸಲೀರ್ವರು ಸೈನ್ಯ । ವನು ಕೂಡಿ ಪೋದರಾಗಾ ॥ 4 ॥ ಸುರಮುನಿ ತೆರಳಿದನಿತ್ತ ಚಂದ್ರೇಶನು । ನರನ ಮಂನಿಸೆ ದಯದಿ ॥ ಅರಸನ ಬೀಳ್ಕೊಂಡು ನಡೆತಂದನಾ ಶಕ್ರ । ಪುರವರಕತಿ ಭರದಿ ॥ 5 ॥

## ॥ ರಾಗ । ಸೌರಾಷ್ಟ । ತ್ರಿವಿಡೆ ॥

ಬಂದು ಧರ್ಮಜನಡಿಗೆರಗಿ ನಲ । ವಿಂದ ವಿವಹೊತ್ಸವದ ಪರಿ । ಯಂದಲೆಮ ಜನಿಗರುಹಿದನು ಶಚಿ । ಕೇಂದ್ರತರಳಾ ॥ 1 ॥ ಕೇಳಿ ಧರ್ಮಜ ಹರುಷದುಬ್ಬಿನ । ವೇಳೆಗೆಯೊಳೊಲಾಡುತಿರ್ದನು । ನೀಲವರ್ನನ ನೆನದು ಘನಮುದ । ತಾಳುತೊಲಿದೂ ॥ 1 ॥

## ॥ ಭಾಮಿನಿ ॥

ಕುರುವರನ ನೇಮದೊಳು ದಿಬ್ಬಣ ಸರಿದುದತ್ತಲು ವಂಗದೇಶಕೆ । ತರಣಿಸುತನರಮನೆಗೆ ಬಹುವಿಧವಾದ್ಯ ರಭಸದಲಿ ॥ ಅರಸನನು ಬೀಳ್ಕೊಂಡು ತನ್ನಯ । ತರುಣಿರತ್ನಾವದನೆ ಸಹಿತಲಿ । ಪರಮವಿಭವದೊಳಿರ್ದನಾರುಷಿವರನ ಕರುಣದಲಿ ॥ 1 ॥

## ॥ ಮಂಗಲಪದ ॥

ಮಂಗಲಂ ಜಯನಿತ್ಯಶುಭಮಂಗಲಂ । ಮಂಗಲಂ ರುಷಿಪುಂಗಪರಶುರಾಮಾಖ್ಯನಿಗೆ । ಮಂಗಲಂ ಮಾರಹರಸಖಶ್ರೀಶಗೆ । ಮಂಗಲಂ ಭವಭಯವಿವರ್ಜಿತಗೆಶ್ರೀಹರಿಗೆ । ಮಂಗಲಂ ಶಕಟಾದಿಸಂಹಾರಗೆ । ಮಂಗಲಂ ಜಯಮಂಗಲಂ ॥ 1 ॥ ಮಂಗಲಂ ರಾವಣಾಂತಕಶ್ರೀರಾಮನಾಥನಿಗೆ । ಮಂಗಲಂ ಧೃವರಾಜಗೊಲಿದಹರಿಗೆ । ಮಂಗಲಂ ಮಧುಪುರದ ವಾಸದಾಮೋಧರಗೆ । ಮಂಗಲಂ ಚಕ್ರಾಂಕಪುರವಾಸಗೆ ॥ ಮಂಗಲಂ ಜಯಮಂಗಲಂ ॥ 2 ॥

॥ ಶ್ರೀ ॥

ಶ್ರೀ ಮನ್ಮಹಾಭಾರತದೊಳಗಿನ

ಯಕ್ಷಗಾನ

# ಉಷಾ ಪರಿಣಯ

# ಉಷಾ ಪರಿಣಯ

## ॥ ಶ್ರೀ ಮಹಾಲಕ್ಷ್ಮಿ ದಾಮೋದರ ಪ್ರಸನ್ನಃ ॥

## ॥ ಭಾಮಿನಿ ॥

ಅಂಬುಧಿಯನಾಳಿರ್ದ ಗೌಡಗೆ । ಕುಂಭಕಾರನು ಜನಿಸಲಾತನ । ಅಂಗುಲಿಯೋಳ್ ಶಿರವೊಂದ ಕಡಿದನ । ಬೇಡಿ ತಪದಿಂದಾ ॥

ಅಂಬಪಡೆದನ ಪಿತನ ತನಯನ ಅಂಬಿನಲಿ ಮಡುಹಿದನ ವೈರಿಗೆ । ಲಿಂಗವಿತ್ತಿಹ ಶಂಭುಗೌಡನ । ಸುತನ ಬಲಗೊಂಬೇ ॥ 1॥

## ॥ ಕಂದಪದ್ಯ ॥

ರಮಾಕಾಂತಂ ಸದ್ಗುಣಧಾಮಂ । ಶರವರ ಪೂಜಿತಾಂಘ್ರಿ ಸರೋಜಂ । ಸೋಮಾರ್ಕ ನೇತ್ರಂ ಸಂಪ್ರೇಮದೊ । ಳೆನಗೀಗ ಸನ್ಮತಿಯಸೌಖ್ಯದೊಳಂ ॥ 1 ॥

## ॥ ರಾಗ ಭೈರವಿ, ತ್ರಿವಿಡೆತಾಳ ॥

ಶ್ರೀಗಣಪ ಗಜವಕ್ತ್ರ ಹರಸುತಂ । ನಾಗವಾಹನ ಭೋಗಿಭೂಷಣ । ಯೋಗಿಜನ ಸುಮನಸಕರಾ ॥ 1 ॥ ತರಣಿಕೋಟಿಪ್ರಕಾಶ ಶಶಿಧರ । ಕರುಣವಾರುಧಿ ಶುಭಕರಾ ॥ ಉರಗವೈರಿಯ ವಾಹನನ ಸಖಸುತ । ಪರಮ ಮಂಗಳದಾಯಕಾ ॥ 2 ॥ ಗಿರಿಸುತಾತ್ಮಜ ಶರಣಪೋಷಣ । ದುರಿತ ಸಂಕುಲನಾಶನಾ ॥ ಸುರಚಿರಾಲಂಕಾರ ಭೂಷಿತ । ಸರ್ವಜನ ಪರಿಪೂಜಿತಾ ॥ 3 ॥

## ॥ ರಾಗ ಅಷ್ಟತಾಳ ॥

ರಕ್ಷಿಸು ಭೂದೇವಿಯೇ । ಸರ್ವರಿಗೆ । ರಕ್ಷಿಸು ಶಾಂತಾದುರ್ಗಾಂಬಿಕೆಯೇ । ಕಾಯೇ ॥ ಪಲ್ಲ ॥ ಶರಣರ ಮೇಲತಿ ದಯದೋರಿ ಬಂದು । ಕರುಣದಿ ಸಲಹುವ ಸತ್ವ ನಿನಗಿಂದೂ ॥ ನಿರುತದಿ ನೀನಿಲ್ಲಿ ದಯಗೈದರಿಂದಾ । ದುರಿತ ನಾಶನವಾಯ್ತು ದರ್ಶನದಿಂದಾ ॥ 1 ॥ ಹರುಷದಿ ಕದಳಿ ಕಾಂ । ತಾರದೊಳುದಿಸಿ । ಭರದಿಂದ ದಕ್ಷಿಣಮುಖವಾಗಿ ನೆಲಸೀ ॥ ಧರಣೀ ಭಾರವನಿಳುಹುದಕಾಗಿ ಹರಿಗೆ । ಅರುಹಲವತಾರದಿ ವಧಿಸಿ ದುರುಳರಿಗೇ ॥ 2 ॥ ಕರದೊಳು ಕಂಕಣ ಮುದ್ರಿಕೆಬೆರಳಾ । ಚರಣದುಂಗುರಗೆಜ್ಜೆ ಕನಕದಹರಳಾ ॥ ಸರಫಣಿಪದಕಹಾರದೊಳಿರ್ಪಾ ಕೊರಳಾ । ಸರಸದಿ ಮೆರೆದಿರ್ಪಾ

ಫಣಿವೇಣಿಕುರುಳಾ ॥ 3 ॥ ಧರಣಿ ಭೂಸುರರಿಂದರ್ಚಿಸಿಕೊಂಡೂ । ಸತತ ಪ್ರಸಾದವನೀವೆ ನೀ ಮತ್ತಾ । ವರಭಕ್ತ ಜನರಿಗೆ ಮಮತೆಯಿಂದಿರಿಸೂ । ಪರನಿಂದೆಗೈವರ್ಗೆ ಯಮಲೋಕಕಿರಿಸೂ ॥ ರಕ್ಷಿಸೂ ಭೂದೇವಿರ್ಯೆ ॥ 4 ॥

## ॥ ಭಾಮಿನಿ ॥

ಹರಿಯನೇರ್ದನ ಹರಿಯೊಳಿರ್ದನ । ಹರಿಯ ಚರಣದಿ ಮೆಟ್ಟಿಬಿಟ್ಟನ । ಹರಿಯಕೊಂದನ ಹರಿಯಕಾಯ್ದನ । ಹರಿಯ ಕಟ್ಟಿದನಾ ॥ ಹರಿಯ ಮಗಳನು ಕೂಡಿದಾತನ । ಹರಿಯಮೇಲೊರಗಿರ್ಪದೇವನ । ಚರಣಕೆರಗುವೆ । ವರದ ವಿಠ್ಠಲ ಸಲಹು ಅನವರತಾ ॥ 1 ॥ ವೇದಕೋಟಿಗಳರಸಿ ಕಾಣದ । ವೇದವಿತ್ತರ ಮತಿಗೆ ಬಾರದ । ವೇದಜನಕನೆ ನಿಂನ ಮಹಿಮೆಯ । ಪೊಗಳಲಾರ್ಗಳವೂ ॥ ವಾದಗುಟ್ಟುವ ಕುಹಕಿಗಳ ಬಹು । ಭೇದಗಳನಾ ತಿಳಿಯಲಾರೆನ । ನಾದಿ ಮೂರುತಿ ಕೃಷ್ಣಪಾಲಿಸು ಮತಿಗೆ ಮಂಗಲವಾ ॥ 2 ॥

## ॥ ರಾಗ ಶಂಕರಾಭರಣ ತ್ರಿವಿಡೆ ತಾಳ ॥

ಶರಣು ಶಂಕರ ಚಂದ್ರಶೇಖರ । ಶರಣುಜನ ರಕ್ಷಾಕರ । ಶರಣುಕುಂಜರ ದನುಜ ಸಂಹರ ॥ ಶರಣು ಶ್ರೀಯಮೃತೇಶ್ವರ । ಶರಣು ಶರಣು ॥ 1 ॥ ಶಂಭುಪಟ್ಟದರಾಣಿಗುಣಮಣಿ । ಶುಂಭಖಳ ಸಂಹಾರಿಣಿ । ಕಂಬುಕಂಠಿಣಿ ಸಲಹು ಮೂಜಗ । ದಂಬೆ ಸುರರಕ್ಷಾಮಣಿ ॥ 2 ॥ ವಾಣಿಪನ್ನಗವೇಣಿ ಬ್ರಹ್ಮನ । ರಾಣಿ ವಿದ್ಯಾದಾಯಿನೀ ॥ ಕ್ಷೋಣಿಗುತ್ತಮ ಶೃಂಗವೇರ ಪ್ರ । ಧಾನಪಟ್ಟಣವಾಸಿನೀ ॥ 3 ॥

## ॥ ವಾರ್ಧಿಕ್ಯ ॥

ಸುಮನಸರಿಗೊಂದಿಸುತ ತಾರಕಾರಿಯ ಭಜಿಸಿ । ಯಮಿಶುಕಾದ್ಯರಿಗೆರಗಿ । ಸತ್ಕವಿಗಳಂ ನೆನೆದು । ಕ್ರಮದಿಂದಲಿಂದ್ರಾದಿ ದಿಕ್ಪಾಲರಿಗೆ ವಣಿದು । ಗುರುವಿನಡಿದಾವರೆಯನೂ ॥ ಭ್ರಮೆಯಳಿದು ಧ್ಯಾನಿಸುತಲಿಷ್ಟದೇವರ ನುತಿಸಿ । ವಿಮಲ ಶರಣರ ಬೇಡಿಕೊಂಡಮಿತ ಭಕ್ತಿಯಿಂ । ಕಮಲೆಯರಸನು ತನ್ನರೂಪಿನೊಳು । ನಟಿಸಿರ್ದ ಭಾಗವತ । ಕಥೆಯ ನಾನೊರೆವೇ ॥1 ॥

## ॥ ದ್ವಿಪದಿ ॥

ಘನಮಹಿಮ ಭಾರದ್ವಾಜರನು ಮನದಿ ಸ್ತುತಿಸೀ । ಕನಕದಾಸರಚರಣಯುಗವನ್ನು

ಸ್ಮರಿಸೀ ॥ 1 ॥ ಮುದದಿಭಾಗವತಾಖ್ಯ ಪೌರಾಣದೊಳಗೇ । ಪದುಮಲೋಚನನು ಬಾಣನ ಕರವ ಧರೆಗೇ ॥ 2 ॥ ಇಳುಹಿದಾ ಕಥನವನು ಯಕ್ಷಗಾನದಲಿ । ನಳಿನಭವಸಿರಿಯರೆಯ ಹರನಕರುಣದಲೀ ॥ 3 ॥ ಪೇಳುವೆನು ತಿಳಿವಂತೆ ಧರೆಯ ಸಜ್ಜನರು । ಕೇಳಿ ತಪ್ಪಿದರೆ ತಿದ್ದಿ ಮೆರೆಸಿ ಬಲ್ಲವರೂ ॥ 4 ॥

ವಚನ ॥ ಯಿಂತು ದೇವರ್ಋಷಿ ಕವಿಗಳಂ ಧ್ಯಾನಿಸುತ ತತ್ಕಥಾ ಪ್ರಸಂಗಮಂ ವರ್ಣಿಸುವ ಬಗೆಯದೆಂತೆನೆ ॥ 1 ॥

### ॥ ರಾಗ ಸೌರಾಷ್ಟ್ರ, ತ್ರಿವಿಡೆ ತಾಳ ॥

ಕುರುಕುಲೋದ್ಭವ ವರಪರೀಕ್ಷಿತ । ಧರಣಿಪತಿಗಾ ಶುಕಮುನೀಂದ್ರನು । ಕರುಣದಿಂ ಭಾಗವತ ಕಥನವ । ನೊರೆವುತಿರಲೂ ॥ 1 ॥ ಒಂದುದಿನ ಭೂವರನು ಮುನಿಪತಿ । ಗೊಂದಿಸುತ ಬೆಸಗೊಂಡನಾಕ್ಷಣಾ । ಅಂದು ಹರಿಪ್ರಲ್ಹಾದಗರುಹಿದ । ಲಂದವನ್ನೂ ॥ 2 ॥ ತರಳ ನಿಂನಯ ವಂಶದವರಲೀ । ಕೆರಳಿವೈರತ್ವವನು ಗಯ್ಯೆನು । ಜಾಲವಲ್ಲಿದು ಯನುತಲರುಹಿದ । ಮೇಲೆ ಹರಿಯೂ ॥ 3 ॥ ತೆರಳಿ ಶೋಣಿತಮರದಿ ಬಾಣಾ । ಸುರನೊಳತಿ ವೈರತ್ವವನು ಗಯ್ಯುತ ಹರಿಯಮೊಂಮಗೆ ಉಷೆಯ ಲಗ್ನವ । ಗೈದನೆಂತೂ ॥ 4 ॥ ಪ್ರೇಮದಿಂ ಪೇಳೆನಲು ಸಂಯ್ಯಮಿ । ಭೂಮಿಪನ ಭಕ್ತಿಯನು ಕಾಣುತ । ಕಾಮಜನಕನ ನೆನೆದು ಪೇಳ್ದನು । ತಾ ಮುದದಲೀ ॥ 5 ॥

### ॥ ವಾರ್ಧಿಕ್ಯ ॥

ಹರಿವಂಶಾಧಿಪನೆ ಕೇಳ್ । ಹರಿಯ ಚರಿತ್ರೆಯಂ । ಹರುಷದೊಳ್ ನಿನಗೊರೆವೆ । ದುರಿತನಾಶನನೆಂಬ ಶ್ರೀ । ಹರಿಯು ತಾ ದುರುಳರಂ । ನಿಗ್ರಹಿಸಿ ಶರಧಿಯಲಿ । ದ್ವಾರಕಿಯ ರಚಿಸಿ ಬಳಿಕಾ ॥ ಮಾರಪಿತ ಸಂತಸದಿ । ಯರಡೆಂಟು ಸಾವಿರವು । ತರುಣಿಯರು ಅನಿರುದ್ಧ । ವೀರ ಸಾತ್ಯಕಿ ಸಹಿತ । ಲಿರಲಿತ್ತ ಶೋಣಿತಪುರದಿ । ಶೂರ ಬಾಣಾಖ್ಯನೆಂಬ ಬಲಿ । ಪುತ್ರ ನೊಡ್ಡೋಲಗದೊಳೂ ॥ 1 ॥

### ॥ ರಾಗ ಭೈರವಿ, ಝುಂಪೆತಾಳ ॥

ಒಂದುದಿನ ಬಲಿಸುತನು । ಬಂದು ಘನವಿಷ್ಟರದಿ । ಚಂದದಿಂ ಮಂಡಿಸಿಯೇ । ಮುಂದಾಲೋಚಿಸಲೂ ॥ ಅಂದು ಮಂತ್ರಿಯ ಕರೆಯೆ । ಬಂದು ವಂದಿಸಿ ಪೇಳ್ದ । ನಿಂದು ಯೋಚಿಸಿದೇನೆಂ । ದೆನಲು ತಾಪೇಳ್ದಾ ॥ 1 ॥ ವೀರಕುಂಭಾಂಡ ಕೂಪ । ಕರ್ನ

ಕೇಳೀ ಜಗದೀ । ಧೀರರೆನ್ನಯ ತೆರದೊ । ಳಿರುವರೇ ಪೇಳೂ ॥ ಸುರರು ಯಕ್ಷೋರಗರು । ಗರುಡ ಕಿಂಪುರುಷರತಿ । ಶೂರರಾದರುಯನ್ನ । ಸರಿಸ ಕೈತರರೂ ॥ 2 ॥ ಹಿಂದೆ ನಾ ತಪಗೈದ । ರಿಂದ ಪುರಹರನಾಗ । ಬಂದು ಸಹಸ್ರಭುಜ । ಚಂದದಿಂದಿತ್ತೂ ॥ ಅಂದಿನಿಂದಲೆ ದ್ವಾರ । ಮಂದಹಾಸದಿ ಕಾಯ್ದು । ನಿಂದಿಹನು ಯನುತರಿವ । ರಿಂದು ಬೆದರುವರೂ ॥ 3 ॥ ಇಂತು ಯೋಚಿಸಿ ಮನದಿ । ಕಂತುವೈರಿಯಪಾದ । ಭಕ್ತಿಯಿಂ ಸ್ಮರಿಸಿದರೆ । ಆಂತರ್ಯವಹುದೂ ॥ ಭಕ್ತಪಾಲಕನೆಂದು ಪೊತ್ತಿಹನು ಬಿರುದುಗಳ । ಯುಕ್ತದಿಂ ಪೋಪೆನೆ । ನ್ನುತ್ತ ಖಳನಾಗಾ ॥ 4 ॥ ಪುರದ ರಕ್ಷಣೆಗಾಗಿ । ವೀರಮಂತ್ರಿಯ ನಿರಿಸಿ । ಶೂರನತಿ ಮೋದದೊಳು । ಪೊರಟನಾಕ್ಷಣದೀ ॥ ಸರಸಿಯಲಿ ಸ್ನಾನವನು । ಪೂರೈಸುತಾಕ್ಷಣದೀ । ಹರನ ಪಾದವನೆನದು । ಹರುಷದಲೀ ಸ್ತುತಿಸೀ ॥ 5 ॥

## ॥ ಭಾಮಿನಿ ॥

ಶಿವನೆ ಪರಮಾನಂದ ರೂಪನೆ । ಶಿವ ವರಾಸುತದವನೆ ಭರ್ಗನೆ । ಶಿವಚರಿತಘಕುಲನಾಶನೆ । ವಿಶ್ವಮೂರುತಿಯೇ ॥ ಶಿವಶರೀರನೇ ದುರಿತದೂರನೆ । ಶಿವವಿಭೂಷನೆ ದುರಿತನಾಶನೆ । ಶಿವಕರನೆ ನೀನೊಲಿದು ಪಾಲಿಸು ಯನಗೆ ಸನುಮತಿಯ ॥ 1 ॥

## ॥ ರಾಗ ಕಾಂಬೋಧಿ, ಝಂಪೆತಾಳ ॥

ಯೀ ಪರಿಯೊಳಾ ದಾನ । ವೇಂದ್ರನುತಿಗೈವುತಿರ । ಲಾ ಪಾರ್ವತೀಶಸಂಭ್ರಮದೀ ॥ ತಾಪಸಾದ್ಯರಿಗಗೋ । ಚರನಾದ ಪರಬ್ರಹ್ಮ । ರೂಪುದೋರಿಯೇ ಮುದದೊಳಾಗಾ ॥ 1 ॥ ಸಚ್ಚಿತಾನಂದನೆಂ ।ದನು ಬಾಣಕೇಳ್ನಿನಗೆ । ಮೆಚ್ಚಿದೆನು ತವಭಕ್ತಿಗಿಂದೂ ॥ ಯಿಚ್ಛೆಯಾಗಿರುವದೇ । ನುಂಟು ವಂಚಿಸದೆನ್ನೊಳು । ಚ್ಚರಿಸು ನಿನಗೀವೆ ನೀಕ್ಷಣದೀ ॥ 2 ॥ ಯಂದು ಹರಪೇಳ್ದಡಾ । ನುಡಿಕೇಳಿ ನಗುತ ಖಳ । ನೆಂದನಘಹರ ಕೇಳು ನೀನೂ ॥ ಹಿಂದೆ ಸಹಸ್ರಹಸ್ತವ ನಿತ್ತೆ ಮತ್ತೇ । ನಿಂದು ಸತಿಸಹಿತ ಬಾಗಿಲನು ಕಾಯ್ದಿರುವೇ ॥ 3 ॥ ಯಿಂತು ನೀದಯಗೈದ । ಮೇಲೆ ನಾನಿಂನೊಡನೇ । ಮುಂತೆ ಪೇಳುವದೇನು ದೇವಾ ॥ ಕಂತುಸಂಹರನೆ ಮಾ । ರಾಂತು ಸಮರಾಂಗಣದಿ । ನಿಂತು ಕಾದುವರ ತೋರೆಂದಾ ॥ 4 ॥

## ॥ ಭಾಮಿನಿ ॥

ವೀರ ಖಳನಿಂತೆನಲು ನಗುತು । ಮಾರಮಣ ಪೇಳಿದನು ನಿಂನ ಮ । ಯೂರಕೇತನ ಮುರಿದು ಭೂಮಿಗೆ । ಬಿದ್ದ ದಿವಸದಲೀ ॥ ವಾರಿಜಾಕ್ಷನೊಳ್ಳೈದೆ ಸಮರವು । ಸೇರುವದು ನಿನಗೆಂದು ಪುರಹರ । ಭೂರಿ ಸಂತಸದಿಂದ ಲಂತರ್ಧಾ । ನವಂ ತಳೆದಾ ॥ 1 ॥

## ॥ ರಾಗ ಕೇತಾರಗೌಳ ಅಷ್ಟತಾಳ ॥

ಇಂತೆಂದು ಭವನ್ಯೆದೆ । ಬಳಿಕಾ ಬಾಣಾಖ್ಯ ತಾ । ನಂತ ಸೌಖ್ಯದೊಳಿರಲೂ ॥ ದಂತಿಗಮನೆದೈತ್ಯ । ಸುತೆಯುಷೆ ತಾನು । ಅಂತರಂಗದಿ ಬಾಡುತಾ ॥ 1 ॥ ಕರೆದೂ ಮಂತ್ರಿಜೆಗೆಂದಳ್ । ಸಖಿಕೇಳೆ ಪ್ರಾಯದೀ । ಮೆರೆವ ವೇಳ್ಯದಿ ಪಿತನೂ ॥ ಪರಿಣಯವನು ಮಾಡ । ಲಿಲ್ಲಾ ಸುಖದೊಳಿರ್ಪಾ । ಪರಿಯದೆಂತೆನಲೆಂದಳೂ ॥ 2 ॥ ಕನಕಾಂಗಿ ಕೇಳೆಂ ಮುದ್ಯಾ । ವನದೊಳು ಹರ । ನನುದಿನ ನೆಲಸಿರ್ಪಾನೂ ॥ ಚಿನುಮಯಾತ್ಮಕಿ ಸದಾ । ಶಿವೆಯಿಹಳಲ್ಲಿಗೆ । ಘನವೇಗದಿಂದಲ್ಯೆದೂ ॥ 3 ॥ ಹರಿವಾಹಿನಿಯ ಚರ । ಣಾರವಿಂದಕೆ ಪರಿ । ಪರಿಯಿಂದಲೇ ಸ್ತುತಿಸೀ ॥ ಹರುಷದಿ ಬೇಡಿ । ಕೊಂಡರೆ ನಿಂನ ಮನದಿಷ್ಟ । ಅರೆ ನಿಮಿಷದೊಳಹುದೂ ॥ 4 ॥ ಯನಲುಷೆ ಪೇಳ್ದಳು । ಕೇಳು ಮಾನುನೀ ಯಂನಾ । ಜನಕನಿದ್ದೆಡೆಗೆ ಪೋಗೀ ॥ ಮನುಮಥಾರಿಯ-ನೋಡಿ । ಬಪ್ಪೆ ನೆಂದವನೊಳ । ಪ್ಪಣೆಗೊಂಡು ಬಾರೆ ಬೇಗಾ ॥ 5 ॥

## ॥ ಕಂದಪದ್ಯ ॥

ಯಂದ ಮಾತನೂ ಕೇಳುತ್ತಾ ನಂದದೊಳಂ । ಚಿತ್ರಲೇಖೆಯು ಭರದಿಂ । ಬಂದಳು ಬಾಣನ ಬಳಿಗಂ । ವಂದಿಸೆ ಪಿಡಿದೆತ್ತಿ । ಪರಸುತ ಖಳನಿಂತೆಂದಂ ॥ 1 ॥

## ॥ ರಾಗ ತೋಡಿರಾಗ ॥

ಸರಸವಂತೆ ಮಂತ್ರಿಜಾತೆ । ಭರದಿ ಯನ್ನಾ ಬಳಿಯೊಳ್ಯೆದಿ ॥ ವರೆವ ಪರಿಯನೇನದೆನಲೂ । ಬಳಿಕಲರುಹುತೆಂದಳಾಗಾ ॥ 1॥ ದನುಜಾಧೀಶಾ ಕೇಳೋ ನಿಂನಾ । ತನುಜೆ ಹರನಾ ನೋಡಲೆಂದೂ ॥ ಜನಕನ ನೇಮವಕೊಂಡು । ವಿನಯದಿ ಬಾರೆಂದಳವಳೂ ॥ 2 ॥ ಮಂದಯಾನೆ ಲಾಲಿಸೆಂನಾ । ನಂದನೆಯಾ ಸಹಿತಾ ನೀನೂ ॥ ನಂದದಿಂದಾ ಶಂಕರನಾ । ನಿಂದುನೋಡಿ ಬಾರೆ ಯೀಗಾ ॥ 3 ॥

## ॥ ಕಂದಪದ್ಯ ॥

ದನುಜಾಧಿಪ ನೆಂದುದನಂ । ವನಜಾಂಬಕಿ ಕೇಳುತಲಾಗ ಲತಿಸಂಭ್ರಮದಿಂ ॥ ವನಿತಾಮಣಿ ಯುಷೆಯಡೆಗಂ । ಘನಬೇಗದಿಂ ಬಂದು ಪೇಳ್ದಳೊಯ್ಯನೆ ಹದನಂ ॥ 1 ॥

## ॥ ರಾಗ ಕೇತಾರಗೌಳ ॥ ಅಷ್ಟತಾಳ ॥

ಚಂದಿರಾನನೆ ಯುಷೆ । ಕೇಳ್ನಿಂನಾ ಪಿತನಲ್ಲಿ । ನಿಂದುನಾ ಭರದಿಪೋಗೀ ॥ ಚಂದದಿಂದಪ್ಪಣೆ । ಗೊಂಡ್ಯೆ ತಂದೆನುಪೋಪು । ದೆಂದನು ತಾನೆಂದಳೂ ॥ 1 ॥ ತರುಣಿ ನಿಂನೊಳು ನಾನು । ಹರುಷ ವರ್ಜಿತಳಾಗಿ । ಪೇಳ್ದಡೀವಾಕ್ಯವನೂ ॥ ಹರುಷದಿ ನಡೆಸಿದೆ । ಯಂದು ತೋಷದೊಳುಪ । ಚರಿಸೆ ಮಂತ್ರಿಜೆ ಪೇಳ್ದಳೂ ॥ 2 ॥ ಯಂನನೇತಕೆ ನೀನೂ । ಮಂನಿಪೆ ಯುಷೆಯೆಕೇಳ್ ನಿಂನಾ ಮನದ ಬಯಕೇ ॥ ಯಂನಾದಲ್ಲವೆ ಯೇಳು । ಶಿವೆಯಲ್ಲಿಗ್ಯೆದೂವಾ । ಚಂನಾಗಿ ನಾವಿಬ್ಬರೂ ॥ 3 ॥ ಯನಲಾ ಮಾತನು ಲಾಲಿ । ಸುತ ಯುಷೆ ತಂನಯ । ವಿನಯಾದ ಸಖಿಯರೊಳೂ ॥ ಕನಕದಾ ಭರಣವ । ತಂನಿರೆಂದೆನಲಾಗ । ವನಜಾಕ್ಷಿಯರು ತಂದಾರೂ ॥ 4 ॥

## ॥ ಭಾಮಿನಿ ॥

ಧಾರುಣಿಪತೀ ಕೇಳುಷೆಯು ತಾ । ನಾರಿಯರು ತಂದಾಭರಣವನು । ಭೂರಿಸಂತಸದಿಂದ ತೊಟ್ಟದಳ । ದೇನನೆಂಬೇ ॥ ಮಾರದೇವನ ಕ್ಯೆಯ್ಯಗಿಣಿಯಂ । ತಾ ರಮಣಿ ನಲವಿಂದ ಪೊರಟಳು । ಮಾರಹರ ನಿರುತಿರುವಸದನಕೆ । ಸಖಿಯರಿಂದಾ ॥ 1 ॥

## ॥ ರಾಗ ಮಾರವಿ ಆದಿತಾಳ ॥

ಬಂದಳೂ  ಉಷೆ – ಬಂದಳೂ ॥ ಸತಿ ವೃಂದ ಸರಸವಾಗಿ । ಮಂತ್ರಿನಂದನೆ ಸಹಿತಬೇಗಾ ॥ ಬಂದಳೂ ॥ ಪಲ್ಲ ॥ ನಡೆಗೆ ಹಂಸವು ಮರುಳಾಗೇ । ನುಡಿಗಿಣಿಗಳು ಕೂಡ್ಯೆತಾರೆ । ಮಡದಿಯರಾ ಧ್ವನಿಗೆ ಕೋಗಿಲೆ ಭ್ರಮಿಸೆ ॥ ಕಡುಜಾಣೆಯರ ಕಂಪಿಗಾರಡಿಗಳ ಝೇಂಕೃತಿಯಿಂದ । ಬಿಡದೆ ಬೆಂಬಳಿಯೊಳು ಬರೆ ಮೃಡನಿರ್ಪ ಕಾಂತಾರಕಾಗೀ ॥ ಬಂದಳೂ ॥ 1 ॥

## ॥ ವಾರ್ಧಿಕ್ಯ ॥

ಥರಥರದೊಳೆಸೆದಿಪ್ಪ । ಸರಗಳಿಂ ಮರಗಳಿಂ । ನೆರೆದು ಝೇಂಕರಿಸುತ್ತ ಮುತ್ತುತಿರುವಳಿಗಳಿಂ । ಪರಮ ಸಂಯಮಿಗಳಾಶ್ರಮಗಳಿಂದುರೆ । ಬೆಳೆದಲತೆಗಳಿಂ ತತಿಗಳಿಂದಾ ॥ ಮರಿಗಳಿಗೆ ಮೊಲೆಗೊಡುವ । ಮೃಗಗಳಿಂ ಖಗಗಳಿಂ ದಿರದೆ ಸತತಂ ಪರಿವ ಜಲಗಳಿಂ ಫಲಗಳಿಂ । ಧರಣಿ ಗತಿಮಿತಮಾಗಿ । ಸೊಂಪಿನಿಂ ತಂಪಿನಿಂದಾವನಂ । ಕಂಗೊಳಿಸಿತೂ ॥ 1 ॥ ಉರಗ ಕುಲವೇಣಿಯಂ । ಕಲಕೀರ ವಾಣಿಯಿಂ । ಶರಚರಸುನೇತ್ರದಿ ತರಣಿ ಸಖಿವದನದಿಂ । ಮೃದುಪದಸುಗಾತ್ರದಿಂ । ವರಕುಂದರದನದಿಂ । ತರುಣ ಹರಿ ಮಧ್ಯದಿಂದಾ ॥ ಹರಿಗೆ ಹಾಸಿಗೆಯಾದ ಮಹಿಮನಂ । ಶಿಷ್ಯಂ ಗುರುವನಂ । ನೆರೆಕಂಡರೆಂಗೈವ ರತ್ನಮಂ । ಮೆರೆವ ದಾರಾಮೆರೆದು ಮೂರರ ವಿಧಾನದೊಳು । ತ್ರಿಯಕ್ಷರದ ಪೆಸರಂ । ನೆರೆಮೂರು ಪಂಕ್ತಿಯಿಂ ಬರದೋದೆ ಮಧ್ಯದಕ್ಷರಕೆ ಬಂದಿರ್ಪ ನಾಮವೀವನಕಹುದೆಂದು । ಮರವಿಂದ ನೇತ್ರೆಯರ್ತಂಮ ತಮ್ಮೊಳ್ಮಾತನಾಡುತ ಲೈತಂದರೂ ॥ 2 ॥ ಹರಿವೇಣಿಯರ್ನಾರಿಯರ್ ತರಳೆಯರು । ಸರಸಕಲ ಸುಪ್ರವೀಣೆಯರ್ ಜಾಣೆಯರ್ । ಸ್ಮರಕದನಕೇಳಿ ಗತಿಧೀರೆಯರು ಭೃಂಗ ನಿಭಕುಂತಳೆಯರೂ ॥ ಹರಿಣಾಕ್ಷಿಯರ್ ಭಾಗ್ಯವಂತೆಯರ್ । ಕರಿಗಮನೆಯರ್ ಚಾರುಚರಣೆಯರ್ । ಕರುಣೆಯರ್ ಪರಿಮಳಿಪ ನವಕುಸುಮ । ಮಾಲೆಯರ್ ಬಾಲೆಯರ್ ಪರಶಿವೆಯಡೆಗೆ ಬಂದರೂ ॥ 3 ॥

## ॥ ಕಂದಪದ್ಯ ॥

ಬಾಣನ ನಂದನೆ । ಸುದತಿ । ಶ್ರೇಣಿಯ ನೊಡಗೊಂಡು ಮಯಿದೆ ಗಿರೀಶನ ಪದಮಂ । ಕಾಣುತ ಪಿಡಿದಿಹ ರನ್ನವ ಕಾಣಿಕೆ । ಯಿಟ್ಟರ್ತಿಯಿಂದ ನಮಿಸಿದರಾಗಳೂ ॥ 1 ॥

## ॥ ರಾಗ ತುಜಾವಂತು ಝಂಪೆತಾಳ ॥

ವಂದಿಸಿ ಪಿಡಿದಿಹ ದೈತ್ಯಜೆಯ ಬೇಗಾ ॥ ನಿಂದುಧರ ಪಿಡಿದೆತ್ತಿ । ಯಿಂದೇತಕಿಲ್ಲಿಗೈ । ತಂದಿರೆಂದೆನಲೂ ॥ ಉಷೆನಾಚಿ ತಲೆಯ ತಗ್ಗಿಸಿಕೊಂಡು ಸುಮನಿರೆ । ಶಶಿಧರಗೆ ಮಂತ್ರಿಸುತೆ । ಯುಸುರಿದಳೂ ॥ 1 ॥ ದೇವನಿಂನಯ ಪದವ । ನಾವವನು ನೋ[illegible]ಡಿ । ನ್ನಾವಜಲ್ಮದಿ ತಪವ ಮಾಡಿದೆವೋ ನಾವೂ ॥ ಅದರಿಂದ ನಿಂನ ಮೃದ । [illegible]ವ ಕಂಡೆವೆಂದೂ । ಸುದತಿರಂನಳು ಪೇಳೆ । ಮದನಾರಿ ನಗುತಾ । 2 ॥ ರಾಕೆಂದು ವದನೆಕೇ । ಳ್ಯಾಕೆ ನಾಚುವಳೀಕೆ । ಬೇಕಾದ ಬಯಕೆಯನು । ತಾ ಕೊಡುವೆನೆಂದೂ ॥ ಹರನು

ಮಂತ್ರಿಜೆಗೆಂದ । ಸರಸ ವಾಕ್ಯವ ಕೇಳಿ । ಹರುಷದಿಂದುಷೆ ನುಡಿದಳ್ । ಉರಗ ಭೂಷಣಗೇ ॥ 3 ॥

## ॥ ರಾಗ ತೋಡಿ ಏಕತಾಳ ॥

ಹರನೇ ಕೇಳೋ ನಿಂನಾ ಪಟ್ಟ । ದರಸಿಯಾ ನೋಳ್ವೆವಾವೆಂದೂ । ತರುಣಿಯರ ಸಹಿತನಾನೂ । ಭರದೊಳೈತಂದೇ ॥ 1 ॥ ಯನಲೀಶ ತನ್ನಯ । ವನಿತೆಯೊಳೆಂದನೂ । ಅನುವಿನಿಂ ಬಂದಿರ್ಪರ । ಮಂನಿಸೆಂದನಲಾಗಾ ॥ 2 ॥ ಯಿಂದುಶರನನೇಮ । ಗೊಂಡು ಗಿರಿಜಾತೆ ಅರ । ವಿಂದ ಮುಖಿಯರ್ಸಹಾ । ಬಂದಳೂ ಗೃಹಕೇ ॥ 3 ॥

## ॥ ಕಂದಪದ್ಯ ॥

ಗಿರಿಜೆಯಳಂತಃಪುರಕಂ । ಭರದಿಂದೈತಂದು । ಮೈದೆ ಸಂತಸದಿಂದಂ ॥ ತರುಣಿಯರಂ ನೋಡುತ್ತಂ । ಮತಿ ಕರುಣದಲಿ । ಚಿತ್ರಲೇಖೆಯೊಡನಿಂತೆಂದಳೂ ॥ 1 ॥

## ॥ ರಾಗ ಮಾರವಿ ಏಕತಾಳ ॥

ಕ್ಷೇಮವೇನೆ ಚಿತ್ರಲೇಖೆ । ನಿಂಮೆಲ್ಲರಿಗೆ । ಪರಿಣಾಮವೇನೆ ಬಾಣಗೆ ಸುಖ । ವೇನೆ ತವಪಿತಗೇ ॥ ಪಲ್ಲ ॥ ಯಂದು ಬಾರದುಷೆಯನ್ನಲ್ಲಿಗೆ । ಬಂದಳ್ಯಾಕೆತನ್ನಾ । ಮನದಿಷ್ಟಾವನ್ನೂ ಬೇಗಾ ॥ 1 ॥ ಕ್ಷೇಮ ಹರನರ್ಧಾಂಗಿನಿನ್ನಾ । ಕಂಡಮೇಲೆಲ್ಲರಿಗೂ ಕ್ಷೇಮಾ । ಹೊರತು ಕಷ್ಟದೊರೆವುದೆ । ಉಷೆಯ ಮನಪ್ರೇಮ ॥ ವರೆಯಲ್ಯಾಕೆ ತಿಳಿಯೇ ಲೋಕ । ಮಾತೆಯ್ಯೆಸೆ ನೀ । ನರಿತುದಯ ಮಾಡೆನ । ಲೆಂದಳೂ ಮಂದಹಾಸೇ ॥ 2 ॥ ಪುರುಷಾಪೇಕ್ಷೆಯಂ । ದರಿತೆಕೇಳೆನಾಳೇ । ಬರುವ ವೈಶಾಖ ಶುದ್ಧ । ದ್ವಾದಶಿ ದಿವಸದಿ ಬಾಲೇ ॥ ಸರಿರಾತ್ರಿಯೊಳು ಸ್ವಪ್ನದಲ್ಲೀ । ಮದನ ನಂದದಾತಾ ಬಂದೂ । ಇರದೆ ನೆರೆದು ಕಾಂತನಹನೂ । ಕೇಳೆ ನಂಬೂಮಾತಾ ॥ 3 ॥ ಇಂತೆಂದು ದೇವಿಯಪ್ಪಣೆಗೊಂಡೂ । ನಲವಿಂದ । ಕಾಂತೆ ಚಿತ್ರಲೇಖೆ ಸಹಿತುಷೆಯು ಚಂದದಿಂದಾ ॥ ಸಂತೋಷದಿಂದುಬ್ಬಿ ಬಂದಳೂ । ತಂನ ನಿಳಯಕೆಂದೆನುತ ನಾ । ನೆಂತುಬಂಣಿಸುವೆನವಳ । ಮನದನುರಾಗವಾ ॥ 4 ॥

## ॥ ಕಂದಪದ್ಯ ॥

ಶುಂಭಾಂತಿಕೆ ಪೇಳ್ದುದನಂ । ಪಂಬಲಿಸುತ ಬಾಣೋದ್ಭವೆ । ಯೊಂದುದಿನಂ । ಕುಂಭಾಂಡಾತ್ಮಜೆಯಂ ಕರೆದು । ಬಹಳಾಲಸ್ಯದಿಂದ ಮೆಲ್ಲನೆ । ನುಡಿದಳೂ ॥ 1 ॥

## ॥ ರಾಗ । ಯರಕಲ ಕಾಂಬೋಧಿ ಅಷ್ಟತಾಳ ॥

ಯೇನಾ ಮಾಡುವೆನೂ । ಹೇ ಸಖೀ ನಾನಿಂ । ನೇನ ಮಾಡುವೆನೂ ॥ ಪಲ್ಲ ॥ ಪರಶಿವೆಯಡೆಗೆ ನಾನೂ । ಪೇಳ್ದರೆ ಸರಿ । ರಾತ್ರೆಯೊಳಗೋರ್ವನೂ ॥ ಬರುತಾ ಸ್ವಪ್ನದೊಳಾತನೆ ಪ್ರಿಯನಹನೆಂದೂ । ಮುಕಾಂಬಿಕೆ । ಯಂದದಿವಸವೂ । ಯಂದಿಗೆನ್ನಯಾ । ಮನದಭೀಷ್ಟವು । ಕೈಸೇರ್ಪುದೆಂದೂ ದುಃಖಿದಲಿಪ್ಪೆನೇ ॥ 2 ॥ ಹೇಗೆ ಬರುವನೋ । ಕನಸಿನಲ್ಲಿ । ಹೇಗೆ ತೋರ್ಪನೋ । ಹೇಗೆ ಮರುಳು ಮಾಡಿ । ವಲಿಸಿಕೊಂಬೆನೆ ನಾನೂ । ಹೇಗೆ ಮುದ್ದಿ ಪೇನವನಾ । ಮತ್ತವನಾ ॥ 3 ॥

## ॥ ರಾಗ ಮಾರವಿ ಏಕತಾಳ ॥

ಎಂದ ಮಾತಿಗೆ ಮಂತ್ರಿ । ನಂದನೆ ನಸುನಗು । ತಂದು ಪೇಳಿದಳು ಬಾಣಜೆಗೇ ॥ ಯಿಂದೇಕೆ ಚಿಂತಿಪೆ । ಕಂದರ್ಪಾರಿಯ ಸತಿ । ಯಂದಾ ದಿವಸ ಬಂತು ಕೇಳೇ ॥ 1 ॥ ಅಳಬೇಡಾ ಸುಮ್ಮನೆ । ಮಲಗಿರೆ ರಾತ್ರೆಯೊಳ್ । ಚಲುವಾನ್ಯೆತಹ ನಂಬುಜಾಕ್ಷೀ ॥ ಬೆಳಗಾದ ಮೇಲೆನ್ನಾ । ಮನಕೆ ತೋರಿದೆತ್ನಾ । ತಳುವಾದೆ ಮಾಳ್ಪೆನಾ ಬಲ್ಲೇ ॥ 2॥ ಯಿಂತೆಂದುದನು ಕೇಳಿ । ಕಾಂತೆ ದೈತ್ಯಜೆ ವಿರಹ । ಸಂತಾಪದಿಂತೆಂದಳಾಗಾ ॥ ಕಾಂತೆಕೇಳೆ ರವಿಯು । ಯಿಂತು ಶೂನ್ಯನಂತೆ ಚಲಿಪ । ನ್ಯಾಕೆ ತಿಳಿದು ಪೇಳೆ ಬಾಲೇ ॥ 3 ॥ ತರಣಿ ಮೆಲ್ಲನೆ ಪೋಪು । ದುಂಟೇನೆ ಯೆಂದಿನಾ । ಪರಿಯಲ್ಲಿ ಸಾಗುವಾನವನೂ ॥ ಮರುಳಾದೆಯೇನೆಂದೂ । ಮಂತ್ರಿಜೆ ಯುಷೆಯಾ ಸಂತೈ । ಸಿರಲಿನಾನಿಳಿದ ನಂಬುಧಿಗೇ ॥ 4 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಅರಸಕೇಳಂತರ್ಯಮನುತಾ । ವನಧಿ ಗಿಳಿಯಲು ಸತಿಯರೀರ್ವರು । ವಿನಯದಿಂ ಭೋಜನವ ಗೈದತಿ । ಸುಖದಿ ಮಲಗಿರಲೂ ॥ 1 ॥ ಅನಿಮಿಶಾರ್ಚಿತೆ ಪೇಳ್ದ ದಿನದೊಳು । ಮನುಮಥೋಪಮ ಪುರುಷನೋರ್ವನು । ಅನುವಿನಿಂದುಷೆ ಸ್ವಪ್ನದೊಳುತಾ । ತೋರುತಾಗಾ ॥ 2 ॥ ಕಂತು ಶರದಿಂ ರಮಿಸುತಿರೆ ತಾಂ । ತವಕದಿಂದೆಚ್ಚರಿತು ಯುಷೆ । ಕಾಂತನನು ಕಾಣದಿರೆ ಅತಿ । ದುಃಖಿಸಿದಳೂ ॥ 3 ॥

## ॥ ರಾಗ ಸಾವೇರಿ ಆದಿತಾಳ ॥

ನಲ್ಲಾ ನೀನೆಲ್ಲಿ ಗೈದಿದೇ । ನಿಂನನು ಕಾಣದೇ । ಯಂನ ಮನಸುನಿಲ್ಲದೂ ॥ ಘುಲ್ಲಶರನ ಬಾಧೆಗೆ । ಗುರಿಯ ಮಾಡಿ । ಮೆಲ್ಲನೈದುವರೇ ಹೀಗೇ ॥ 1 ॥ ಸೋತೆನಾನಿಂನಾ ಗುಣಕೇ । ಯಿಂಥಾ ಮುನಿಸೂ । ಯಾತಕೆನ್ನೊಳು ಪರಾಕೇ ॥ ಮಾತೊಂದ ನಾಡಬಾರದೇ । ಒಂದು ನಿಮಿಷಪ್ರೀತಿಯೊಳಿರಬಾರದೇ ॥ 2 ॥ ಕುಳಿತಲ್ಲಿ ಕರೆವಳೆಂದೂ । ನೀನತಿಬಲು । ಮುಳಿಸಿಂದ ಬಾರೆಯಂದೂ ॥ ತಿಳಿದೆನೂ ನಿಂನಾ ಬಗೆಯಾ । ಇದ್ದಲ್ಲಿ ಬಂದು । ಘಳಿಲನೆ ವಂದಿಪೆ ಜೀಯಾ ॥ 3 ॥

## ॥ ರಾಗ ಮಧುಮಾಧವಿ ತ್ರಿವಿಡೆತಾಳ ॥

ಧರಣಿಪತಿ ಕೇಳೀಂತು ಬಾಣಜೆ । ವಿರಹದಿಂ ಭ್ರಮೆಗೊಂಡು ತಂನಯ । ಪುರುಷನಿಲ್ಲಿಯೇ ಮುಳಿಸಿನಿಂ ಮಲ । ಗಿರುವನೆಂದೆನುತಾ ॥ 1॥ ಮರುಗುತಲೆ ಪರಿಯಂಕದಿಂದಿಳಿ । ದಿರದೆ ಮಂತ್ರಿಜೆಯನ್ನು ಪ್ರಿಯೆನೆಂ । ದುರುತರದ ಪ್ರೇಮದಿಂದಪ್ಪಿದಳು । ಮನದಣಿಯೇ ॥ 2 ॥

## ॥ ಕಂದಪದ್ಯ ॥

ವಿರಹದೊಳುಷೆ ಯಿಪ್ಪಲ್ಕಂ । ತರುಣಿಮಣಿ ಬೆದರುತ್ತೆದ್ದು । ಮಹಧೈರ್ಯದೊಳಂ । ತರಳಾಕ್ಷಿಯಳಂ ಕಾಣುತ । ತರಹರಿಸುತ್ತೇಳ್ತಂದು । ಸಮ್ಮುಖಕಂ ॥ 1 ॥

## ॥ ರಾಗ ಸಾವೇರಿ ಅಷ್ಟತಾಳ ॥

ಯಾಕಿಲ್ಲಿಗೈತಂದೆ ಹೇಳೆ । ಯಿಂಥಾ । ವ್ಯಾಕುಲವೇನೆ ಹೇ ಬಾಲೇ । ರಾಕೆಂದು ವದನೆನೀನೂ । ಕಾಕುಜನ । ರಂದದಲಿ । ಪೋಕಳಾಗಿಹಳೇಕೇ ॥ 1 ॥

## ॥ ರಾಗ ನೀಲಾಂಬರಿ ಆದಿತಾಳ ॥

ಯೇನಾ ಹೇಳಲಂಮಾ । ಯಂನದುಃಖ । ಯೇನಾ ಹೇಳಲಂಮಾ ॥ ಪಲ್ಲ ॥ ಸುರವರ ನಗರದೊಳೂ । ಯಿಲ್ಲದ । ಪುರುಷ ಸಂಪ್ರೀತಿಯೊಳೂ ॥ ನೆರೆದು ವಂಚಿಸಿಪೋದನೂ ॥ ನಾಥನಕಾಣದೇ । ಯಿರಲಾರೆನು ಭೂತಳದೀ ॥ 1 ॥ ಯೇ ಕೆಳದಿ ನೀ । ಲಜ್ಜಿಸಬೇಡವೇ । ಕಾಯದಲಿದ್ದಾ । ಕಂತುಗಲಿಯಕಾಣದೇ । ಕಾಂತನೆಲ್ಲಿಗೆ ಪೋದರೂ । ತಂದೊಂಮೆ । ನಿಂತು ತೋರಿಸೆ ಹೇ ಜಾಣೇ ॥ ಸುಪ್ರವೀಣೇ ॥ 2 ॥

ಕನಸಿನೊಳ್ಕೊಟ್ಟಿರ್ಪುದಕ್ಕೆ । ಜೊತೆಯಂನು । ಕನಲಿದಂತಾಯ್ತಿದಕೇ ॥ ನೆನಸಿಕೋ ಹರನ ಅರ್ಧಾಂಗಿ । ಪೇಳಿದಮಾತಾ । ಮನದೊಳು ಧೈರ್ಯವತಾಳಿ । ಕೊಳ್ಳುಷೆ ಯೀಗಾ ॥ 3 ॥ ಸುಂಮನೆ ಮತಿಗೆಟ್ಟು ನೀನೂ । ಕೂಗಲುಬೇಡಾ । ಅಂಮಯ್ಯಾ ಸೈರಿಸಿಂನೂ । ನಂಮವರೆಚ್ಚರ್ತಿಹರೂ । ಮರುಗದಿರಂಮಾ । ದಂಮಯ್ಯಾ ಉದಯವಾಗಲೀ ॥ 4 ॥

## ॥ ಕಂದಪದ್ಯ ॥

ತರುಣಿಯನು ಸಂತೈಸಿ ಹರುಷದೊಳಂ । ಚಿತ್ರಲೇಖೆ ಮಲಗಿರಲಾಗಳಂ । ಸರಸಿಜನುದಯಿಸಲುಷೆ । ಮರುಗುತ್ತಿರೆ ಸಚಿವನಣುಗೆ । ಮತ್ತಿಂತೆಂದಳೂ ॥ 1 ॥

## ॥ ರಾಗ ತೋಡಿ ಅಷ್ಟತಾಳ ॥

ಶಶಿಮುಖಿ ಯಾಕೆ ದುಃಖಿಸುವೇ । ಹೇಳೆಂನೊಳು । ಹೆಸರೇನೆ ಬಂದವನಾರೂ । ಪುಸಿಯಲ್ಲಾ ನಾಂನಿನ ಬಳಿಗೇ । ತೋರಿಸುವೆ । ಸಾಹಸವಂನು ನೋಡೆನೀನೂ ॥ 1 ॥ ಕಾವಾನಂತಿಹನು ಕೇಳೆ । ನಾನಾತನ । ನಾವಾವನರಿಯೇ ನೀನೂ । ಪ್ರೇಮದಿಂದೆಂತಾದರೂ । ಕರತಂದು । ಮಹಿಮನಾ ತೋರಿಸೆಂನನೂ ॥ 2 ॥ ತರುಣಿ ಬಾಣಜೆಯಾಲಿಸು ತ್ರೈಲೋಕದ । ಪುರುಷರಾಕಾರವಂನೂ । ಬರತಹೆನಾತನಾ ಗುರುತವಾ । ಪೇಳ್ದಪೆ । ಕರತಹೆ ನವನಾನೋಡೇ ॥ 3 ॥ ಅಕ್ಕ ಕೇಳ್ ನನಗೋಸ್ಕರ । ಲೋಕ ಲೋಕವಾ । ಸುತ್ತಬೇಕಿರುಳಿನಲ್ಲಿ । ರಕ್ಕಸ ಭೂತಬೇತಾಳಾದಿ ಘಳಿಗೆಯು । ಸಿಕ್ಕದಂತೈದುವೆಯಾ ॥ 4 ॥ ದನುಜರಗುರು ಕಲಿಸಿದ ನಾನಾ । ವಿಧಿಧಿ ಮ । ತ್ತನುವಿನಿಂ ತಿರುಗುವೆನೂ । ವನಜಾಕ್ಷಿ 'ನಾಬರು । ವನಕ ದುಃಖಿಸಬೇಡಾ । ಮನೆಯೊಳಗಿರು ಸುಂಮನೇ ॥ 5 ॥

## ॥ ವಾರ್ಧಿಕ್ಯ ॥

ಜನಪ ಕೇಳುಷೆಯ ಸಂತೈಸಿ ಮಂತ್ರಿಜೆಯು । ದಿನಪನಸ್ತಮಿಸಲಾ ರಾತ್ರೆಯೊಳ್ । ಪೊರಮಟ್ಟಳನುವಿನಿಂ । ದೆರಳು ಭುವನದಾಕಾರಮಂ । ನೆರೆ ಕಂಡು ಕಂಡು ಬರೆದೂ ॥ ಘನಬೇಗ ವಾಲಯಕ್ಕಲದಳತಿ । ಶ್ರಮದಿಂದ ಕನಕಾಂಗಿ ಮಲಗಿರಲ್ । ಇನನುದಯಮಾಗಲುರೆ । ವಿನಯದಿಂದಿರ್ದು ಬಾಣಜೆಯ । ನೈದೆ ಕರದಿಂತೆಂದಳು ಸಚಿವಾತ್ಮಜೇ ॥ 1 ॥

## ॥ ರಾಗ ಕೇತಾರಗೌಳ ಝಂಪೆತಾಳ ॥

ತರುಣಿ ದುಃಖಿಸದಿರಿಂನೂ । ಲೋಕದಾ । ಪುರುಷರಾಕಾರವಂನೂ ॥ ಬರದೀಗ ತಂದೆಕಾಣೇ । ಕರುಣದಲಿ । ನೀ ಬಂದು ನೋಡೆಜಾಣೇ ॥ 1 ॥ ಸುರಪ ಮುಖ್ಯಮರರಂನೂ । ಸಿದ್ಧಕಿಂನರ । ಯಕ್ಷರಾಕ್ಷಸರನೂ ॥ ಗರುಡಗಂಧರ್ವರಂನೂ । ಉರಗ ಕಿಂ । ಪುರುಷ ವಿದ್ಯಾಧರರನೂ ॥ 2 ॥ ಪೃಥ್ವಿಪಾಲಕ ರೂಪವಂತಾ । ಬರತಂದೆ । ನಿತ್ತನೋಡೆಂದೆನುತ್ತಾ ॥ ಮತ್ತಕಾಶಿನಿ ತೋರಲೂ ॥ ಯಿವರಲ್ಲ । ಯನುತ ಬಾಣಜೆ ಪೇಳ್ದಳೂ ॥ 3 ॥ ಬಳಿಕಯದುವೀರರಂನೂ । ತೋರಿದಳು । ಬಲರಾಮ ಕೃಷ್ಣರಂನೂ ॥ ನಳಿನಬಾಣನ ಕಂಡಳೂ । ಯಿವನವನ । ಚಲುವಿಕೆಗೆ ಸಮಗಂಡಳೂ ॥ 4 ॥ ರಕ್ಕಸಾರಿಯ ವೊಮ್ಮನಾ । ತೋರಿಸಲೂ । ನಕ್ಕಳಿವ ನಹುದುಮೆಂನಾ ॥ ರಕ್ಕಿಸಿದ ಧೀರನೆಂದೂ । ಉಷೆ ಹರುಷ । ವುಕ್ಕಿ ಲಜ್ಜಿಸಿದಳಂದೂ ॥ 5 ॥ ಯಾಕೆ ಲಜ್ಜಿಸುವೆ ಪ್ರೌಡೇ । ಕ್ಷಣಕವನ । ಕರತರುವೆ ನೋಡೇ ॥ ಸಾಕುಸುಃಖಿಸದಿರೆಂದೂ । ವರಚಿತ್ರ । ಲೇಖೆತಾ ನುಡಿದಳಂದೂ ॥ 6 ॥

## ॥ ರಾಗ ಮಧ್ಯಮಾಧವಿ ತ್ರಿವಿಡೆತಾಳ ॥

ಅರಸಕೇಳಿಂತುಷೆಯ ಸಂತೈ । ಸಿರಲು ಮಂತ್ರಿಜೆಯತ್ತ ಕಾಮನ । ತರುಣಗೀ ಬಾಣಜೆಯ ಸ್ವಪ್ನವ । ಕಂಡ ದಿವಸದಲೀ ॥ 1 ॥ ತರುಣಿಯೋರ್ವಳ ಸರಸದಲಿತಾ । ನೆರೆದೆನೆಂದೀಕ್ಷಿಸಿಯೇ ಚಿಂತಾ । ಭರಿತದಿಂದಿರುತಿರ್ದನವಳನು । ನೋಳ್ಪ ತವಕದಲೀ ॥ 2 ॥

## ॥ ವಾರ್ಧಿಕ್ಯ ॥

ಆಸಮಯದೊಳಗಿತ್ತಲಾ ಮಂತ್ರಿಯಾತ್ಮಜೆ । ವಿಲಾಸದಿಂ ತರಣಿಯಸ್ತಮಿಸ । ಲೈತಂದಳು ಪ್ರಕಾಶದಿಂ । ಮೆರೆವದ್ವಾರಕಿಯ ಮೆಲ್ಲನೊಳಪೊಕ್ಕು । ಮನ್ಮಥಸುತನ ತೋಷದಿಂದಾ ॥ ಒಡಬಡಿಸುತುಷೆಯ ರೂಪಂ । ತೋರಿತಾ ಸ್ವಪ್ನದೊಳ್ ಕಂಡ । ಸತಿಯಂತಿರಲ್ಮಂದಹಾಸದಿಂ ಬರ್ಪನೆನೆ । ಅನಿರುದ್ಧನಂ ಪೊತ್ತು । ಅನಿಲವೇಗದಿಂ ಬಂದಳೂ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಯಿಂತು ವೋರ್ವರು ಅರಿಯದಾ ವೋಲ್ । ಕಂತುಜನನುಷೆಯಿರುವಗೃ । ಹಾಂತರದೊಳಿಳುಹಿದಳು ಮೆಲ್ಲನೆ । ಸಂತಸದೊಳೂ ॥ 1 ॥ ಬಳಿಕಸರಸಿಜಮಿತ್ರನುದಯಿಸೆ

। ಘಳಿಲನಾ ಬಾಣಜೆಯ ಕರದೆಂ । ದಳು ವಿನೋದದಿ ಸಚಿವಸುತೆಯತಿ । ಗೆಲವಿನಿಂದಾ ॥ 2 ॥। ಸರಸಿಜಾಂಬಕಿ ನೋಡೆನಿಂನೊಳು । ನೆರೆದು ತೋಷವ ಬಿಡಿಸಿ ಪೇಳಿದೆ । ಮರಳಿ ವಂಚಿಸಿ ಮೆಲ್ಲನ್ಯೆದಿದ । ಪುರುಷನಿವನೂ ॥ 3 ॥ ಯನಲುಕೇಳ್ದಾ ಬಾಣನಂದನೆ । ಘನಹರುಷದಿಂ ಬಂದು ಕಂಡಳು । ದಿನಪತೇಜವ ಜರಿವುತಿರ್ಪಾ । ಮನುಮಥಜನಾ ॥ 4 ॥

## ॥ ರಾಗ ಪಹಡಿ ಆದಿತಾಳ ॥

ಚಲುವನಾ ಕಂಡುಷೆ । ಯೊಲವಿಂದವನಪಾದ । ಜಲದಿ ತೊಳೆದುಸಂಭ್ರಮದೀ ॥ ನಲಿವಿಂದ ಲಜ್ಜಿಸಿ । ನಗುತೆಂದಳೂ । ನೆಲನಾನೋಡುತಾ । ಕಾಂತಗಂದೂ ॥ 1 ॥ ಸರಸವಂತನೆ ಮೊಂನೆ । ಯಿರುಳೊಳ್ಯೆತಂದೂ ನಾ । ನರಿಯದಂದದಿ ವಂಚಿಸಬಹುದೇ ॥ ಸರಸದೊಳಿದ್ದುಸಂ । ತೋಷಪಡಿಸಿ ಮತ್ತೆ । ಮರಳಿ ವಂಚಿಸಿ ಪೋಗಬಹುದೇ ॥ 2 ॥ ಮಾನಿನಿಮಣಿಕೇಳ್ । ವಂಚಿಸಿಪೋದಾತಾ । ನಾನಲ್ಲಾ ನೀನಲ್ಲಾ ಕಾಣೇ ॥ ಯೇನಾದರಾಗಲೇಕಾಮಾತಿಂ । ನೆನುತಲೆ । ಆನಂದದಿಂದಪ್ಪಿದನೂ ॥ 3 ॥ ಯರೆಯ ಕೇಳು ನಿಂನಕಾಣದೇ । ದುಃಖದೊ । ಳಿರಲು ಮಂತ್ರಿಜೆ ಕಂಡುಬೇಗಾ ॥ ಕರತಂದು ಹರುಷವ । ರಚಿಸಿದಳವಳಿಗೆ । ಸರಿಯಹ ನಾರಿಯರುಂಟೇ ॥ 4 ॥

## ॥ ರಾಗ ಮಾರವಿ ಆದಿತಾಳ ॥

ವನಿತೆ ಕೇಳೆಂನನು ಪೊಗಳಲು ಬೇಡವೇ । ನಿನಗೆ ಯಿಂದಿನವರೆಗೇ ॥ ದಣಿದಿಹ ಕೇಳ ನಿಂ । ನಿಯಗೆ ಮಜ್ಜನಗ್ಯೆದೂ ॥ ಚಂದದಿ ಭೋಜನವಾಗಲು । ಪರಮಾ । ನಂದದೊಳನವರತಾ ॥ 2 ॥ ಸುರತಕ್ರೀಡೆಯೊಳಿರುತಿರ್ದಳು । ಮತ್ತೇ । ಸರಸದೊಳಿಂನವಳೂ ॥ ಹರುಷವನೆಂತೊರೆವೆನೋ । ಕೇಳ್ಯೆ । ಧರೆಗೆ ಸಜ್ಜನರುಗಳೂ ॥ 3 ॥

## । ಕಂದಪದ್ಯ ॥

ಅನಿರುದ್ಧನೊಳೀ ಪರಿಯಿಂ । ದಿನದಿನದೊಳು ಬಾಣ । ತನುಜೆಯತಿಸಂಭ್ರಮದಿಂ । ಮನುಮಥ ಕೇಳಿಯೊಳ್ ಇರುತಿರೆ । ಮುನಿಪತಿ ನಾರದನಸುರನ । ಸಭೆಗ್ಯೆತಂದಂ ॥ 1 ॥

## ॥ ರಾಗ ಕೇತಾರಗೌಳ ಅಷ್ಟತಾಳ ॥

ಅಂಬರಮಣಿ ಭೂಮಿ । ಗಿಳಿವಂತೆ ನಭದಿಂದ । ಕುಂಭಿನಿಗಾಗಿ ನಾರದನೂ ॥ ಅಂಬುಜನಾಭಾ ಶಂಕರನ ಸ್ಮರಣೆಯಿಂದ । ಬಂದನು ಶೋಣಿತಪುರಕೇ ॥ 1 ॥

## । ರಾಗ ಭೈರವಿ ಅಷ್ಟತಾಳ ॥

ನಾರದ ಮುನಿಪನನೂ । ಕಾಣುತ ಲಮ । ರಾರಿ ಬಾಣಾಖ್ಯತಾನೂ ॥ ಭೋರನೆದ್ದಿದಿರ್ಬಂದು । ಪರಮರುಷಿಯ ಚರ । ಣಾರವಿಂದಕೆ ವಂದಿಸಿ ॥ 1 ॥ ಕರವಿಡಿದಾಸನದೀ । ಕುಳ್ಳಿರಿಸುತ್ತಾ । ಚರಣಪೂಜೆಯ ಮುದದೀ ॥ ವಿರಚಿಸಿಬಲುಸ್ತುತಿಗೈದೂ । ಮಗುಳೆಪಾದ । ಕ್ಕೆರಗುತ್ತಿಂತೆಂದನಾಗಾ ॥ 2 ॥ ಯತಿರಾಯಾ ನೊಲಿದುನೀನೂ । ಬಂದುದರಿಂದ । ಕೃತಕೃತ್ಯನಾದೆ ನಾನೂ ॥ ಮತಿವಂತಾ ನೀನಿಲ್ಲಿ । ಗೈತಂದ ಕಾರ್ಯವಾ । ನತಿಬೇಗದಿಂದ ಪೇಳೂ ॥ 3 ॥ ಬಾಣನಿಂನ್ಯೆಶ್ವರ್ಯಕೇ । ನಿಖಿಳರೊಳ್ । ಗೀರ್ವಾಣರು ಸರಿಯಿಲ್ಲವ್ವೆ ॥ ಯೇಣಾಂಕಧರ ಬಂದು ಬಾಗಿಲಕಾಯ್ವ । ಕಾಣದಾದನು । ನಿಂನ ಮಾನಹಾನಿಗಳಾ ॥ 4 ॥ ಆತ ಕಾಣದೆಪೋದರೆ । ಪೋಗಲಿಮುನಿ । ನಾಥ ನೀನರಿತಿದ್ದರೇ । ಯಾತರ ಮಾನಹಾನಿಯು ಪೇಳು । ಪೇಳೆಂದೂ । ಕಾತುರದಿಂ ಪೇಳಿದಾ ॥ 5 ॥ ಉಸುರೆಂದರುಸುರ್ವೆನಾನೂ । ನೀ ತಲೆಯ ತಗ್ಗಿಸುವ ಹಾಗಾಯ್ತಿಂನೂ ಅಸುರೇಂದ್ರಾ ಕೇಳ್ನಿನ್ನಾ । ತನುಜಾತೆ ಸೂಳೆಯಂ ತೆಸೆವಳೆನೆಂಬೆ ನಾನೂ ॥ 6 ॥

## ॥ ಕಂದಪದ್ಯ ॥

ಯೀಪರಿಯಿಂದವ ನಾರದ ಪೇಳಲೂ । ಬಾಣಾಖ್ಯನತಿ ಚೋದ್ಯವೆಂದೆನುತ್ತುಸುರಿದ ಬಗೆಯಿದೆಂತೆನೆ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಸುರಮುನಿಪ ನೀನಿಂತು ಪೇಳ್ವರೆ । ತರಳೆಯಾಲಯದಲ್ಲಿ ಕಾವಲ । ನಿರಿಸಿಹೆನುಬಲು ಖಳರದಲ್ಲಿಗೆ । ಬರುವದುಂಟೇ ॥ 1 ॥

## ॥ ರಾಗ ಸಾಂಗತ್ಯ ರೂಪಕತಾಳ ॥

ಅಸುರಾಧಿಪನೇ ನೀನೂ । ಬಡವನೇ ಬಲ್ಲೆಸಾ । ಹಸಿಕನೆಂಬುದನೂ ನಾನೂ ॥ ಪುಸಿಯಲ್ಲೋರ್ವನು ಬಂದು । ಪೊಕ್ಕಿಹನಲ್ಲಿದ್ದ । ಅಸುರರರಿಯದಂತೇ ॥ 1 ॥

॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಯಂದುದನು ಕೇಳುತ್ತ ಖಳಖತಿ । ಯಿಂದ ನುಡಿದನು ಮುನಿಪಕೇಳ್ಳೈ । ಬಂದವನು ತಾನಾರು ಮುಗಿಸುವೇ । ನೊಂದು ಕ್ಷಣದೀ ॥ 1 ॥

## ॥ ರಾಗ ಸಾಂಗತ್ಯ ರೂಪಕತಾಳ ॥

ಬಂದವನ್ಯಾರೆಂದು ಕೇಳು । ಪೇಳುವೆ । ಯಿಂದಿರೆ ಯರಸನಮೊಂಮಾ ॥ ಕೊಂದೆನೆಂದರೆ ನಿಂನಾ । ಕೈಗಳಾವಡೆವನವ । ನೆಂದನೂ ಮುನಿನಾಥ ನಗುತಾ ॥ 1 ॥

॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ರುಷಿತಿಲಕ ನೀನುಳಿದುಳಿದವ । ರುಸುರ್ದರಾದರೆ ಶಿಕ್ಷಿಸುವೆನಿದ । ರುಷಿಯೊಳಗೆ ಯಿದಿರುಂಟೆ ಪೇಳಿದ । ಪೊಸ ಬಗೆಯನೂ ॥ 1 ॥

## ॥ ರಾಗ ಸಾಂಗತ್ಯ ರೂಪಕತಾಳ ॥

ಹರನಿಂನ ಬಾಗಿಲ । ಕಾಯ್ವನೆಂದ ಹಂ । ಕರಿಸಿ ಧಿಕ್ಕರಿಸೆ ಹರಿಗಿದಿರೇ ॥ ಬರುವ ಭಾಗ್ಯಗಳೇನೂ । ಮಸಿಪೇಳ್ದರೆಮಗೆನೀ । ತರಳೆ ಯಾಲಯವಾನೋಡೆಂದಾ ॥ 1 ॥

## ॥ ಕಂದಪದ್ಯ ॥

ಯಂದಾ ವಾಕ್ಯವನುಂ ಕೇಳ್ದುಂ ಖತಿ । ಯಿಂದ ದಾನವೇಂದ್ರಂಭರದಿಂ । ಮುಂದಿಹ ಕುಭಾಂಡನೊಳಿಂತೆಂದಂ । ಘನದಬಗೆಗಿಂನೂ ॥ 1॥

## ॥ ರಾಗ ಕಾಂಬೋಧಿ ಝುಂಪೆತಾಳ ॥

ದುರಧೀರ ಮಂತ್ರಿಕೇಳ್ । ಮುನಿಪೇಳ್ದ ವಚನವಿದು । ಸರಿಬಂತೇನಿಂನ ಮನಕಿಂನೂ ॥ ತುರುಗಾಯ್ದನಣುಗನಾ । ತ್ಮಜನೆಂನ ಮಗಳಿಂಗೆ । ವರನಾಗ ಬಲ್ಲನೇನಯ್ಯಾ ॥ 1 ॥ ದಾನವಾಧಿಪ ಕೇಳೂ । ಮುನಿಪೇಳ್ವನಲ್ಲಿಸುರ । ಮೌನಿತಾ ಸುಜ್ಞಾನಿಯ್ಯೆಸೆ ॥ ಯೇನಾದರೊಂಮೆನಾಂ । ಪೋಗಿಯದರನಿ । ದಾನವರಿತು ಸುರ್ವೆ ನಿಂನೊಡನೇ ॥ 2 ॥ ಯಲೆಸಚಿವ ಲಾಲಿಸೆಂ । ನಣುಗೆಯಾಲಯಕೆ । ಘಳಿಲ ನಿರದ್ಯೆದಿ ಬಂದವನಾ ॥ ಬಲವಂತನಾದರವ । ನನು ತಾರದಿರೆ ನಿಂನಾ । ಉಳಿಸೆನರಿದ್ಯೆದು ಬೇಗದಲೀ ॥ 3 ॥ ಜೀಯ ನೀನೆಂನೊಳುಪೇಳ್ದ । ಮಾತಿಗಂತರವೇನವ । ಮಾಯದಂಕವನಾದರೇನೂ ॥ ಸಾಯದಂತೆಡಗೆಡೆದು । ತಂದೊಪ್ಪಿಸುವೆ ನಸುರ । ರಾಯಚಿತ್ತೈಸೆಂದನಾಗಾ ॥ 4 ॥

## ॥ ಕಂದಪದ್ಯ ॥

ಯಂದಪ್ಪಣೆಗೊಂಡಾ ಶರ । ವೃಂದವೆನೆರಪಿ ಮಂತ್ರಿವರ ನಾಕ್ಷಣದೊಳೂ ಮುಂ । ನಿಂದತಿರೋಷಂ ಮೇ । ಳ್ತಂದು ಯುಷೆಯಾಲಯಕಂ ॥ 1 ॥

## ॥ ವಾರ್ಧಿಕ್ಯ ॥

ಪೃಥ್ವಿಪ ಕುಲೋತ್ತಮನೇ । ಚಿತ್ತವಿಸು ಮಂತ್ರಿಯಂ । ಮತ್ತೆ ಖತಿವೆತ್ತು ಹೊಳೆ । ವುತ್ತಲಿಹ ಖಡ್ಗಮಂ । ನೆತ್ತಿ ಹಯಹಸ್ತಿರಥ । ಪತ್ತಿಸಂದೋಹದಿಂ । ದೊತ್ತಿ ನಡೆವುತ್ತಮಿರಲೂ ॥ ಕುತ್ತಿಗೆಯ ಮೊತ್ತಂಗ ।ಳೆತ್ತಲಂ ತಮವನಂ । ಬತ್ತುತಿರೆ ದೈತ್ಯರಂ । ಸತ್ವದಿಂದೇಳ್ತಂದು । ಮತ್ತೆಕಾಣುತ್ತೋರ್ವ । ಪತ್ನಿಬೆದರುತ್ತಂದು । ಚಿತ್ರಲೇಖೆಗೆ ಪೇಳ್ದಳೂ ॥ 1 ॥

## ॥ ರಾಗ ಶಂಕರಾಭರಣ ಅಷ್ಟತಾಳ ॥

ಕೇಳೆಯಕ್ಕಾ ನಾರದನೂ । ಬಾಣನಾ ಸಭೆಗೆಬಂದು । ಪೇಳ್ದನಂತೆ ಈವೃ । ತ್ತಾಂತವಂನು ಆತಗೇ ॥ 1 ॥ ಕಾಲನಾ ತೆರದಿದೈತ್ಯಾ । ಕೋಪಿಸುತ್ತಿರೆ ಮಂತ್ರಿಕೇಳಿ । ಬಪ್ಪನಂತೆ ಈತನಕೊಂದು । ಪೋಪರೇ ॥ 2 ॥ ಯಂದಮಾತಾ ಕೇಳುತಲೆ । ಚಿಂತಿಸುತ್ತಲಿರಲಾಗ । ಮಂತ್ರಿನಂದನೆಯುಬಾಗಿಲ । ನಿಕ್ಕಿಸಿಬೇಗಾ ॥ 3 ॥ ತಂದು ರಕ್ಕಸಿಯರಂನೂ । ಕಾವಲನಿರಿಸಿ ತಾನೂ । ಬಂದು ಪೇಳಿದಳೂ ಕಾಮ । ಜಗೇ ಚಿಂತಿಸೀ ॥ 4 ॥

## ॥ ರಾಗ ಸವೇರಿ ಏಕತಾಳ ॥

ಕೇಳಯ್ಯಾ ಸ್ಮರಜಾತಾ । ನಾನೆಂಬ ವಚನವ । ಜಾಲಮಾತಲ್ಲಾ ಕಿವಿಗೊಟ್ಟಿದ । ನೆಲ್ಲಾ ॥ ಪಲ್ಲ ॥ ರುಷಿನಾರದನೂ ಬಂದು । ಬಾಣನೊಳ್‌ಚಾಡಿಯ । ನುಸುರಲು ಕೋವಿದ । ನಂತೇ ಮತ್ತೇ । ಅಸುರೇಂದ್ರ ಮಂತ್ರಿಯ । ಕರದಟ್ಟಲಾತನ । ರಾಕ್ಷಸ ಬಲಸಹಬಪ್ಪ । ನದಕೋ ನೋಡಯ್ಯಾ ॥ 1 ॥ ಖಳರೆಂದು ಮನೆಯ ಹೆ । ಬ್ಬಾಗಿಲ ಬಳಿಯ । ಲ್ಲಿರ್ಪರು ನಿಂನನು ಕಂ । ಡರೆ ತಿಂಬೆವೆಂದೂ ॥ ನಳಿನಾಕ್ಷಿ ಯುಷೆಗಾಗಿ । ನಾಕರತಂದಿಲ್ಲಿ । ಕೊಲಿಸಿದಂತಾದುದಕ । ಟೆಂದಳಾ ಸಖಿಯೂ ॥ 2 ॥ ಜಲಜಾಕ್ಷಿ ಮಂತ್ರಿಜೆ । ಕೇಳೆ ಮಾತೆಯ ಗರ್ಭ । ದೊಳ ಪೊಕ್ಕರ್ಬಿಡದು ಲೋ । ಕೇಶನ ಬರಹಾ ॥ ಲಲಿತಾಂಗಿಯೇ ಇಂಥಾ । ಚಲುವೆಯೋರ್ವಳ ದೊರ । ಕಿಸಿದೆ ನೀನೆಂನಾ ಕೊಲಿ ।

ಸಿದೆ ಎಂಬುದುಂಟೇ ॥ 3 ॥

## ॥ ರಾಗ ನಾದನಾಮಕ್ರಿಯೆ ಅಷ್ಟತಾಳ ॥

ಯಿಂತು ಮಾತಾಡುವದನು ಕೇಳ್ದು । ತಂನ । ಕಾಂತನ ಪಾದದೊಳಗೆಬಿದ್ದೂ ॥ ಕಾಂತೆಯುಷೆಯು ಪೊರಳುತಿರೆ । ಕಂಡು । ಸಂತೈಸಿದನು ಸುಂಮನಿರು ನೀರೆ ॥ 1 ॥ ಬೇಡವೇ ನಿನಗೆ ಶೋಕಗಳೂ । ಯುದ್ಧ । ಮಾಡುವದನು ನೀ ನೋಡೇಳೂ ॥ ಕೂಡಿದ ರಕ್ಕಸ ಬಲವಂನೂ । ಮಂಣ । ಕೂಡಿಸುವೆನು ನಿಮಿಷದಿ ನಾನೂ ॥ 2 ॥ ಯಂದುಸತಿಯ ಕಂಬನಿಯಂನೂ । ಸೆರ । ಗಿಂದಲೊರೆಸಿ ಚುಂಬಿಸಿದನೂ ॥ ದಂದದಿಂದಪ್ಪಿ ಸಂತೈಸಿದಾ । ರಣ । ಕೆಂದೂ ಶೃಂಗಾವಾದನಿರುದ್ಧಾ ॥ 3 ॥

## ॥ ವಾರ್ಧಿಕ್ಯ ॥

ಧರಣಿಪತಿ ಲಾಲಿಸೂ । ಪರಿಯಿಂದ ಲಂಗಜಂ । ಧುರಕೆ ಸಂನಹಮಾ । ಗಿರಲ್ಮಂತ್ರಿಜಾತೆ ಕಂ । ಡುರುತರ ಪ್ರೇಮದಿಂ । ದೆಂತ್ರಮಣಿಯಂ । ರಚಿಸಿ ತೋಳ್ಗದಂ ಕಟ್ಟಿಬಳಕಾ ॥ ದುರುಳರೈತಪ್ಪ ಸಮಯದೊಳ್ । ಬರಿಗೈಯೊಳಿರಬಾರದೆಂದು । ಕಪಟದಲಿ ಧನು । ಶರವ ತರಿಸಿಕೊಟ್ಟಿತು ಮತ್ತೆ । ಸಂಭ್ರಮದಿಸೇಸೆಯತಳೆಯೇ ಸ್ಮರಸುತನೆದ್ದನೂ ॥ 1 ॥

## ॥ ಕಂದಪದ್ಯ ॥

ಕಂದರ್ಪಾತ್ಮಜನೀ ಪರಿಯಿಂದಂ । ಶಸ್ತ್ರಾಸ್ತ್ರವಿಡಿದು ಮೆರೆದಿಪ್ಪಾಗಳೆ ಬಂದಾ ಸಚಿವಂ । ಪೊರ ಬಳಿಯೊಳ್ನಿಂದು ಘನಘರ್ಜಿಸುವ ಬಗೆಯನುಂ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಪಗಲವೇಳ್ಯದಿ ಬಾಗಿಲನು ಬಲು । ಬಿಗುಹಿನಿಂದಿಕ್ಕಿರುವ ಸಮಯದಿ । ತೆಗೆಯನುತ್ತ ಪೇಳೆ ಕೇಳ್ದಳು । ಮುಗುಧೆಯಂದೂ ॥ 1 ॥ ತೆಗೆಯೆ ಬಾಗಿಲ ನಾಳ್ದನಳಿದರೆ । ಜಗದಲಿ ಬಾಳುವೆನೆ ಕಾಂತನ । ನಗಲಲಾರೆನು ಗೃಹಕೆ ವಹ್ನಿಯ । ಪೊಗಿದು ಹೋಗೂ ॥ 2 ॥ ಎನಲು ಕೇಳುತ ಮಂತ್ರಿ ನಗುತಾ । ಮುನಿಪ ಪೇಳಿದ ಮಾತುಧಿಟವಾ । ಯ್ತೆನುತ ಮದ್ದಾನೆಗಳಿಂನೂಕಿಸಿ । ಕಿನಿಸಿನಿಂದಾ ॥ 3 ॥

## ॥ ರಾಗ ಶಂಕರಾಭರಣ ಮಟ್ಟಿತಾಳ ॥

ಕರಿಗಳಿಂದ ಬಾಗಿಲಂನೂ । ಮುರಿಸಲನುವ ಗೈಯ್ಯೆಕಂಡು । ಸ್ಮರಜಖತಿಯವೆತ್ತು ಹುಂ । ಕರಿಸುತಾಕ್ಷಣಾ ॥ ಶರಶರಾಸನವನು ಕೊಂಡು । ಭರದಿ ಕದವ ತೆಗೆದುಪೊರಟು । ಸರಳನೊಂದರೊಳ್ಗಜವ । ಧರಣಿಗುರುಳಲೆಚ್ಚನೂ ॥ 1 ॥ ಬಿಡದೆ ರಥಿಕರೊಂದು ಕಡೆಯ । ಘುಡಿಘುಡಿಸುತ ಸರಳಮಳೆಯ । ಕಡುಗಿಸುರಿಯೆ ಕಂಡುತರಳ । ಫಡಫಡೆಂನುತಾ ॥ ವಡನೆ ಸತ್ವದಿಂದಲಾಗ । ದಡಿಗಖಳರ ತೀರ್ಚೆತೇಜಿ । ಗಡಣವ್ಯೆದೆವೆಲ್ಲಕಾಲ । ನೆಡೆಗೆ ಕಳುಹಲೂ ॥ 2 ॥ ಧುರದಿದ್ಯೆತ್ಯರೆಲ್ಲರೆಮನ । ಪುರವನ್ಯೆದೆ ಕಂಡು ಮಂತ್ರಿ । ಬೆರಳ ಮೂಗಿಲಿಟ್ಟುಪಂಚ । ಶರಜಗೆಂದನೂ ॥ ತರಳನೆಂದು ಬಿಟ್ಟೆರೀ । ತೆರದ ಗರ್ವವೇತಕೆಂನ । ಪರಿಯನೋಡೆನುತ್ತ ಕರದ । ಸರಳವೃಷ್ಟಿಯಾ ॥ 3 ॥ ದುರುಳನೆಚ್ಚ ಅಂಬ ತರಿದು । ಸ್ಮರಜಪೇಳ್ದ ನೆಲವೊ ನಾನು । ತರಳನಾದರೇನು ಯಂನ । ಸರಳು ತರುಣವೇ ॥ ಬರಿಯ ಮಾತಿನಿಂದಲೇನು । ಪರಿಕಿಸೆನುತಲಾಗಲ್ಯೆದು । ಶರವನೆಸೆಯೆ ಮಂತ್ರಿಯುಗವು ಬಿರಿದುದಾಕ್ಷಣಾ ॥ 4 ॥ ಎದೆಯು ಮುರಿಯೆ ರೋಷದಿಂದ । ಮದ ಮುಖತ್ವದೊಳಗೆ ಶಚಿವ । ನ್ಯುದ್ಧಕಡೆಗೆ ಬೊಬ್ಬೆಯಿಡುತ । ಲೊದರಿ ಘರ್ಜಿಸೀ ॥ ಮದನಜಾತ ನಿಲ್ಲುನಿಲ್ಲು । ಬೆದರಬೇಡವೆನುತಬಾಣ । ಯೆದೆಯ ಸಮವೆ ಕೀಲಿಸಲ್ಕೆ । ರುಧಿರ ವರತುದೂ ॥ 5 ॥ ಕೋಪದಿಂದ ಲಾಲಿಸಿಕ್ಷು । ಚಾಪನಣುಗನ್ಯೆದೆ ತಂನ । ಚಾಪವಂನು ನೆಗಹಿ ಸುಪ್ರ । ತಾಪದಿಂದಲೀ ॥ ಭಾಪು ಭಳಿರೆ ವೀರನಾನ । ಲಾ ಪರಿದಕೊಯನುತ ಮೆಸೆಯ । ಲಾಪಲಾಶ ಮಂತ್ರಿಬಿದ್ದ । ಭೂಪಲಾಲಿಸೂ ॥ 6 ॥

## ॥ ಕಂದಪದ್ಯ ॥

ದುರುಳಖಳಂ ಮೂರ್ಛೆಯೊಳಂ । ದರೆ ನಿಮುಷಂಬಿದ್ದು ಮೈದೆ ತರಿಹರಿಸುತ್ತಂ । ಭರದಿಂದೆದ್ದುರೆ ಕಿನಿಸಿನಿಂ । ಧರೆಬಿರಿವಂತೆ ಘರ್ಜಿಸುತೆಂದಂ ॥ 1 ॥

## ॥ ರಾಗ ಭೈರಿ– ಪಂಚಾಗತಿ ಮಟ್ಟಿತಾಳ ॥

ಭಳಿರೆಕಾಮ ತನುಜತರಳ । ನೆಂದು ಬಿಟ್ಟರೀಗ ದಯದಲೀ ॥ ಉಳುಹೆ ಶೌರ್ಯವಂತನಾದೆ ನೀನು ಧುರದಲಿ । ಗೆಲುವೆನೆಂದಹಂಕರಿಸದಿ । ರಿಂನುಕೇಳೊ ಬಲಿಯಕೊಡುವೆ ಭೂತಗಳಿಗೆ । ನಿಮುಷ ತಾಳೆಲೋ ॥ 1 ॥ ಯಂದು ಕಿನಿಸಿನಿಂದ ಮಂತ್ರಿ । ಸರಳ ಮಳೆಯನೂ । ನಿಂದುಸುರಿಯೇ ಸ್ಮರಜನಿದಿರು । ನಿಂದು ಕಡಿದನೂ ॥ ಮುಂದುವರಿದು ದೈತ್ಯಗದೆಯ ನಿಡಲುಕಂಡನೂ । ಬಂದುಶರದಿ ಕಡಿದುಬಿಟ್ಟ । ಮದನ

ಜಾತನೂ ॥ 2 ॥ ಪಸುಳೆಗಿಷ್ಟು ಪಂಥವೇತಕೆನುತ ಕೋಪಿಸಿ । ಅಸುರಮಂತ್ರಿ ಕ್ರೂರಶರವ । ನೆಚ್ಚು ಘರ್ಜಿಸೀ ॥ ಕುಸುಮಶರನ ಮಂತ್ರಿಖ । ತಿವೆತ್ತು ಬಾಣವಾ । ನೆಸೆದು ಖಂಡಿಸಿದನು ಶಚಿವ । ಪಿಡಿದ ಚಾಪವಾ ॥ 3 ॥ ಕರದಬಿಲ್ಲ ಮುರಿಯೆದನುಜ । ಘರ್ಜಿಸುತ್ತಲೀ । ಪೊಸದು ಧನುವ ಪಿಡಿದು ಮಂತ್ರಿ । ರೋಷದಿಂದಲೀ ॥ ತರಳನಿಲ್ಲು ಬೆದರಬೇಡ । ವೆನುತ ಬಾಣದಿ । ಫಣೆಯಕೀಲಿಸಲ್ಕೆಬಿಡಲು । ತರಿದ ಕ್ಷಣದಲೀ ॥ 4 ॥ ಶರವ ಮುರಿಯೆ ಸ್ಮರಜಕಂಡು । ಹರುಷದಿಂದಲಿ । ಬರುವನಾ ರಾಚಗಳನು । ಭರದಿ ಕಡಿದನೂ ॥ ಹರಿಯಮೊಂಮನಿರದೆಕ್ರೂರ । ಶರವನೆಚ್ಚನೂ । ಉರಿಯ ನುಗುಳುತ್ತೈದೆ ಖಳನ । ಫಣೆಯನಾಂಟಲು । ಸುರವಿರೋಧಿ ಮೂರ್ಛೆಯಿಂದ । ಬಿದ್ದನಾಗಳೂ ॥ 5 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಧರಣಿಪತಿ ಕೇಳಿಂತು ಸಚಿವನು । ಮರವೆಯಿಂ ಮಲಗಿರಲು ಅಂಗಜ । ಹರುಷದಿಂದೊಳಪೊಕ್ಕು ಸತಿಯೊಡ । ನತಿವಿಲಾಸದಲೀ ॥ 1 ॥ ಧುರದವೃತ್ತಾಂತವನು ಪೇಳ್ತಿರ । ಲಿರದೆ ದಾನವರಿತ್ತಕೇಳ್ತಂ । ದರಿ ಭಯಂಕರಬಾಣಗೆರಗುತ । ವುಸರ್ದರ್ ಭಯದೀ ॥ 2 ॥

## ॥ ರಾಗ ಕಲ್ಯಾಣಿ ಅಷ್ಟತಾಳ ॥

ಕೇಳಯ್ಯಾ ದೈತ್ಯರಾಯಾ । ನಾವೆಲ್ಲವರ್ । ಪೇಳುವ ಮಾತುಜೀಯಾ । ಜಾಲಾಮಾತಲ್ಲಾ ನಾರದರೆಂದ ವಚನವು । ಕಾಲನತೆರದಲಿ ಯಿಹನೊಬ್ಬ ವೀರನೂ ॥ ಕೇಳಯ್ಯಾ ॥ 1 ॥ ತುಂಬಿಮರವ ಮುರಿದಾ ಸರಳಿನಲ್ಲಿ । ದೊಂಬಿಗಾರರ ತರಿದಾ । ಕುಂಭಾಂಡಕೂಪನು । ಎಂಬ ಮಂತ್ರೀಶನ । ಕುಂಭಿನಿಯೊಳಗೆ ಒಂ । ದಂಬಿಲಿ ಕೆಡದಿಹಾ ॥ 2 ॥ ಹೆಣ್ಣಿಗೆ ಬಂದನಲ್ಲಾ । ಕದನವನು । ಹಣ್ಣಲುಂಬುವನು ಚಲ್ವಾ । ಚಿಂಣನಂತಿದ್ದರು । ಉಂನಂತಾ । ಖಳರಂನು । ಮಂಣಕೂಡಿಪನು ಮು । ಕ್ಕಂಣನ ಭಕ್ತನೇ ॥ ಕೇಳಯ್ಯಾ ದೈತ್ಯರಾಯಾ ॥ 3 ॥

## ॥ ರಾಗ ಕಾಂಬೋಧಿ ಝಂಪೆತಾಳ ॥

ದೂತರಂಜುತಲೆಂದ । ಮಾತ ಕೇಳುತಲುಷೆಯ । ತಾತ ಖಳರೊಳು ಪೇಳ್ದ । ಖ್ಯಾತಿಯಂ ತಳೆದೂ ॥ ಕರೆಯಿರೋ ಪಟುಭಟರ । ಕರೆ ರಥಾರೋಹಕರನೂ । ಬರಹೇಳಿರೆಂ । ದೊರೆದ ಸೂಠಿಯಲಿ ॥ 1 ॥ ಆನೆಕುದುರುರೆಯು ಮಂದಿ । ಮಾರ್ಬಲ ಸಹಿತಲಾ ।

ದಾನವನು ಪೊರಟನು । ಶೇಷನಾಗಬೆದರೇ ॥ ನಡೆದ ಭರದಲಿ ಕೂರ್ಮ । ನೊಡಲು ಕಂಪಿಸೆ ಪೊಡವಿ ನಡುಗಿದುದು ಮೇರು ಶಿವ ನೋಡಲೈತಂದಾ ॥ 2 ॥

## ॥ ಕಂದಪದ್ಯ ॥

ಉಗ್ರದೊಳೈತಪ್ಪನಸುರಾಗ್ರಣಿಯಂ । ದರಿತು ಮನ್ಮಥಪುತ್ರಂ ಸತಿಯಂ । ಶೀಘ್ರದೊಳೊಡಂಬಡಿಸಿ ಹ । ಸ್ತಾಗ್ರದೊಳಂ ಚಾಪವಿಡಿದು ಮೈತಂದನಣಂ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ರಣಕೆ ಸಂನಹನಾಗಿ ಮನ್ಮಥ । ನಣುಗ ನಿಂದಿರೆ ದನುಜರು । ಕಣನ ಮುತ್ತಿದರಾಗ ಕರವುತ । ಕಣೆಯ ಮಳೆಯಾ ॥ 1 ॥ ದಾನವರು ಸುರಿದಂಬನೆಲ್ಲವ । ಮೀನಕೇತನ ಭವತರಿಯೆ ಬಲಿ । ಸೂನು ಕೋಪವ ತಾಳ್ದು ಖಳರೊಳು । ತಾನು ಸೂದಾ ॥ ಕೊಲ್ಲಿರೀತನ ಕಡಿಯಿರೀತನ । ಬಿಲ್ಲಬೊಬ್ಬೆಗೆ ಬೆದರದಿರಿನಿಂ । ದಲ್ಲಿ ನಿಲಗೊಡದಿರೆಂದು ರಣ । ಮಲ್ಲನೆಂದಾ ॥ 3 ॥ ಮತ್ತಗಜಹಯರಥ ಪದಾತಿಯ । ಮೊತ್ತವನು ನೂಕಿದನು ತರಣಿಗೆ । ಕತ್ತಲೆಯ ನೆರೆಮುತ್ತುವಂದದಿ । ದೈತ್ಯರಂದೂ ॥ 4 ॥

## ॥ ರಾಗ ಮಾರವಿ ಏಕತಾಳ ॥

ಅಸಮ ಸಾಹಸರಾ । ದ ಸುರರು ಹಯಗಜ । ವಿಸರದೊಳೈತಂದೂ ॥ ಮುಸಕಲು ಶರದಿಂ । ಕುಸುಮಶರನ ಸುತ । ಪೊಸಮಸೆ ವಿಶಿಖದಿ । ಕುಸುರಿದರಿದು । ಪಸರಿಸಿದ ಭೂಮಿಯೊಳು । ಏನನೆಂಬೇ ॥ 1 ॥ ಸಾಲ್ಲಯ್ಯನ ಕಟ್ಟಾಳ್ಗಳನೆ ಮನ । ಪೊಳ್ಗಳಪೋಗಿಸಿ ಭಟರ್ಗಳಮಾ ಹಯ । ಕಾಲ್ಗಳ ಜಗದ ಸುಂಡಿಲ್ಗಳ । ಕಡಿಯೆ ಕರುಳ್ಗಳ । ಸವಿದು ಮರುಳ್ಗಳು । ಕುಣಿದುದಿಂನೇನೆಂಬೇ ॥ 2 ॥

## ॥ ಕಂದಪದ್ಯ ॥

ಯೀ ಪರಿಯಿಂ ಸ್ಮರ । ಸಂಭವನಾ ಪಟುಭಟರಂ । ವಿಘಾತಿಸುತ್ತಿರೆಬಾಣಂ । ಕೋಪದೊಳೆಂದಂ । ಪ್ರಳಯದುಮಾಪತಿಯಂತೆ । ಘರ್ಜಿಸುತಿಂತೆಂದಂ ॥ 1 ॥

॥ ರಾಗ ಶಂಕರಾಭರಣ – ಪಂಚಗಾತಿ ಮಟ್ಟತಾಳ ॥

ಎಲವೊ ಮನ್ಮಥಾತ್ಮಭವನೆ । ಖಳಸಮೂಹವಾ । ಗೆಲಿದೆನೆಂದು ಹಿಗ್ಗಬೇಡಾ । ನಿಂನ ದೇಹವಾ ॥ ತಳುವದೀಗಾ ಶೀಳ್ದು ಕರುಳು । ಮರಳುಬಳಗಕೇ । ಬಲಿಯ

ಕೊಡುವೆ ಭೂತಗಳಿಗೆ ನಿಮುಷ ಮಾತ್ರಕೇ ॥ 1 ॥ ಯನಲು ಸ್ಮರಜ ಪೇಳ್ದಾ ಮಾವ । ಕೇಳು ನಿಂನಯಾ । ತನುಜೆಯಾಳ್ದನಾದೆಂನೊಡನೆ । ಖತಿಯ ತಳದೆಯಾ ॥ ಮನದಲಿಟ್ಟು ಕ್ರೋಧ ಮಾತನಾಡ । ಲೇಕೆ ಸುಂಮನೆ । ಮನೆಗೆ ದಂಪತಿಗಳ ಕರ । ದೊಯ್ಯೊ ಘಂಮನೇ ॥ 2 ॥ ಮಾರನಣುಗ ಕೇಳು ಯಂನಾ । ತ್ಮಭವೆಯನೂ । ಯಾರು ಕೊಟ್ಟರೆಲವೊ ನಿನಗೆ । ಮಾವನಾವನೋ ॥ ಧೀರಜಾರ ಮಾತನೆಂನ । ಕೂಡೆ ನಡಿಸದೇ । ಧೀರತನವರುಳ್ಳರೀಗ । ತೋರು ಬೆದರದೇ ॥ 3 ॥ ಯಾರು ಸುತೆಯನಿತ್ತರೆಂಬ । ಮಾತದ್ಯಾತಕೇ । ಶಾರದಾಂಬೆ ವರನ ತಂತ್ರ । ವದುವೆ ಲೋಕಕೇ ॥ ಧೀರತನವ ತೋರ್ಪುದಕ್ಕೆ । ನೀವು ಹಿರಿಯರೂ । ಮೀರಿ ನಿಂಮೊಳಾನು ಸೆಣಸೆ । ಮೆಚ್ಚ ರಮರರೂ ॥ 4 ॥

## ॥ ರಾಗ ಭೈರವಿ ಏಕತಾಳ ॥

ಎನೆಕೇಳ್ದಾ ಸುರನಾಗಾ । ಶರ । ವನು ಬಿಟ್ಟನು ಬಲುಬೇಗಾ ॥ ಅನಿರುದ್ಧನದ ಛೇದಿಸುತಾ । ಬಾ । ಣನಿಗೆಚ್ಚನು ನಸುನಗುತಾ ॥ 1 ॥ ತರಳನೆಸೆದ ಸರಳ್ಗಳನೂ । ಕಡಿ । ದರೆ ನಿಮುಷದಿ ದಾನವನೂ ॥ ಉರುಮಂತ್ರಾಸ್ತ್ರವ ನೆಸೆಯಲೂ । ಸ್ಮರ । ತರುಣನದನು ಖಂಡಿಸಿದನೂ ॥ 2 ॥ ಭಳಿರೇ ಕುವರನೆಂದೆನುತಾ । ಭೂ । ತಳಬೆಚ್ಚಲು ಬೊಬ್ಬಿಡುತಾ ॥ ಮುಳಿದು ಸಹಸ್ರತೋಳ್ಗಳಲೀ । ಖಳ । ತಳುವದೆಚ್ಚನು ಕೋಪದಲೀ ॥ 3 ॥ ಇನಿತು ಶರವಕತ್ತರಿಸೀ । ಕಾ । ಮನಸುತ ರೋಷವ ಧರಿಸೀ ॥ ದನುಜಾಧಿಪ ತಡಿಯಂದೂ । ಅಂ । ಬಿನ ಮಳೆಗರೆಯಲ್ಕಂದೂ ॥ 4 ॥ ಬರುವಂಬುಗಳನುವತರಿದೂ । ಪುರ । ಹರನಿತ್ತಸ್ತ್ರವ ತೆಗೆದೂ ॥ ಸ್ಮರಜನ ಕೊಲಬೇಡೆನುತಾ । ಬಲು । ಭರದೊಳೆಚ್ಚನು ಕೋಪಿಸುತಾ ॥ 5 ॥ ಉರಿಯಸೂಸುತ ಬಂದಾಗ । ಶರ । ಉರಕೆರಗಲುಬೇಗಾ ॥ ಹರಿಯ ಜಪಿಸುತನಿರುದ್ಧಾ । ಮೈ । ಮರೆದು ವಸುಧೆಯೊಳು ಬಿದ್ದಾ ॥ 6 ॥

## ॥ ವಾರ್ಧಿಕ್ಯ ॥

ಸ್ಮರಸುತಂ ಧರೆಗೊರಗೆ । ಹರುಷದಿಂ ಖಳನವನ । ಪೊರೆಗೈದಿಯಾಲೋಚಿಸಿದನೀತನಂ । ಮಡುಹಿದರೆ ತಂನಯ ಸುತೆಗೆ । ವೈಧವ್ಯ ಬಹುದೆಂದು । ಕಾಮಜನ ಕಾಯವಂನೂ ॥ ಕರದಿಂದ ತಡವರಿಸು । ತ್ತಿರಲಿತ್ತಲುಷೆ ತಂನ । ವರನೈದಿ ತಾತನೊಳಿ । ಕ್ಕಿದಳು ಹಾಯಂದಳುತ್ತಿರೆ । ಕಾಣುತ್ತಣುಗೆ ಕೇಳ್ । ನಾ

ಕೊಲ್ಲೆನೆಂದೊಡಂಬಡಿಸಿದಂ । ಮಗಳನೂ ॥ 1 ॥

## ॥ ರಾಗ ಮಾರವಿ ಆದಿತಾಳ ॥

ಮುನಿವರ ಲಾಲಿಸೈಯ್ಯಾ । ನೀಪೇಳ್ದ ವ । ಚನವು ತಪ್ಪಲಿಲ್ಲಾ ಜೀಯಾ ॥ ತನುಜೆಯಾಲಯದಲ್ಲಿ । ದ್ದನಾ ಪಿಡಿತಂದೆ ಯೀ । ತನಿಗೇನಾಜ್ಞೆಯ ಮಾಳ್ಪೆ । ಘನಮಹಿಮನೇ ॥ 1 ॥ ಯಂನ ಕೇಳುವದೇನಯ್ಯಾ । ದಾನವರಾಯಾ । ನಿಂನಾ ಬಾಗಿಲ ಬಳಿಯಾ ॥ ಪಂನಗಾ ಭರಣಕಾ । ಯ್ದಿರ್ಪಾತನಂನೂ । ಕೇಳಿದರೆಲ್ಲ । ನಿನ । ಗರುಹುವನೂ ॥ 2 ॥ ಎನಲೀಶನಲ್ಲಿಗೈದಿ । ಉಭಯಪಾದ । ವನಜಕೆರಗಿ ಮುದದೀ ॥ ದನುಜೇಶಾ ಕಾ । ಮನ । ತನುಜನ ತೋರಿಮ । ತ್ತನುವಿನಿಂ ಭವನಿಗೆ । ವಿನಯದಿಪೇಳ್ದಾ ॥ 3 ॥

## ॥ ರಾಗ ಶಂಕರಾಭರಣ ಆದಿತಾಳ ॥

ಬಾಳಾಕ್ಷಾ ಕೇಳೆನ್ನಾತ್ಮಜೆ । ಯಾಲಯದಲಿದ್ದಾ । ಖೂಳನಿವನ ಪಿಡಿತಂದೇ ॥ ಮುಂದೇನಾಜ್ಞೆಯು॰ ಜೀಯಾ ॥ 1 ॥ ಲಾಲಿಸೈಯ್ಯಾ ಬಾಣಾಖ್ಯಾ । ಬಾಲಗಾಜ್ಞೆಯಾದರೆ ಶ್ರೀ । ಲೋಲ ಕಿನಿಸಿನಿಂ ಬಪ್ಪ । ಧುರಕೆ ತಾನೇ ಧಿಟವಯ್ಯಾ ॥ 2 ॥ ಬಂದರತಿ ಲೇಸಾಯಿತವನ । ಒಂದು ನಿಮುಷಮಾತ್ರದಿ ನಾ । ಕೊಂದು ಬಲಿಯಕೊಡುವೆ ಭೂತ ವೃಂದಕ್ಕೆ ಜೀಯಾ ॥ 3 ॥ ಕೊಂದೆನೆಂಬಾ ಮಾತಂತಿರಲಿ । ಯಿಂದಿರೆಯರಸನೊಳು ಕಲಹ । ದಂದವಲ್ಲಾ ನಿನಗೆ ಕಂಡು । ದೆಂದೆ ಖಳರಾಯಾ ॥ 4 ॥ ಹರನೆ ಬಿಡುಬಿಡಿಂಥಾ ಮಾತಾ । ಅರರೆ ಗೋವಳನ ಗರ್ವವ । ಮುರಿಯಲಾರದಿದ್ದ ಬಳಿಕ । ನಿಂನ ಶರಣೇ ಜೀಯಾ ॥ 5 ॥ ಸುರವೈರಿ ಕೇಳಿಷ್ಟು ಸತ್ವ । ವಿರಲು ನಿಂನ ಮನಕೆ ಬಂದ । ಪರಿಯ ಮಾಡದಕೆ ನಾನು । ಹೊರತೆ ಖಳರಾಯಾ ॥ 6 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಯಿಂತು ಪೇಳಲು ಖಳಪತಿಯು ತಾ । ಸಂತಸದೊಳೋಲಗಕೆ ಬಂದನು । ಕಂತು ತನಯಗೆ ವಜ್ರಸಂಕಲೆ । ಗಳನು ತೊಡಿಸೇ ॥ 1 ॥ ಮಾರಸುತಗಾದು ದನು ಕಾಣುತ । ನಾರದಾಂಕನು ನಗುತ ಪೇಳಿದ । ಜಾರತನದಿಂದಾದುದೀ ವ್ಯಥೆ । ವೀರಕೇಳೂ ॥ 2 ॥ ಯನುತಲತಿ ಹರುಷದೊಳು ಬಾಣನೊಳ್ । ಅನುವಿನಿಂ ಬೀಳ್ಕೊಂಡು ಪೊರಟನು । ಮನಹರುಷದಲಿ ದ್ವಾರಕಾಪುರ । ಕನುವಿನಿಂದಾ ॥ 3 ॥

## ॥ ವಾರ್ಧಿಕ್ಯ ॥

ನರನಾಥ ಲಾಲಿಸ್ಯೆ । ಸುರಮುನೀಶ್ವರ ನತಿ । ಹರುಷದೊಳು ವೀಣೆಯು ಕರದಿಂದ ಬಾರಿಸುತ । ಅರವಿಂದನಾಭನಿಹ । ಪುರಕೆ ಬರುತಿರಲಿತ್ತ । ಉರುತರಾನಂದದಿಂದಾ ॥ ಮುರಹರಂ ಶಿಂಹವಿ । ಷ್ಟರದೊಳಂ ಕುಳಿತಿರಲು । ಸುರನರೋರಗರು ಬಂ । ದೋಲಗಿಸಲಾಯತೀಶ್ವರನು । ಐತಂದಚ್ಚುತನ । ಪದಕೆ ಸಾಷ್ಟಾಂಗದಿಂ । ದೆರಗಿದಂ ಮುದದೊಳೂ ॥ 1 ॥

## ॥ ರಾಗ ಕೇತಾರಗೌಳ ಅಷ್ಟತಾಳ ॥

ಎರಗಿದಾ ಮುನಿಪನ । ಶಿರವನ್ನು ಪಿಡಿದೆತ್ತಿ । ಕರುಣದಿಂದಲಿ ಕೃಷ್ಣನೂ ವರಸಿಂಹಾಸನದೊಳಾ । ತನನು ಕೈಗೊಟ್ಟು ಕು । ಳ್ಳಿರಿಸುತ್ತಿತೆಂದನಾಗಾ ॥ 1 ॥ ಪರಮರುಷಿಯೇ ಲಾಲಿ । ಸೀರೇಳು ಜಗವ ಸಂ । ಚರಿಸುವೆ ನೀನು ಕೇಳೂ ॥ ಸ್ಮರಜಾತನೆಲ್ಲಿರ್ಪ । ನೆಂಬೂದಾ ತಿಳಿದಿರ್ದ । ಡೊರೆಯಂದಡೆಂದನಾಗಾ ॥ 2 ॥ ಹರನನುನೋಳ್ಪ । ತಾತ್ಪರ್ಯದಿ ಶ್ರೋಣಿತ । ಪುರಕೆ ನಾನ್ಯೆದಿದೆನೂ ॥ ಮುರಮರ್ಧನ ನಿಂನಾ । ಮೊಂಮನ ವಾರ್ತೆವಿ ಸ್ತರಮಾಳ್ಪದೇನೆ ಪೇಳ್ವೆ ॥ 3 ॥ ದುರುಳ ಬಾಣನ ಸಂ । ಭವೆಯೋರ್ವಳುಷೆಯಂಬ । ಳಿರುವಳಾ ಕಾಮಿನಿಯಾ ॥ ಸುರಕಲಾಪದಿ ನಿರುತ ಸಂತೋಷದೊಳ್ । ಯಿರ್ದನವಳ ಗೃಹದೀ ॥ 4 ॥ ಈ ಪರಿಯೊಳಗೆ ತಾ । ನಿಹನೆಂಬವಾರ್ತೆಯ । ನಾಪೇಳ್ದೆ ಬಾಣನಿಗೇ ॥ ಕೋಪದಿ ದೈತ್ಯನೀ । ತರಳನಪಿಡಿ ಮ । ಹಾಪರಾಕ್ರಮದಿಂದಲೀ ॥ 5 ॥ ಯರಡುಕಾಲ್ಗಳಿಗೆ । ಸಂಕೋಲೆಯ ಝಾಡಿಸಿ । ಸೆರೆಯೋಳಗಿಟ್ಟಿರ್ಪನೂ ॥ ಹರಿಯೇನಾ ಕಂಡೂದ । ಪೇಳ್ದೆನೆನಲುಬಲು । ಮರುಗಿ ರುಕ್ಮಿಣಿ ಪೇಳ್ದಳೂ ॥ 6 ॥

## ॥ ರಾಗ ನೀಲಾಂಬರಿ ಆದಿತಾಳ ॥

ನಾರದಾಂಕಾ ಮುನಿರಾಯಾ ಲಾಲಿಸೆಂನಾ । ಮಾರನಾ ಕು । ಮಾರನಂನೂ ಕೊಂದೆಯಾ ನೀನೂ ॥ 1 ॥ ಈತನಲ್ಲಿರ್ಪನೆಂದೂ । ಯಾತಕೆ ನೀಪೇಳ್ದೆ । ಯಾತರಾಜ್ಞೆ ಮಾಡುವನೋ । ದೈತ್ಯೇಶಾ ತಾನಿಂದೂ ॥ 2 ॥ ಅಣುಗ ಪೋದಾ ಮರುದಿವಸ । ಯಿನಯಾನೊಳಾನುಪೇಳ್ದಾ । ವನಜಾಕ್ಷಾತಾ ನೋಡಲಿಲ್ಲಾ । ಯಿನಿತಾಯಿತಲ್ಲಾ ॥ 3 ॥

## ॥ ಕಂದಪದ್ಯ ॥

ಯಿಂತು ರುಕ್ಮಿಣಿಯಂ ಬಲು । ಸಂತಾಪಂವೆತ್ತು ಮರುಗಲು ಸ್ಮರ । ಕಾಂತೆಯತಿ

ದುಃಖಿಸಲು । ತಾಂತವಕದೊಳೊಡಂಬಡಿಸಿ । ಹರಿಯಿಂತೆಂದಂ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಮರುಳು ಸತಿಯರಿರ್ಥ್ಯಾತಕಳುವಿರಿ । ತರಳ ಸಿಕ್ಕಿದರೇನು ಫಣೆಯಲಿ । ಬರೆದ ಬರಹವ ಮೀರಿನಡೆವರೆ । ಹರನಿಗರಿದೂ ॥ 1 ॥ ರಕ್ಕಸನ ತೋಳ್ಗಳನು ಖಂಡಿಸಿ । ಸಿಕ್ಕಿದನಿರುದ್ಧನನು ತರುವೇ । ಯಿದಕೆ ತಪ್ಪಿದರಯ್ಯನಾಣೆಯು । ದುಃಖಬೇಡಾ ॥ 2 ॥ ಯಂದವರನೊಲಿದಾಗ ಸೈಪಿ । ಟ್ಟಿಂದಿರಾಧವ ನೋಲಗಕ್ಕೈ । ತಂದು ಕರಿಸಿದನಾಗ ಯಾದವ । ವೃಂದವಂನೂ ॥ 3 ॥ ಶಿರಿಯರಸ ಯಾದವರನೆಲ್ಲರ । ಕರಿಸಿ ಭೇರಿಯ ಹೊಡೆದನಾದಕೆ । ಸರಸಿರುಹಭವಜಾಂಡವಡೆಯಿ । ತ್ತೆಂಬ ತೆರನಾಗೇ ॥ 4 ॥ ಕರುಣದಿಂ ಮಾಧವನು ಗರುಡನ । ಸ್ಮರಿಸೇತಕ್ಷಣದಲ್ಲಿ ಬಂದನು । ಸರಸಿಜಾಕ್ಷಂಗೆರಗಿ ಕೇಳಿದ ಗರುಡನಂದೂ ॥ 5 ॥

## ॥ ರಾಗ ಮಾರವಿ ಏಕತಾಳ ॥

ಕರುಣಾಕರನೇನ್ । ಕಾರಣ ಬರಿಸಿದೇ । ಕರುಣದಿ । ಬೆಸಗೆಯನೂ ॥ ವರೆಯಂದೆನುತಹಿ । ವೈರಿಯು ಪುನರಪಿ । ಯರಗಿದಾ ಭಕ್ತಿಯೊಳೂ ॥ 1 ॥ ಗರುಡನೆ ಲಾಲಿಸು । ಕಂದರ್ಪಾತ್ಮಜ । ದುರುಳ ಬಾಣನ ಸುತೆಯಾ ॥ ಸುರತಕಲಾಪದೊ । ಳಿರೆ ಖಳಕೇಳಿಯೇ । ಸೆರೆಯೊಳಗಿಟ್ಟನಂತೇ ॥ 2 ॥ ಮದನಜನಿರ್ಪಲ್ಲಿಗೆ । ಪೋಪೆವೆಂದೆನು । ತೈದುಬಲ ಸಹಿತೀಗಾ ॥ ಆದರಿಂದ ನಿಂನನೂ ಸ್ಮರಿಸಿದೆಯಂದೆನೆ । ಕೇಳಿಗರುಡಪೇಳ್ದಾ ॥ 3 ॥ ಕಿರುಖೂಳಾ ದೈತ್ಯಾನ । ಸಮರದೇನಿ. । ಸಡಗರವೇಕಿದಕೇ ॥ ಭರದಿಂದ ಪಾರಿಯೇ । ಯಸುರನ ದುರ್ಗವಕಿತ್ತು । ತರದಿರೆ ಸೇವಕನೇ ॥ 4 ॥ ಉರಗವೈರಿಯೇಕೇಳೂ । ದಾನವಗಿಹಪುರ । ವಿದನೀತಹೆನೆಂಬುದಕೇ ॥ ಹರ ತಂನ ಗಣಸಹಿ । ತಾತನ । ಬಾಗಿಲ । ನಿರುತದಿ ಕಾಯ್ದಿಹನೂ ॥ 5 ॥ ಮೃಡನೊಳಗಿಂನಾ ಪ । ರಾಕ್ರಮಕೊಳ್ಳದು । ಬಿಡುಬಿಡು ಪಂಥವನೂ ॥ ಪಡೆಸಹ ನಂಮನು । ಪೊತ್ತುನೀ ನೀಕ್ಷಣ । ನಡೆಯನೆ ನಮಿಸಿದನೂ ॥ 6 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಯಂದು ಪೇಳ್ದತಿ ಬೇಗದಿಂದರ । ವಿಂದನಾಭನುರಾಮ ಮುಖ್ಯರ । ವೃಂದವಡಗಿರ್ದಾ ಖಗೇಂದ್ರನ । ನಡರಿಬೇಗಾ ॥ 1 ॥ ಇಂದಿರಾಧವನೊಡನೆ ನಾರದ ।

ನಂದು ಹಂಸೆಯನಡರಿ ಬರೆಸಾ । ನಂದದಿಂದಂಬರಕೆ ನೆಗೆದಗ । ರುತ್ಮ ನೊಲವಿನಲೀ ॥ 2 ॥

## ॥ ರಾಗ ಭೈರವಿ ತ್ರಿವಿಡೆತಾಳ ॥

ಗರುಡನೀಪರಿಯಿಂದ ಸತ್ವದಿ । ಹರಿಯು ಯದುಬಲಹಿತ ಪೊತ್ತಂ । ಬರಕೆ ಚಿಗಿದತಿ ಬೇಗದಿಂದಲೇ । ಬರುತಿರಲು ಪವಮಾನನಂದದಿ । ಗರಿಯಗಾಳಿಗಜಾಂಢ ಕಂಪಿಸೆ । ಶರಧಿಗಳು ತುಳುಕಿದವು ಕುಲಭೂ । ಧರೆಗಳಲ್ಲಾಡಿದವು ನೃಪಕೇ । ಟೊರೆಯಲಳವಲ್ಲೀವನ ಸಾಹಸ । ವೇನನೆಂಬೇ ॥ 1 ॥ ಛಲದೊಳೀಪರಿಯಿಂದ ಗರುಡನು । ನಿಲದೆಬಂದಾ ಬಾಣದೈತ್ಯನ । ಪೊಳಲಕಾಣುತ ಗಗನಡಂತಿರೆ । ಇಳಿದು ಬರುತಿಹ ರಭಸದೊಳಗಾ । ಖಳನ ರಥದಮಯೂರಕೇತುನು । ಯಿಳೆಗೆ ಮುರಿದೊರಗಿದುದು ದಾನವ । ಕುಲವು ಭಯಪಡುತಲಿತ್ತಲು । ಗೆಲಿವಿನಿಂದಲಿ ಇಳಿದ ಗರುಡನು ಏನನೆಂಬೇ ॥ 2 ॥

## ॥ ವಾರ್ಧಿಕ್ಯ ॥

ವಿನುತೆಯಾತ್ಮಜ ನವನಿಗಿಳಿದು ಸಂತೋಷದಿಂ । ವನರುಹಾಕ್ಷಂ ಧರಣಿಗಿಳಿದು ಮಾನದಿಂ । ಮುನಿಪ ಬಲಭದ್ರನೊಳ್ಮಾತಾಡುತ್ತೈದೆ । ಗೋಮತಿಯೆಂಬ । ವರನದಿಯೊಳೂ ॥ ವಿನಯದಿಂ ಕಾಲ್ಮೊಗಂ ತೊಳೆದು ತೀರದೊಳು । ಘನವೃಕ್ಷ ಮೂಲದೊಳ್ ಕುಳಿತಿರಲ್ಕೆಲ್ಲರಂ । ಮನದಣಿಯಲಾಹಿ ಮೋದಕವನೀಂಟಿ । ತರುವ ನೆರಳೊಳು ಮಂಡಿಸಿದರೂ ॥ 1 ॥ ಹರಿಪದೋದ್ಭವೆಯಾದುದದರಿಂದ ಜಾಂಂಹ್ನವಿಯ । ನುರುಗಭೂಷಂಶಿರದಿ ಧರಿಸಿದಂ ಸಜ್ಜನರ್ । ಪರಮ ಭಕ್ತಿಯೋಳ್ ಸ್ನಾನಂಗಳಂ ಮಾಡಿ । ತಂಮ್ ತಂಮ ಘವನಂಕಳೆವರೂ ॥ ಮುರಹರನ ಮೃದುಪದ ಸ್ಪರ್ಶವಾಯ್ತೆನಗಿಂನೂ । ಸರಿಯಂದೇ ಗಂಗೆಗಾನೆಂದು ಗೋಮತೀ । ವರನದಿಯು ತಾನು ತಾನೆಂಬಂತೆ ಮೆರೆದುಕ್ಕಿ । ಪರಿವುತಿರ್ದೂದೂ ॥ 2 ॥ ಹರನಂತೆ ಶಿವೆಯುಕ್ತೆಯಾಗಿ ಕಾಂತಾರದಿಂ । ದುರೆ ಪುಂಡರೀಕ ರಂಜಿತೆಯಾಗಿ ಭೂದಿವಿಜ । ವರನಂತೆ ಘೋಷಶೋಭಿತೆಯಾಗಿ । ಶಿರಿಯಂತೆ ಹರಿತಾಂ ಪ್ರೀತಿಯಾಗೀ । ಅರಳಿಪ್ಪ ಸುಮದಂತೆ ಸುರಚಿತಮಾಗಿ ಅಂ । ಬರದಂತೆ ಹಂಸರಾಜಿತೆಯಾಗಿ ಜನಕಜಾ । ವರನಮನೆಯಂತೆ ಕುಶಸಂಯುಕ್ತಮಾಗಿತಾ । ನಿರುತಿರ್ದಳಾ ಗೋಮದೀ ॥ 3 ॥

## ॥ ಕಂದಪದ್ಯ ॥

ಆನದೀಯಂದವನೀಕ್ಷಿಸು । ತಾನಂದವ ಪಡೆದೆಲ್ಲರು ಕುಳಿತಿರಲಾಗ ।
ಮೀನಾಂಕಾದ್ಯದುವೀರರ । ರ್ಗಾನತಜನ ಸಂರಕ್ಷನೆಂದನತಿಮುದದೊಳೂ ॥ 1 ॥

## ॥ ರಾಗ ಸಾರಂಗ ಅಷ್ಟತಾಳ ॥

ಕೇಳಿಯಾದವರೆಲ್ಲ । ನಿಂಮೊಡನೆನಾ । ಪೇಳೂವದೊಂದು ಸೊಲ್ಲಾ ॥

॥ ಪಲ್ಲ ॥ ಯಿಂದೆಲ್ಲ ನಂಮಯ ಪಾಳ್ಯವು ಸಹಿತೆಲ್ಲ । ರೈತಂದೆವಲ್ಲಾ ॥ ಖೂಳ ಬಾಣಗತೋಳ ನವನಿಗೆ । ಪೊಳುಗಳೆವೆನೆನುತ್ತಾ ಮಾನುನೀ । ಮೌಳಿಯಲಿ ನುಡಿದನುಡಿಗನುಕೂಲವ್ಯಾವುದು । ಪೇಳಿರೆಂನೊಳೂ ॥ 1 ॥ ಖಳನತಿ ಗರ್ವದೊಳೂ । ಇರುತಿರ್ಪುದ ನೋಡಿ । ಕುಳಿತಿರಿ ಕ್ಷಿತಿಯೊಳೂ । ಯೀ ವೇಳೆಯೊಳೂ ॥ ನಂಮಾಳು ಕಲಹಕೆ ಶಿವಧೈರ್ಯದಿ ಬಂದರೆ । ಅಳುಕದಾಶರ । ಕುಲವನಿನಜನ ಬಳಿಗೆ ಶೇರಿಸಿ । ಘಳಿಗೆಗಾತನ ತೋಳೆನೆಲ್ಲವ । ತಳಪಟವ ಗೈದೆಳೆದು ತರುವೆವೆಂಬ । ಬಲಮುಖ್ಯರ ಧುರ । ಕಳೆಯಲವದಿರ । ನಿಲಿಸಿ ಮುನಿಕುಲ । ತಿಲಕಗೆಂದನೂ ॥ 2 ॥ ಕೇಳು ಸಂಯಮಿ ಮುನಿವರ್ಯ । ಪೇಳೂವೆ ನಿನ । ಗೊಂದು ಕಾರ್ಯಾ ॥ ಪಲ್ಲ ॥ ಅತಿಬೇಗ ಪೋಗಿ ಋಷಿರನುಸುರು । ಪಾರ್ವತಿಯ ಪ್ರಾಣೇಶನೋಳಿಂದೂ । ಸೋತಂಗಜಸುತನ । ಮದದಿಂದ ಬಲಿ । ಸುತನೂ ಶೆರೆಯೊಳಿಟ್ಟಹನೂ ॥ ನಿಂನ ಸಹಾಯದೊಳ ಸುರಾಧೀಶ್ವರ । ನೆಂನ ಮಾಂಮನ ಬಂಧಿಸಿಹನೂ ॥ 3 ॥ ಮುಂನಹಿರಣ್ಯಕ ಮುಂತಾದ ದನಜರೂ । ಬಂನಬಟ್ಟರು ಬಲಿತಾನೂ ॥ ಶರಣನ ಕೊಂದೆನೆಂಬಪಕೀರ್ತಿಯು ಯಂನಾ । ಶಿರದಲಿಡುವನು ಗೌರೀಶಾ । ದುರುಳನೊಳುಷೆಯಂನು ಸ್ಮರಜಾತಗೀಯೆಂ । ದೊರೆಯೈ ಬಲುಬಗೆಯಲೀ ॥ 4 ॥

## ॥ ಕಂದಪದ್ಯ ॥

ಯಿಂತೆನೆ ಕೇಳ್ದಾ ಮುನಿಪಂ । ಕಂತುಪಿತಗೆ ವಂದಿಸುತತಿ ವೇಗದೊಳಂ ।
ಅಂತಕ ವೈರಿಯ ಬಳಿಗಂ । ತಾಂ ತ್ವರಿತದಿಂ ಬಂದೆರಗಿದ ಪದಪದ್ಮಕಂ ॥ 1 ॥

## ॥ ರಾಗ ಸಾಂಗತ್ಯ ರೂಪಕತಾಳ ॥

ಘನಹರುಷದಲೀ । ನಾರದನಂನೂ ಪಿಡಿದೆತ್ತಿ । ಮನದೊಳೂ ಭವ ನ । ಸುನಗುತಾ ॥ ಮುನಿಪ ನಿಂನನ್ಯಾರು ಕೊಂ । ಡಾಡಿಸಲು ಬಂದೆ । ಎನುತ ಕೇಳಲು ಪೇಳ್ದನಾಗಾ ॥ 1 ॥ ಹರನೇ ಲಾಲಿಸು ತಂನ । ಮೊಂಮಗೋಸ್ಕರ ಮುರ । ಹರನು

ದಂಡೆತ್ತಿ ಬಂದಿಹನೂ ॥ ದುರುಳನೊಳುಷೆಯಂನು । ಸ್ಮರಜಾತಗೀಯೆಂ । ದೊರೆದೆಂನಾನಿಂನಲ್ಲಿ ಗಟ್ಟಿದನೂ ॥ 2 ॥ ಅದರಿಂದ ನಾನಿಂನ । ಬಳಿಗೆ ಬಂದೆನು ದೇವಾ । ಮದನ ಸಂಭವಗೆ ಬಾಣ ಜೀಯಾ ॥ ಮುದದಿಂದ ಕೊಟ್ಟು ಮಂನಿಸದೆ । ಮಾಧವನೊಳೂ । ಕದನಲೇಸಾಗದಾ ಶರಗೇ ॥ 3 ॥

## ॥ ಕಂದಪದ್ಯ ॥

ಸುರಮುನಿಯಂದುದನಂ । ಪುರಹರನಾಲಿಸುತ್ತೈದೆ ಸಂತಸವೆತ್ತಾಗಳು । ಚರರೊಳು ಬಲ್ಲಿದನೋರ್ವನ । ಕರದತಿ ಮೃದುವಾಕ್ಯದಿಂದ । ಪೇಳ್ವನವನೊಡನಂ ॥ 1 ॥

## ॥ ರಾಗ ಪಂಚಾಗತಿ ಮಟ್ಟೆತಾಳ ॥

ಚರನೆ ಕೇಳು ಬಾಣಖಳನ । ಬಳಿಗೆ ಕ್ಷಣದಲೀ । ಭರದಿಪೋಗಿ ಆತನೊಡನೆ । ಪೇಳು ಮುದದಲೀ ॥ ಸ್ಮರನ ತನುಜಗಾಗಿ ಸೇನೆ । ಸಹಿತ ಕೃಷ್ಣನೂ । ಧುರಕೆ ಬಂದನಂತೆ ಕಲಹ । ಬೇಡ ಸುತೆಯನೂ ॥ 1 ॥ ಹರಿಯ ಮೊಂಮಗಿತ್ತು ಪ್ರೇಮ । ದಿಂದಲವರನೂ । ಪುರಕೆ ಕಳುಹೆ ದಂದವಹುದು । ಎಂಬಮಾತನೂ ॥ ಹರನು ಪೇಳ್ದನೆಂದು ದೈತ್ಯ । ಗರುಹು ಬೆದರದೇ । ಮರಳಿಬಹುದು ಕೋಪಿಸಿದರೆ । ಮಾರ್ಗತಪ್ಪದೇ ॥ 2 ॥

## ॥ ಷಟ್ಪದಿ ॥

ಯಿಂದುಧರ ಪೇಳ್ದಂದವಂ ಕೇಳ್ದದಂ । ಚರನತಿ ಬೇಗದೊಳಂ । ಬಂದನು ಬಾಣನ ಬಳಿಗಂ । ಮುಂದೆ ತಾನಿಂದಿಂತೆಂದಂ । ಧೈರ್ಯದೊಳಂ ॥ 1 ॥

## ॥ ರಾಗ ಕಾಪಿ ಅಷ್ಟತಾಳ ॥

ಲಾಲಿಸೀ ಕೇಳೆಂನಮಾತಾ । ಕಾಲ । ಕಾಲಭಕ್ತ ಮೂರ್ಲೋಕ ಪ್ರಖ್ಯಾತಾ ॥ ಪಲ್ಲ ॥ ಗಿರಿಜಾಧವ ನಿಂನಬಳಿಗೆ । ಬಲು । ಭರದಿಂದ ನಡಿಯಿಂದ ನಿಂಮೊಡನೇ । ವರೆಯಂದೀಗೆಂನಾ ನಟ್ಟಿದನೂ । ದೈತ್ಯ । ವರನೀ ಕೋಪಿಸದಿರು ಉಸುರುವೆ ನಾನೂ ॥ 1 ॥ ಕಾಮಾತ್ಮಜನ ನೀತಂದೂ । ಬಲು । ಸಾಮ್ಯಾರ್ಥದಿಂ ಶೆರೆಯಿಟ್ಟಹೆಯಂದೂ । ಆ ಮಾತ ಹರಿಕೇಳ್ದನಂತೆ । ಬಲ । ರಾಮಾ ಯಾದವರ್ಸಹಬಂದಿಹರಂತೇ ॥ 2 ॥ ಯಿಂನಾದರೂ ಸ್ಮರಸುತಗೇ । ಉಷೆ । ಯನ್ನಿತ್ತು ನರಕಾಂತಕ । ನಂನೂ ನೀ ಮನೆಗೆ । ಮಂನಿಸಿ ಕರತಂದು ನೀನೂ । ಆತ । ನನ್ನೂ ಸಂತೋಷಿಸಿದರೆ ಕಾವನವನೂ ॥ 3 ॥

ಕದನವೆಂಬುವದು ಲೇಸಲ್ಲಾ । ಯೆಂದು । ಮದನಾರಿ ನಿನಗುಸುರೆಂದನೀ ಸೊಲ್ಲಾ । ಇದಸಾರಿಪೇಳ್ದೆ ನಾನಯ್ಯಾ । ಯಿಂನು । ಪದುಮನಾಭನ ಹರುಷಿಸಿ ಕಳುಹಯ್ಯಾ ॥ 4 ॥

## ॥ ಷಟ್ಪದಿ ॥

ಯನೆ ಕೇಳ್ದಸುರಂ । ಘನಕೋಪದೊಳಾತನು ಘರ್ಜಿಸಿ । ಮಂತ್ರಿಯೊಡನಂ ಅನುವರ ಮನೆಗಿಂದು । ದೊರಕಿದುದೆ । ನುತಾ ವಂದದೊಳಿಂತೆಂದಂ ॥ 1 ॥

## ॥ ರಾಗ ಸುರಟಿ ಏಕತಾಳ ॥

ಕೇಳ್ಮಂತ್ರಿಯೆ ನೀನೂ । ಸಂತೋಷದಿ । ಮನ್ಮಥಹರನೂ ॥ ಮೇಲ್ಕಾಡಿದ ತುರುಗಾಯಿಯ । ಯಂನನು । ಕೀಳಾಮಾಡಿದನಿದು ಸಮವೇನಯ್ಯಾ ॥ 1 ॥ ಸೆರೆಯೊಳಗಾನಂದೂ । ಯಿಟ್ಟಿಹ । ತರಳಗೋಸುಗಯಿಂದೂ । ಧುರಕೆಂನೊಳು ಗೋಪರಬಲ । ಸಹಿತಾ । ಕರಿಮಯ್ಯವನಂಮ । ಪುರಕೆಬಂದಿಹನಂತೇ ॥ 2 ॥ ಅನಿರುದ್ಧಗೆ ಬೇಗಾ । ತಂನಯ । ತನುಜೆಯ ನಿತ್ತೀಗಾ ॥ ವಿನೆಯದಿ ಗೋವಳ ॥ ನನು ಮಂನಿಸಿ ಕಳು । ಹೆನುತಾ ಗಿರೀಷದೂ ॥ ತನಕಳುಹಿಸಿದಾ ॥ 3 ॥ ಉರಗಭೂಷನು ಹೀಗೆ । ಪೇಳ್ವುದ ॥ ಸರಿಬಂದುದೆ ನಿನಗೇ ॥ ವರೆಯಂದೆನುತಲೆ । ದಾನವಪೇಳಲು । ಹರುಷಪಡುತಲಾ ಸಚಿವನಿಂತೆಂದಾ ॥ 4 ॥

## ॥ ರಾಗ ಮಧುಮಾಧವಿ ಆದಿತಾಳ ॥

ಕೇಳು ದಾನವರಾಯಾ । ನಾನೆಂಬ ನುಡಿಯಾ । ಜಾಲಮಾತಲ್ಲಾ ಕಿವಿಗೊಟ್ಟು ಯಂನೊಡೆಯಾ ॥ ಪಲ್ಲ ॥ ತನುಜೆಯ ಸ್ಮರಜಾತಾಗಿತ್ತಡೆದಂದವಯ್ಯಾ । ದನುಜಾರಿ ಬಂಧುತ್ವವಾಗೆ । ಸುಖವಯ್ಯಾ ॥ 1 ॥ ಮಾಧವನೊಳುಕಾದಿ ಬದುಕಿದ್ದವರಿಲ್ಲಾ । ವೇದಚೋರನ ಬಳಿಕ ಕೊಂದವನೀತಾ ॥ ಮೇಧಿನಿಯನು ಬೆಂನಿ । ನಲಿ ಪೊತ್ತನಿವನೂ । ಮೇಧಿನಿ ತಸ್ಕರ । ರನು ಕೊಂದನವನೂ ॥ 2 ॥ ಹೇಮಾಕ್ಷನೊಳು ಕಾದಿ ಸೀಳ್ದತಾನೀತಾ । ವಾಮನನಾಗಿ ಧರೆಯೆಳೆದಾತಾನೀತಾ ॥ ಭೂಮಿಪ ಕಾರ್ತಿವೀರ್ಯ । ನನುಗೆದ್ದನೀತಾ । ಭೂಮಿಜೆ ಚೋರನಾ ಮಡುಹಿದನೀತಾ ॥ 3 ॥ ಮಾತುಳ ಮೊದಲಾದ ದೈತ್ಯರನೆಲ್ಲಾ । ಪ್ರೀತಿಯಿಂದೆಮನೂರಿ । ಗಟ್ಟದನಲ್ಲಾ ॥ ಪಾತಕಿಗಳನೆಲ್ಲಾ । ನುಳಿಸ ಲೋಕದಲೀ । ವೋತು ನಂಬಿದವರ । ಕಾಯ್ದು ತೋಷದಲೀ ॥ 4 ॥ ಬಲಿಯು ಪ್ರಲ್ಹಾದರು ॥ ವರ

ವಿಭೀಷಣರೂ । ಜಲಜನಾಭನಹೊಂದಿ । ಸುಖಿಯಾದರವರೂ । ನಳಿನಾಕ್ಷ ಹರನೊಳು । ಭೇದವನೆಣಿಸದೇ । ಘಳಿಲನಾತಗೆ ನಂಬು । ಮನದಿ ಯೋಚಿಸದೇ ॥ 4 ॥

## ॥ ಕಂದಪದ್ಯ ॥

ಯೀ ತೆರದಿಂ ಮಂತ್ರಿಯತಿ । ನೀತಿವಾಕ್ಯವ ಪೇಳ್ದುದ ಕೇಳಿಯಾರ್ಭಟಿಸುತ್ತ । ಘನಖಾತಿಯಂತಳೆದೆಂದ ನವನೊಡನಂ ॥ 1 ॥

## ॥ ರಾಗ ಸೌರಾಷ್ಟ್ರ ಏಕತಾಳ ॥

ಯಲವೋ ಮಂತ್ರಿ ಕೇಳೋ ನಿನಗೆ । ಸಲುಗೆಗೊಟ್ಟುದರೀಂದೆನಗೆ । ಬಲುಹಿತವನು ನುಡಿದೆನೀನೂ । ಭಳಿರೆ ಮೆಚ್ಚಿದೇ ॥ 1 ॥ ಕದನಕಟ್ಟಲೆಂದುನಿಂನ । ಕರದುಪೇಳ್ದರೆ ನೀಯಂನಾ । ಬೆದರಿಸಿ ನುಡಿದುದು ಬಲು । ಚದುರತೆಯೇನೋ ॥ 2 ॥ ದನುಜಾಧೀಶಾ ಕೇಳಿಷ್ಟು ನಿಂನಾ ॥ ಮನಕೆಕೋಪವಾದರೆಂನಾ । ಅನುವರಕ್ಕೆ ಕಳುಹಿಸಯ್ಯಾ ॥ ಕಿನಿಸ್ಯಾಕೋ ಜೀಯಾ ॥ 3 ॥

## ॥ ಕಂದಪದ್ಯ ॥

ಯನುತಲಾ ಸಚಿವಂ ಪೇಳ್ದು । ದನಂ ಲಾಲಿಸುತಂ । ದಾನವೇಂದ್ರಂ ಭರದಿಂದಾ । ತನ ಮಂನಿಸಿ ಸ್ಮರನಾಶನ ಚರನಂ । ಕರೆದು ಪೇಳ್ದೊಂದುತ್ತರಮಂ ॥ 1 ॥

॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಚರನೆ ಕೇಳೆಲೊ ಲಿಂಗಪೂಜೆಯ । ವಿರಚಿಸಿಯೇ ನಾಬಹೆನ ನಿತರೊಳು । ಉರಗಭೂಷನು ಕದನಕ್ಕೈದಲು । ಭರದಿಪೇಳೂ ॥ 1 ॥ ಯನುಲು ಕೇಳ್ದಾ ದೂತ ಬೇಗದಿ । ದನುಜನನು ಬೀಳ್ಕೊಂಡು ಪೊರಟನು । ಅನುಮಿಷಾರ್ಚಿತಗೆರಗಿ ಪೇಳ್ದನು । ವಿನಯದಿಂದಾ ॥ 2 ॥ ಗಿರಿಜೆಯರಸನೇ ಲಾಲಿಸಾಶರ । ಬಂಗೆ ದೇವರು ಪೇಳ್ದುದನಾ । ನೊರೆಯಲತಿ ಕೋಪಿಸಲು ಮಂತ್ರಿಯು । ಭರದಿಬಂದೂ ॥ 3 ॥ ನೀತಿವಾಕ್ಯವ ನುಸುರುತಿರುತಿರೆ । ಆತಕೋಪದೊಳವನ ಬೆದರಿಸಿ । ಖಾತಿಯನು ತಳೆದೆಂನೊಳೆಂದನು । ತಾತವಕದೀ ॥ 4 ॥ ಲಿಂಗಪೂಜೆಯಮುಗಿಸಿ ಬರುವೆನು । ತಂಗಜಾಂತಕನ ನಿತರೊಳು ಸಮ । ರಾಂಗಣಕೆ ಮುಂದೈದಲೆಂದನು । ಭಂಗಬಾಣಾ ॥ 5 ॥

## ॥ ಕಂದಪದ್ಯ ॥

ಚರನೆಂದುದ ಲಾಲಿಸುತಂ । ಹರನಗುತಸುರಗಾಗಿ ಹರಿಯೋಡನೆನಗಿಂದು ಧುರಮಾದುದೆನುತಂ । ಸುರಮುನಿಯಂ ಕರದು ನಮೃತೆಯೊಳಿಂತೆಂದಂ ॥ 1 ॥

## ॥ ರಾಗ ಮಾರವಿ ರೂಪಕತಾಳ ॥

ಮುನಿನಾಥ ಕೇಳ್ದಿಯಾ । ದನುಜೇಶಾ ಪೇಳ್ದುದ । ವನಜಾಕ್ಷನೆಡೆಗೆ ನೀನ್ಯೆದೀ ॥ ಅನುವರಕಾ ಭವನ್ಯೆ । ತಪ್ಪನೆಂದೆನುತಾ ಪೇ । ಳೆನುತಾ ಬೀಳ್ಕೊಟ್ಟನಾ । ರುಷಿಯಾ ॥ 1 ॥ ಯಿಂದುಧರನ ಬಳಿ । ಯಿಂದ ನಾರದನು ಆ । ನಂದದೊಳ್ಯೆತಂದು । ಹರಿಯಾ ॥ ಮುಂದೆ ನಿಂದರ್ತಿಯೊಳ್ । ಅಂದು ನಗುತ ಭಕ್ತಿ । ಯಿಂದ ಕೈಮುಗಿದೆಂದ । ನಾಗಾ ॥ 2 ॥ ಪೀತಾಂಬರ ಕೇಳು ಬಾ । ಣನ ಸಂಧಾನಕ್ಕೈದು । ಮಾತಾಗದೆಂದನಾ । ಹವಕೇ ॥ ಭೂತೇಷನಿಗೆ ನೇಮಿ । ಸಲ್ಕಾಗ ಕಾಳಗ । ಕಾಬಪ್ಪನು ಪುಸಿಯಲ್ಲಾ ॥ 3 ॥

## ॥ ವಾರ್ಧಿಕ್ಯ ॥

ಯಿತ್ತಲಂ ನಾರದಂ ಹರಿಯೊಳಿಂ ತುಸುರುತ್ತಲಿರ । ಲತ್ತ ಗಂಗಾಧರನು ಸಂಗರಕೆ ಪಯಣಮಂ । ಚಿತ್ರದೊಳು ನಿಶ್ಚೈಸಿ ಪೊರೆಯೊಳಿಹ ವಾಸವಾದ್ಯರಲಿ ಪೋಪುದೆಂದೂ ॥ ಪತ್ತಿದಂಗೋಪತಿಂಯೆನಂ ಪಯಣದೋಳ್ಗಣರ ವೊತ್ತ । ಮತಿಯಾರ್ಭಟಿಸುತ್ತೊಡನೇಳಲಾಕ್ಷಣ । ಹಸ್ತಿಮುಖ ಷಡ್ವದನ ಭೈ । ರವರ್ಸಹ । ತ್ರಿಲೋಚನಂ ನಡೆತಂದನ್ಹೂ ॥ 1 ॥

## ॥ ರಾಗ ಪಂತುರಾವಳಿ ಮಟ್ಟೆತಾಳ ॥

ಬಂದನೀಶನಂದೂ ಸಮರಕೇ । ತೋಷದಿಂದ । ಬಂದನೀಶನಂದು ಸಮರಕೇ ॥ ಯಿಂದಿರೇಶನೊಡನೆ ಸಮರ । ಬಂದಿತೆನಗೆ ಬಾಣಗಾಗಿ । ಯೆಂದು ನಂದಿಯೇರಿ ಬೇಗ । ದಿಂದ ಬಂದನೀಶನಂದು ಸಮರಕೇ ॥ 1 ॥ ದೇವ ದುಂದುಭಿಯು ಮೊಳಗುತಭ್ರದೀ । ಬೆಚ್ಚನಡುಗುತಿಂದು ಧರಣಿ । ವಾದ್ಯಘೋಷದೀ । ಸುರರು ಪ್ರಮಥರಿಂದ ಸಹಿತ । ಜಯತುಯೆನುತ ಲಂದದಿಂದ । ಬಂದನೀಶನಂದೂ ॥ 2 ॥ ತಾರಕೇಶವರನು ದಿವಿಜ । ವಾರಸಹಿತಬಂದುನಿಂದು । ರಣವ ಸಾರ ಲಾಗಸ್ಕಂದ । ತಾ ಮಯೂರವೇರಿ ನಡೆದು । ವೀರಯದುಗಳಿದಿರ್ಗೆ । ಬಂದುನಿಂದನೂ ॥ 3 ॥ ಸಮರಕೆಂನೊಳಾರು ಬಹಿರಿ ಬಂನಿರೆಂದನೂ । ಮತ್ತೆ ಸರಳಸಾರವಂನು । ಸುರಿದು ತಾನಧಿಕತನದಿ । ಬೆದರಿಸಿದನೂ ॥ 4 ॥

## ॥ ಕಂದಪದ್ಯ ॥

ಭರ್ಗಜ ನೀಪರಿಯಿಂ । ಯದುವರ್ಗವ ನೋಯಿಸಲಿಕ್ಕೆಮ್ಮ । ನಂಗಂ ಕಾರ್ಗಾಲದ ಮಳೆಯಂದದಿಂ । ಕೂರ್ಗಣೆಯಂ ಕರವುತ್ತೈದೆ ॥ ಬಂದಿಂತೆಂದಂ ॥ 1 ॥

## ॥ ರಾಗ ಭೈರವಿ ಅಷ್ಟತಾಳ ॥

ಎಲವೋ ಷಣ್ಮುಖನೇ ನೀನೂ । ನಂಮಯ ಯದು । ಬಲವ ನೋಯಿಸಿದರೇನೂ ॥ ಭಲರೆಂನೊಳಿದಿರಾಗಿ । ಕಾದಿ ಜಯಸಿದರೆ । ಕಲಿಯಹು ದೆಂದನಾಗಾ ॥ 1 ॥ ಕೇಳು ಮನ್ಮಥನೇ ಹಿಂದೆ । ಮಜ್ಜನಕನ । ಫಾಲನೇತ್ರಾಗ್ನಿಯಿಂದೆ । ಕಾಲಗಂಡಿಗೆ ಯೀಗಲಳಿವೆನೀಕಾಲದಿ ಬಾಲನೊಳಗೆ ಕಾಮನೂ ॥ 2 ॥ ಯಂನಾ ಬಾಣದಲೀ ನಿನ್ನಾ । ಪೆತ್ತವ ತಪ । ವಂನು ತಾ ಬಿಸುಟನು ತಾ ಮುನಾ ॥ ಚಂನಾಗಿ ಸತಿಯೊಳು । ರಮಿಸೆನೀ ಜನಿಸಿದೆ ॥ ಯಂನ ಲಾರ್ಮೊಗನೆಂದನೂ ॥ 3 ॥ ಮೀನನಾರಿಯಗರ್ಭದಿ ॥ ಪುಟ್ಟಿದಾತಾ । ನೀನೆಂಬುವರು ಜಗದೀ ॥ ಯಂನ ತಾತನವರ । ದಿಂದಿದ ತಿಳಿಯೆನೆ । ಮನುಮಥನಿಂತೆಂದನೂ ॥ 4 ॥ ಹರನಾತ್ಮಭವನೆ ನೀನೂ । ನಿಂನಯ ಮೂಲವರಿಯೆ ನೀಕೇಳು ನೀನೂ । ಗಿರಿಜೆಯುದರದಲಿ । ಜನಿಸದೆ ಗಿರೀಶಗೆ ತರುಣವೆಂತಾದೆಯಯ್ಯಾ ॥ 5 ॥

## ॥ ರಾಗ ಶಂಕರಾಭರಣ ಪಂಚಾಗತಿ ಮಟ್ಟೆತಾಳ ॥

ಯಂದಮಾತ ಕೇಳುತಾಗ । ಸ್ಕಂದರೋಷದೀ । ನಿಂದು ಸರಳಸುರಿಯೆ ಕಾಮ । ನಂದು ಬೇಗದೀ ॥ ಮಂದಹಾಸದಿಂದ ಶರವ । ಮದನ ತರಿವುತಾ । ಯಿಂದುಧರನ ಕುವರ ಭಳಿರೆ । ಯಂದು ಪೊಗಳುತಾ ॥ 1 ॥ ಭೂರಿಬಾಣ ತತಿಯಮದನ । ನಂದು ಸುರಿಯಲೂ । ಘೋರನದನು ಹರನತನುಜ । ನಡುವೆ ತರಿದನೂ ॥ ಧೀರತನದಿ ನಗುತ ಮತ್ತೆ । ಮನಸಿಜಾತನೂ ಕ್ರೂರ ಶಂದಿ ಗೌರಿಸುತನ । ಧನುವ ಕಡಿದನೂ ॥ 2 ॥ ಬಿಲ್ಲುಮುರಿಯೆ ಕೋಪ ದಿಂದ । ಕಾರ್ತಿಕೇಯನೂ । ಪಲ್ಮೊರೆವುತ್ತ ಘರ್ಜಿಸುತ್ತ । ಶೂಲವಿಟ್ಟನೂ ॥ ಮೇಲ್ಮೊಗದೊಳು ನೋಡಲಾಗ । ಬೆದರೆ ಕಾಮನೂ । ಬಲ್ಮೆಯಿಂ ಮುರಾರಿ ಚಕ್ರದಿಂದಲದರನೂ ॥ 3 ॥ ಕಡಿಯೆಕಂಡು ಖಾತಿಯಿಂದ । ಗಿರಿಜೆಯಣುಗನೂ । ಫಡಫಡೆನುತ ಕೃಷ್ಣನೊಡನೆ ॥ ಧುರಕೆನಿಂದನೂ ॥ ಮೃಡನು ಕಂಡು ಹರಿಯ ಕಲಹ । ಬೇಡವೆನುತಲೀ । ಒಡಂಬಡಿಸಿ ಷಣ್ಮುಖನ । ಕರೆದ ಮುದದಲೀ ॥ 4 ॥

## ॥ ವಾರ್ಧಿಕ್ಯ ॥

ಹರನಿಂತೆಸಗಲು ಷಣ್ಮುಖಂ ಸುಂಮನಿರೆ ನವಿಲು । ಸ್ಮರನಕೇತನ ಕದಡೆ ಗರುಡನತದ ಕುಪ್ಪರಿಸೆ । ಭರದಿಂದ ವೃಷಭನೇಳ್ತಂದುಮಾಪಕ್ಷಿಯೊಳ್ ಕಾದಲೀಶಂ ನಿಲಿಸಲೂ ॥ ಹರಿಯಗ್ರಜನೊಳ್ಳೈದೆ ವಿಘ್ನರಾಜಂನಿರದೆ । ಭರದೆ ಪೋಗಲು ಭೈರವಂ ಯುದ್ಧಂಗೈಯಲಾ । ಪುರುಹರಂ ಬೇಡವೆನುತಾತನು ನಿಲಿಸಿ ಹರಿಗೆತಾ ನಿದಿರಾದನೂ ॥ 1 ॥

## ॥ ಕಂದಪದ್ಯ ॥

ಹರನು ತಾ ಸಂಗರಕ್ಕೇಳ್ತರೆ ಕಾಣುತ । ಮಂಬುಜಾಕ್ಷ ನತಿಬೇಗದಿ । ಹರುಷದೊಳಂ ಧುರಕನುವಾಗಿರಲಾ । ಪುರಮಥನನಾಗಳಿಂತೆಂದಂ ॥ 1 ॥

## ॥ ರಾಗ ಪಂಚಾಗತಿ ಮಟ್ಟೆತಾಳ ॥

ಹರಿಯೆ ನಿಂನೊಳೆನಗೆ ಸಮರ । ದೊರಕಿತಿಂದು ದುರುಳಖಳರ । ಕೊಂದತೆರನದಲ್ಲ ಕಳುಹು । ಸರಳಬೇಗದೀ ॥ 1 ॥ ಹರನೆ ನೀನು ಧೀರನೆಂಬ । ಪರಿಯ ಕೇಳಿ ಬಲ್ಲೆನಾದ । ರೆರಡು ಘಳಿಗೆ ಪರಿಕಿಸೆಂನ । ಧುರದ ಪರಿಯನೂ ॥ 2 ॥ ಧುರದಿ ಶೌರ್ಯವಂತನಹುದು । ದುರುಳಕಾಲಯವನು ನಿಂನಾ । ಬೆರಸಲೋಡ ಲ್ಬಟ್ಟದನೆಂದು । ಗಿರೀಶ ನಗುತಲೀ ॥ 3 ॥ ಪುರವಿನಾಶ ಕೇಳು ಭಸ್ಮಾ । ಸುರಗೆ ಬೆದರಿ ಬದಕಿಬಂದ । ಪರಿಯನೆಲ್ಲ ಬಲ್ಲೆನೆಂದ । ಸಿರಿಯ ರಮಣನೂ ॥ 4 ॥ ವೀರರಿಂಗೆ ಕರಿವರೂಥ । ವಾರುವಂಗಳಿಹುದು ಪಕ್ಷಿ । ಹೇರ್ದವಾಹನಂಗಳ್ ಕಾಣೇ । ವಾರಿಜಾಕ್ಷನೇ ॥ 5 ॥ ಗೌರಿಯರಸ ನೀನು ಪೇಳ್ದ । ಮೂರರೊಳಗದಾವುದೀಗ । ಯೇರಿಕೊಂಡು ನಡೆವೆಯೆಂದ । ಮಾರಜನಕನೂ ॥ 6 ॥ ಯಂದಮಾತ ಕೇಳಿ ಕಿನಿಸಿ । ನಿಂದಭವನು ಧನುವ ಪಿಡಿದು । ನಿಂದು ಸರಳಸುರಿದ ಸಮರ । ವೃಂದ ಬೆದರಲೂ ॥ 7 ॥ ಸಿಂಧುಜಾತೆ ಯರಸನದರ ॥ ನೊಂದು ಬಾಣದಿಂದ ತರಿದು । ಮಂದಹಾಸದಿಂದ ಲಿರಲು । ಕಂದು ಗೊರಳನೂ ॥ 8 ॥ ಖಗವರೂಥ ನಂನು ನೋಡಿ ॥ ನಗೆಯ ಮಾಣಿಸುವನೆನುತ್ತ । ಧಗಧಗಿಪ ತ್ರಿಶೂಲವಿಡಿಯೆ । ಜಗತ್ತು ನಡುಗಲೂ ॥ 9 ॥ ಮಿಗೆ ವಿನೋದದಿಂದಲಾಗ । ನಗಧರನು ಸುದರ್ಶನವ । ತೆಗೆಯೆ ಕಾಣು ತೊದರಿತಾಗ । ಗಗನ ವಾಕ್ಯವೂ ॥ 10 ॥

## ॥ ಭಾಮಿನಿ ॥

ಯೀಶ ಶೂಲವ ಬಿಡಲು ಭೂಮ್ಯಾ । ಕಾಶದಲಿ ಬದುಕಿದರ ಕಾಣೆನು । ಕೇಶವನ ಚಕ್ರದಲಿ ಬದುಕಿದರಿಲ್ಲ । ಪೂರ್ವದಲೀ ॥ ಈಸು ಕಾಳಗವೇತಕೆನಲು ಮ । ಹೇಶ ಕೇಳಿಯೇ ನಂಮ ಕದನದಿ । ಘಾಸಿಯಾದುದು ಲೋಕವೆನುತಿಂ । ತೆಂದ ನಚ್ಯುತಗೇ ॥ 1 ॥

## ॥ ರಾಗ ಭೈರವಿ ಝಂಪೆತಾಳ ॥

ಸಿರಿವರನೇ ಕೇಳು ಸಂ । ಗರ ಕೇಳಿಯೊಳಗೆ ನಾ । ವಿರಲು ಮೂಜಗವೆಲ್ಲವು । ಉರಿದು ಪೋಪುದಲ್ಲೈ ॥ 1 ॥ ಯಂದಭವನಾಸೋತೆ ॥ ನಿಂದಿನಾಹವದೊಳಗೆ । ತಂದ ಕೌಳಿಕದಿಮನ । ನೊಂದು ಮರಳಿದನೂ ॥ 2 ॥ ಶಿವನೈದಲಿತ್ತಯಾ । ದವರೆಲ್ಲ ಬಲಿಯ ಸಂ । ಭವನೂರ ಮುತ್ತಿದರು । ಕಡು ತವಕದಿಂದ ॥ 3 ॥

## ॥ ರಾಗ ಮಾರವಿ ಏಕತಾಳ ॥

ಭೋರ್ಗರೆವುತ ಯದು । ವರ್ಗವು ದನುಜನ । ದುರ್ಗವು ಪೋಗಲು ಭ । ಟರ್ಗಳು ಬಲ್ಭೋರ್ಗುಡಿಸುತ ದೈ । ತ್ಯರ್ಗಳ ಮುಸುಕುತ । ರೂರ್ಗುಡಿಸಿದರುರು । ಮಾರ್ಗಣದಿಂದಾ ॥ ಕೇಳೋ ಭೂಪಾ ॥ 1 ॥ ಬಿಡದೊಳದೈತಂ । ದೊಡನತಿ ಕೋಪದಿ । ಘುಡು ಘುಡಿಸುತಲಾ । ದಡಿಗ ಖಳರ ತಲೆ । ಗೆಡಹುತ ಭರದಿಂ । ತಡೆಯದೋಡುವರನು । ಪಿಡಿದೆಲ್ಲರ ಸದೆ । ಬಡಿದರೆ ನಿಮುಷಕೇ ॥ 2 ॥ ಹರಿಯವರಂದೀ । ಪರಿಯಿಂಥ ಶರ । ಚರರೂ ಕಾಣುತ । ಉರು ವಿಕ್ರಮದೀ ॥ ಬರೆದು ಸುಂಣವನವ । ದಿರಮೂಗಿಗೆನಿಂ । ಮರಸಗು ಸುರಿರೆಂ । ದೊರೆದಟ್ಟಿದರೂ ॥ 3 ॥

## ॥ ಕಂದಪದ್ಯ ॥

ಕೇಳ್ದವರೆಂದುದ ನಾಶರ । ರಾಳ್ದುಃಖಂ ಬಡದೇಳ್ತಂದಾಗಳು । ತಾಳ್ದತಿ ಭಯಮಂ ಮೆಲ್ಲನೆ । ಪೇಳ್ದ ಬಾಣಾಖ್ಯನೊಡನೆ ಕುಟ್ಮಳಕರದಿಂ ॥ 1 ॥

## ॥ ರಾಗ ಮುಖಾರಿ ಆದಿತಾಳ ॥

ಕೇಳಯ್ಯಾ ದಾನವೇಂದ್ರಾ । ಫಾಲಾಂಬಕನ ಭಕ್ತಾ । ಮುಲೋಕದೊಳು ಪ್ರಖ್ಯಾತಾ

। ಕೇಳಯ್ಯಾ ದಾನವೇಂದ್ರಾ ॥ ಪಲ್ಲ ॥ ಗಿರೀಶ ಯುದ್ಧಕ್ಕೆ ಪೋದನಯ್ಯಾ । ಸೋತು ಹಿಂಮೆಟ್ಟಿ । ಮರಳಿ ವಂಚಿಸಿ ಪೋದಜೀಯಾ ॥ 1 ॥ ಬಂದು ಸುಂಣವನಿಂ । ಮರಸಗುಸುರೆಂ । ದೊರೆದಟ್ಟದರೂ ॥ 2 ॥

## ॥ ರಾಗ ಭೈರವಿ ಝಂಪೆತಾಳ ॥

ಚಾರರೆಂದುದ ಕೇಳ್ದು ॥ ಮಾರಮಣನಂತೆದ್ದು । ದಾರಬಲಖಳ ತಂನ । ವೀರರೊಳು ಸುದಾ಼ ॥ 1 ॥ ದಡಿಗರಾಲಿಸಿರವನ । ಪಡೆಯ ನುಗ್ಗರಿದು ಶೆರೆವಿಡಿಯಿರೋ ಗೋವಳನ । ಕಡು ತವಕದಿಂದಾ ॥ 2 ॥ ಯನುತ ಮಂತ್ರೀಶ ಸಹಿ । ತನುವರಕೆನಿಶ್ಚೈಸಿ । ಘನರೌದ್ರದಿಂದೆದ್ದ । ದನುಜೇಶನಂದೂ ॥ 3 ॥ ರಥವೇರಿ ಬಲಸಹಿ । ತತುಳ ಘರ್ಜನೆಯೊಳ್ಬಲಿ । ಸುತನು ನಡೆತಂದ ಸುರ । ತತಿಯು ಬಾಯ್ಬಿಡಲೂ ॥ 4 ॥ ಭಾರಕಹಿಪತಿಕೂರ್ಮ಼ । ತಾಳಲಾರದೆ ಬಳಲಿ । ಚೀರಿದರನೇನೆಂಬೆ ॥ ಭೂರಿಬಲನಧಟಾ ॥ 5 ॥

## ॥ ಕಂದಪದ್ಯ ॥

ಪರ್ವತ ಮಂಜರಿವಂದ್ದದಿ ॥ ನಾರ್ಭಟಿಸುತ್ತೆ ಮಂತ್ರಿಸಹಿತಲಾ ಶರಾಧಿಪಂ । ಪೇರ್ಬಲವಂ ನೂಕಿದರಸಿ । ಗರ್ಭದೊಳಿಂನಾರು ನಿಲ್ವರವರ ನಿದಿರೊಳಂ ॥ 1 ॥

## ॥ ರಾಗ ಶಂಕರಾಭರಣ ಪಂಚಾಗತಿ ಮಟ್ಟೆತಾಳ ॥

ಬಂದು ದನುಜರೂ । ಕಣೆಯ । ನಿಂದು ಸುರಿದರೂ । ಯಿಂದಿರಾ ಧರನನೇಮ । ದಿಂದ ಲವದಿರೂ ॥ 1 ॥ ಹೊಕ್ಕು ಹೊಯಿದರೂ । ಗಜದ । ಯೊಕ್ಕ ಮುಂದರೂ । ಸಾಕ್ಕಿದವರ ಸೀಳ್ದು ರಣವ ॥ ಮಿಕ್ಕು ನಡೆದರೂ ॥ 2 ॥ ಕಂಸಮಾಹವಾ । ಕೆಡಹಿ । ವರರಥಾಶ್ವವಾ । ಮುರಿದು ಮುಂದೆ । ಕಡಿದು ಕೊಂದ । ರಂಬಲೌಘವಾ ॥ 3 ॥

## ॥ ವಾರ್ಧಿಕ್ಯ ॥

ಧರಣಿಪತಿ ಲಾಲಿಸ್ಯೆ ಆನೆಯಿಂ ಸೇನೆಯಿಂ । ಧುರಧೀರರಡರ್ದ ರಥಚಯವನಂ ಹಯವನಂ । ಹರಿಯವರ್ಮ್ಮಳಿಸ್ಸಿನಿಂ । ಸವ್ಮರಿದರ್ ನಿಮುಷದೊಳದನೇಂ ಪೇಳ್ವೆನೂ ॥ ಕೆರಳಿ ಬಲಿಜಂ ಸುಪ್ರತಾಪದಿಂ ಕೋಪದಿಂ । ವರುಷ ಕಾಲದ ಮಳೆಯ । ತೆರದೊಳಂಬರದೊಳಂ । ಸರಳ ಸುರಿವುತ್ತೇಳ್ತಂದನವಂ ಕೃಷ್ಣನಿದಿರೊಳು ಘರ್ಜಿಸುತ್ತಾ ॥ 1 ॥

## ॥ ಕಂದಪದ್ಯ ॥

ಛಿದ್ರಿಸಿ ಯದುಬಲವಂ ಘನ । ರೌದ್ರಾನ್ವಿತನಾಗಿ ಯಾಸುರೇಂದ್ರಂ ಭರದಿಂ । ಚಿದ್ರೂಪ ನಿವನೆಂಬೂದ ತಿಳಿಯದಚ್ಚುತ ನೊಡನಿಂತೆಂದಂ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಯಲವೋ ಗೋವಳ ಕೇಳುನೀನು । ಕಲಹದೊಳು ಮಾಗಧನೊಳ್ ಕಾದಿಯೇ । ಗೆಲಲರಿಯದೇ ವೋಡಿದಂಥಾ । ಕಲಿಯು ನೀವೇ ॥ 1 ॥ ಖಳರ ಯುದ್ಧವ ಗೈವಡೇ ಬಾ । ದಲ ವಿನಾಶಕದೊಂದು ಬಾಣವ ॥ ಕಳುಹು ಮತ್ತೆಂನ ಕೈಚಳಕದ । ಪರಿಯನೀಗಾ ॥ 2 ॥ ನರಕದೈತ್ಯನ ಕೊಂದೆನೆಂಬಾ ॥ ಗರುವಬಿಡು ನಿಂನಧಟನು । ಮುರಿವೆನೊಂದೇ ನಿಮುಷ ಮಾತ್ರಕೆ । ಪರಿಕಿಸಿಂನೂ ॥ 3 ॥ ಮುರಿವ ಧೀರನೀನೆಂದು ನಾ । ನರಿತು ಬಂದೆನಾದರಿಂನೂ । ಬರಿಯ ಮಾತದ್ಯಾತಕಿಂನೂ । ಧುರವನೆಸಗೂ ॥ 4 ॥

## ॥ ರಾಗ ಶಂಕರಾಭರಣ ಪಂಚಾಗತಿ ಮಟ್ಟೆತಾಳ ॥

ಯನಲು ಹರಿಯ ಮಾತಕೇಳ್ದು । ದನುಜರಾಯನೂ । ಕನಲಿ ಸರಳ ಮಳೆಯ ಕರಯೇ ವನಜನೇತ್ರನೂ ॥ 1 ॥ ಗರುಡ ಬಾಣದಿಂದಲವರ । ತೀರ್ಚೆ ಕಾಣುತ । ಕೆರಳಿ ಬಳಿಕ ತಿಮಿರಶರವನೆಚ್ಚ ಬಲಿಸುತಾ ॥ 2 ॥ ರಣ ದೊಳಂಧಕಾರಮಾಗೆ । ಕಂಡು ಕೃಷ್ಣನೂ ॥ ದಿನಮಣಿಯ ಶರದೊಳದನು । ನಿಲಿಸೆ ಬಾಣನೂ ॥ 3 ॥ ಕನಲಿ ಪರ್ವತಾಸ್ತ್ರವೆಸೆಯೆ । ಕಂಡು ಕೃಷ್ಣನೂ ವಿನಯದಿಂದ ಕುಲಿಶಶರದೊ । ಳವನ ರಥವನೂ ॥ 4 ॥ ಎಸೆವ ಮಂತ್ರಾಸ್ತ್ರವೈದೆ । ಬಳಿಕ ಖಂಡಿಸಿ ॥ ಪೂಶರನ ಪಿತನು ಮನದಿ । ಮತ್ತೆ ಕೋಪಿಸೀ ॥ 5 ॥ ಆಸುರೇಂದ್ರ ನಡರ್ದ ರಥವು । ತುರಗನಿಕರವಾ ॥ ಘಾಸಿಮಾಡೆ ಖತಿಸಿದೈತ್ಯನೂ ॥ ಜಲಜ ಸಂಭವಾಸ್ತ್ರವಂನು । ಭರದೊಳಿಚ್ಚನೂ ॥ 7 ॥ ವಡನೆ ಶಾಂತತ್ವದಿಂದ । ಬಂದುದೇವರಾ ॥ ಅಡಿಗೆ ನಮಿಸಿ ನಾಭಿಯಲ್ಲಿ । ಕುಳಿತುದಾಶರಾ ॥ 8 ॥

## ॥ ಕಂದಪದ್ಯ ॥

ದನುಜಾಧಿಪ ನೀಪರಿಯಿಂ । ವನಜಾಂಬಕ ಶರವಂ ನೆಸೆಯಲ್ಕೇಳ್ತಂದಂ । ಚಿನುಮಯನೊಳವಗೆ ಬಲಿ । ತನುಜ ಬೆರಗಾಗೆ ಕಂತುಪಿತನಿಂತೆಂದಂ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ಯಲವೋ ದಾನವಕೇಳು ನಂಮಯ । ಬಳಿಗೆ ಬ್ರಂಹ್ಮಾದ್ಯಮರ ಶರವನು । ಕಳುಹಿಸಿದರೆ ಗೆಲವಹುದೋ ನಿಂನೊಳು । ತಿಳಿದುನೋಡೂ ॥ 1 ॥ ಯನಲು ಕೇಳುತ ಭಳಿರೆಮೆಚ್ಚಿದೆ । ನೆನುತ ದೈತ್ಯಾಧಿಪನು ಭರ್ಗನು । ತನಗೆ ಕೊಟ್ಟವಸ್ತ್ರವನು ತೆಗೆದನು । ಹರಿಯ ಮೇಲೇ ॥ 2 ॥ ಕಪ್ಪುವರ್ನನೆ ಕೇಳುನಿಂನಯ । ದರ್ಪವನು ನಿಮಿಷದಲಿ ಮುರಿದಿ । ಲ್ಲಿಪ್ಪ ಭೂತಕೆ ಬಲಿಯ ಕೊಡುವೆನು । ತಪ್ಪೆನಿದಕೇ ॥ 3 ॥

## ॥ ರಾಗ ಶಂಕರಾಭರಣ ಪಂಚಾಗತಿ ಮಟ್ಟೆತಳ ॥

ಯಂದು ಪೇಳುತಾ । ಕೋಪ । ದಿಂದ ಬಲಿಸುತಾ ॥ ನಂದು ಮಾಯೆದಸ್ತ್ರ । ವೆಚ್ಚ । ನಿಂದು ಗಜರುತಾ ॥ 1 ॥ ಯಸೆಯಲಾಕ್ಷಣಾ । ಸಾ । ಹಸವನೇನನಾ । ನುಸುರ್ವೆ ರಣದೊಳಂಧಕಾರ । ಮಸುಕಿತಾಕ್ಷಣಾ ॥ 2 ॥ ಸಿಡಿಲುಹೊಡೆದವು । ಮರುಳು । ಗಡಣವೆದ್ದವೂ ॥ ಕಡುಗಿ ಕೂಗುತ ಸುರಹರನ । ಪಡೆಯ ತುಳಿದವೂ ॥ 3 ॥ ಬಾಣವಭ್ರದೀ । ಹರಿಗೆ । ಕಾಣದಂತಿರೇ । ತ್ರಾಣದಿಂದ ಸರಲಸುರಿದ । ತೂಣಿಯುಗದಲೀ ॥ 4 ॥ ಬರುವ ಬಾಣವಾ । ಕಂಡು ಸರಸಿಜಾಧವಾ ॥ ಧರೆಯೊಳಿರ್ದು ತರಿವು ತಿರ್ದ । ಧರಿಸಿರೋಷವಾ ॥ 4 ॥

## ॥ ಕಂದಪದ್ಯ ॥

ಅಂಬರದೊಳಾ ಬಾಣಂ ಪೀ । ತಾಂಬರ ನವನಿಯೊಳೂ ಕಾದು ತಿರಲಾ ಕ್ಷಣದಿ । ಕುಂಭಾಂಡಂ ಕೋಪದೊಳಂ । ಕುಂಭಿನಿವೊಡೆವಂತೆ ಪೊಕ್ಕನಾ ಯದುಬಲವಂ ॥ 1 ॥

## ॥ ರಾಗ ಘಂಟಾರವ ಅಷ್ಟತಾಳ ॥

ಬಂದು ಮಂತ್ರೀಶನು ನಿಂದು ಘರ್ಜಿಸುತಲೇ । ಅಂದುಯಾದವ ವೃಂದವನುತಾ ಬಂಡುಗ್ಗೈದನು ಬೇಗದೀ ॥ 1 ॥ ಜಲಜಬಾಣನ ಸೋಲಿಸಿಯೇ ಸಾ । ತ್ಯಕಿಯ ಮಲಗಿಸಿ, ಉದ್ಭವನ ಗೆಲ್ದುಹಲಧರಗಿದಿರಾದನೂ ॥ 2 ॥ ಖಳನ ಗರ್ವವ । ಬಲಭದ್ರ ನೋಡುತ । ಭಳಿರೆಯನುತಾ । ಮಲೆತು ನಿಂ ದಲಘುಭುಜಬಲನೆಂದನೂ ॥ 3 ॥ ಮನದಿ ರಾಮನು ಕನಲುತೊಂದುಮಾ । ಗರ್ಂಣದೊಳಾತನ । ಕಣೆಯನೆಲ್ಲವ । ಕ್ಷಣದೊಳಗೆ ತರಿದಟ್ಟಿದಾ ॥ 4 ॥ ಮತ್ತೆ ಕೋಪದಿ ಮಂತ್ರಿಯು ಗದೆ । ಯೆತ್ತಿ ಆರ್ಭಟಸುತ್ತಹೊಯ್ವೆನೆನ್ನುತ

ಬರುತಲಿರುತಿರೆ ಕಾಣುತಾ ॥ 5 ॥ ಚಿತ್ತದೊಳು ಖತಿ । ವೆತ್ತು ಕೃಷ್ಣಾಗ್ರಜ ನೆತ್ತಿ ಮುಸಲವ । ಸತ್ವದಿಂದಲೆ । ಯತ್ತಿ ಹೊಡೆಯಲು ಹೊಯ್ದನೂ ॥

## ॥ ವಾದಿಕ್ಯ ॥

ವನಜಾಕ್ಷ ನಗ್ರಜನ ಗಾಯದಿಂ ಕಾಯದಿಂ ದನುಜನಿಂಗೆರಗಲಾ ಶೂಲದಿಂ ಮುಸಲದಿಂ ॥ ತನಿರಕುತ ನೆರೆದುನೆರೆದಾನವಂ ॥ ಮಾನವಂ ಕೈಗೈದು ಭೀತಿಯಿಂದಾ ॥ ಅನುವರಕೆ ನಿಲಲರಿಯದೋಡಿದಂ ನೋಡಿದಂ । ದನುಜಪತಿಯದ ಗಗನಪಥದೊಳಂ ರಥದೊಳಂ ॥ ವಿಯದಿಂದಾ ತಾನದಕೇರಿ ದಂ ಸಾರಿದಂ । ಬಾಣನಂ ಮಂತ್ರೀಶನೂ ॥ 1 ॥

## ॥ ಕಂದಪದ್ಯ ॥

ಖಳರೀರ್ವರು ಮಾಯದೊಳಂ । ಜಲಜಾಕ್ಷನಮೇಲೆ । ಕಲ್ಲುಮರ ಬೆಟ್ಟಂಗಳಂ । ದಲಿಸದೆ ತೆಗೆದೊಟ್ಟಲು । ಬಳಲ್ದುರಗವೈರಿಯೊಡನಿಂತೆಂದಂ ॥ 1 ॥

## ॥ ರಾಗ ಭೈರವಿ ಏಕತಾಳ ॥

ಗರುಡಬಾರಯ್ಯ ನೀನಾಗಾ । ಲಂ । ಬರ ಕಡರಿಯೇ ಬಲುಬೇಗಾ ॥ ದುರುಳನೆಗಳ್ ದಾಟವನೂ । ಪರಿ । ಹಂಸೆನೆ ಕೇಳಿದನವನೂ ॥ 1 ॥ ಭರದಿಂದಾ ವಭಕೈತಂದೂ । ದುರು । ಳರ ಕಡುಹನು ಕಂಡೂ ॥ ಚರಣದೊಳೊದೆದನು ಗರುಡಾ । ದೈ । ತ್ಯರು ಧರೆಗಿಳಿದರುಗಾಡಾ ॥ 2 ॥ ಅಸುರಾಧಿಪ ಕಡುನೊಂದು । ಸಾ । ರಸ ಲೋಚನನು ಕಂಡೂ ॥ ವಿಶಿಖದ ವೃಷ್ಟಿಯ ಸುರಿದಾ । ನಿಮಿಷದಿ ಹರಿಯದ ತರಿದಾ ॥ 3 ॥ ಸುರರಿಪು ಶೂಲವನಿಡಲೂ ॥ ಕಡಿ । ದುರಗಶಯನ ರೋಷದೊಳೂ ॥ ಭರದಿಂ ಚಕ್ರವ ಪಿಡಿದಾ । ಖಳರೊಡೆಯನೊಳಾಕ್ಷಣ ನುಡಿದಾ ॥ 4 ॥ ಖೂಳ ಕೇಳೆಲೊವಿದಕೇ । ನಿಂನತೋಳಿನ ಮೇಲ್ಬಯಕೇ ॥ ತಾಳಿಕೊಳ್ಳಲವೂ ಯಂದೆನುತಾ । ವನ । ಮಾಲಿಚಕ್ರವನ್ನಿಟ್ಟು ನಗುತಾ ॥ 5 ॥ ದುರುಳನ ತೋಳ್ಗಳಬೇಗಾ । ಕ । ತ್ತರಿಸಿ ಸುದರ್ಶನವಾಗಾ ॥ ಕರವಿಂಡಳಿಯಲು ಬಂದೂ । ಪದ । ಕೆರಗಲುಯಿಂನೇನೆಂದೂ ॥ 6 ॥

## ॥ ಕಂದಪದ್ಯ ॥

ಚಕ್ರಮದೊಲವಂ ಮಿಗೆ । ಚಕ್ರಿಯದನ್ನೀಕ್ಷಿಸುತ್ತವನ ಕೊರಳಿಗೆ ಮತ್ತಾ ।

ಚಕ್ರವನೆಗೆಯಲ್ಕೆ ಕೃಷ್ಣನ । ವಿಕ್ರಮವಂ ಕಂಡುಮಭವನೇಳ್ತಂದಂ ॥ 1 ॥

## ॥ ರಾಗ ಶಂಕರಾಭರಣ ಮಟ್ಟೆತಾಳ ॥

ಸಾಕುಸಾಕು ಯುದ್ಧವ್ಯಾಕೆ । ಯೀತನ್ಯಾವ ದೊಡ್ಡಿತಯ್ಯಾ । ಬೇಕುಬೇಡೆಂಬವರ್‍ಯಾ । ರು ನೀಕೊಲ್ಲುತಿರೇ ॥ 1 ॥ ಕಾಕುಮನದೊಳಿಂನ್ಯಾಕೆ । ಭಕ್ತನೊಡನೆ ಮುನಿಸು । ಸಾಕೆನುತ್ತತಡೆದ ಪಿ । ನಾಕಿ ಮುದದಲೀ ॥ 2 ॥ ನಿಂನಮಾತು ದಂದವಾಯ್ತು । ಪಂನ್ನಗಾ ಭರಣಕೇಳೂ । ನಿಂನ ಹೊಂದಿದವರೆ ಭಕ್ತರೆಂನ ಭಕ್ತರು ॥ 3 ॥ ಭಿಂನಭೇದವುಂಟೆ ನಿಂನೊ । ಳೆಂನೊಳಿಂದು ತನಕವಾದ ರೆಂನಭಾಷೆ ಸಫಲವಾಯಿ । ತಿಂನು ಕೊಲ್ಲೆನೂ ॥ 4 ॥ ಯಂದುಪೇಳಲ ಭವತೋಷ । ದಿಂದ ತಿರುಗಲಿತ್ತ ಬಾಣ । ನಂದವನೇನೆಂಬೆರುಧಿರ । ಒಂದು ಭುಜದಲೀ ॥ 5 ॥ ಮಂದವಾಗಿ ಸುರಿವು ತಿರಲು । ಕಂದುಗೊರಳನೋಡಿ ಕರುಣ । ದಿಂದ ತಡವರಿಸಲು ದಾನ । ವೇಂದ್ರನಂಗವಾ ॥ 6 ॥ .

## ॥ ರಾಗ ವಧುಮಾಧವಿ ತ್ರಿವಿಡೆತಾಳ ॥

ಹರನು ಅವನಂಗವನು ತಂನಯ । ಕರದಿ ತಡವರಿಸಲ್ಕೆ ಮತ್ತಾ । ಸುರುಚಿರಾಂಗನು ಮಾದನಾತನ । ಕರಸಹಸ್ರವನೂ ॥ 1 ॥ ತೋರಿದನು ಹರಿಧುರದೊಳಲ್ಲಿ ಮು । ಗ್ಗಿರುವ ಹಸ್ತವೆದ್ದವೆಂಬಂ । ತಿರಲು ಕಾಣುತ್ತ ಭವನೆಂದನು । ಕೃಷ್ಣನೊಳು ನಗುತಾ ॥ 2 ॥ ಯಿಂದಿರಾವರ ಲಾಲಿಸೈ ನಾ । ನಿಂದುಬಾಣನ ಸಹಿತಪೋಪೆನು । ದಂದದಿಂದವನೂರ ಸಲಹಿಕೊ । ಮುಂದೆ ನೀ ಸಂತೋಷದೀ ॥ 3 ॥ ಯಂದಮಾತನು ಕೇಳ್ದು ಹರಿಮುದ । ದಿಂದ ನುಡಿದನು ಹರನೆ ಕೇಳ್ದೆ । ಯಿಂದು ನೀ ಪೇಳ್ದೊಚನ ಮನಸಿಗೆ । ಬಂದೀತೆ ಬಾಣಾಖ್ಯಗೇ ॥ 4 ॥ ಯನಲು ಬಕ್ತಿಯೊಳಚ್ಚುತನ ಪದ । ವನಜಕೆರಗಿಯೇ ನುಡಿದ ದೈತ್ಯನು । ಯನಗೆ ತಿಳಿಯದು ತವಮಹಿಮೆ ಮ । ಜ್ಜನಕ ಬಲ್ಲನು ಪೂರ್ವದೀ ॥ 5 ॥ ಅರಿಯದೇ ನಾನಿಂನ ಪಾದಕೆ । ದುರುಳತನಗಳ ಮಾಡಿದೆನು ನೀ । ಮರೆವುದೆಂನಯ ತಪ್ಪನೆನುತಲೆ । ಮರಳಿ ಚರಣಕೆ ಬಿದ್ದನೂ ॥ 6 ॥ ಯಿಂತು ಅಡಿಗೆಡವಿರ್ಪ ಬಾಣನ । ಸಂತಸದಿ ಬಿಗಿದಪ್ಪಿ ಲಕ್ಷುಮೀ । ಕಾಂತನೆಂದನು ಮಗನೆ ನೋವಿ । ಲ್ಲೆಂನ ಚಿತ್ತದಲೀ ॥ 7 ॥ ಮುಂದೆ ಸುಖಿಯಾಗೆನಲು ಕೇಳುತ । ಕಂತುಹರನತಿ ಕರುಣವೆತ್ತು ಮು । ರಾಂತಕಗೆ ಕೈಮುಗಿದು ತೆರಳಿದ । ನಂದು ಖಳಸಹಿತಾ ॥ 8 ॥

## ॥ ರಾಗ ಸಾಂಗತ್ಯ ರೂಪಕತಾಳ ॥

ಹರನು ಬಾಣನ ಸಹಿತಲೆ । ತೆರಳಿದ ಕೈಲಾಸ । ಗಿರಿಗಾಗಿಯಿತ್ತ । ನಾರದನೂ ॥ ಹರಿಯ ಪಾದಾಂಬುಜ । ಕೆರಗಿ ಕೈಮುಗಿದೆದ್ದು । ಪರಿಪರಿಯಿಂದ ಕೀರ್ತಿಸಿದಾ ॥ 1 ॥ ಅಂದು ಮಂತ್ರೀಶನು । ಬಂದು ಕಾಣಿಕೆಯನ್ನು । ತಂದು ಶ್ರೀಕೃಷ್ಣಗರ್ಪಿಸಿದಾ ॥ ತಂದೆ ರಕ್ಷಿಸು ರಕ್ಷಿ । ಸೆಂದು ಚರಣದ್ವಯಕೆ । ವಂದಿಸಿ ಬಲುಸ್ತುತಿಗೈದಾ ॥ 2 ॥ ಯರಗಿದ ಮಂತ್ರಿಯ । ಪರಿಕಿಸಿ ಪ್ರೇಮದಿ । ಕಿರುನಗೆಯಿಂದ ಮಾಧವನೂ ॥ ಶಿರವಂನು ಪಿಡಿದೆತ್ತಿ ನೀನೇನಮಾಳ್ಪೆ । ದೊರೆಯಿದ್ದಂತಿರುವದು ಸಹಜ ಸೇವಕಗೇ ॥ 3 ॥ ಚಂನಾಯಿತು ಕೊರತೆಯೇನು । ಯಿಂನು ನೀನುಪೋಗಿ । ಯಂನನ್ಯಜನ ಭರದೀ । ಕಂನೆಸಹಿತ ಕರತಹುದೆನೆ ಕೇಳಿ ಸಂ । ಪನ್ನ ಮಂತ್ರೀಶನೈತಂದಾ ॥ 4 ॥

## ॥ ಕಂದಪದ್ಯ ॥

ಇಂತೈತಂದಾ ಮಂತ್ರಿಯು । ಅಂತರಿಸದೆ ವಜ್ರಸಂಕಲೆಯಂ ಕಡಿದು । ಕಾಂತಾಮಣಿ ಯುಷೆಸಹಿತಂ । ಕಂತುಜನೆ ಕರತಂದನಸುರ ಹರನಲ್ಲಿಗಂ ॥ 1 ॥

## ॥ ರಾಗ ಸೌರಾಷ್ಟ ತ್ರಿವಿಡೆತಾಳ ॥

ಜನಪಕೇಳೈ ಮಂತ್ರಿಮದನನ । ತನುಜನನು ದೈತ್ಯಜೆಯ ಸಹಿತಲೆ । ವಿನಯದಿಂದ ದಣವನೇರಿಸು । ತತಿವಿಲಾಸದಲೀ ॥ 1 ॥ ಘನತರದಿ ಮೊಳಗುವ ಸುವಾದ್ಯ । ಧ್ವನಿಗೆ ಕಂಪಿಸೆ ಧರಣಿತಂನಯ । ತನುಜೆಸಹ ನಡೆತಂದು ಕಾಣಿಸೆ । ಮುರಾಂತಕಗೇ ॥ 2 ॥

## ॥ ರಾಗ ಕೇತಾರಗೌಳ ಅಷ್ಟತಾಳ ॥

ಬಂದು ಪಿತಾಮಹನಡಿಗೆಯು ಕಾಮನ । ನಂದನ ಲಜ್ಜಿಸಲೂ ಯಿಂದುವದನೆಸಹ ವಂದಿಸೆ ಪಿಡಿದೆತ್ತಿ । ಯಿಂದಿರಾಧವ ತೋಷದೀ ॥ 1 ॥ ಯೀಪಾಟಿ ಯೀರೂಪ । ಯೀಕಮನಿಯ ಕಂನೆ । ರೂಪ ನಿನಗೆ ಹೊರತೂ ॥ ಕಾಪುರುಷರ್ಗೆ ಕೈಸೇರುವದೇ ಯಂದು ಶ್ರೀಪತಿ ನಗುತೆಂದನೂ ॥ 2 ॥ ಉಷೆಯನಿರುದ್ಧರೀರ್ವರನು ಜೋಡಾಗಿ ನಿ । ಲಿಸಿ ಹರಿ ಸಂತಸದೀ ॥ ಬಿಸಜ ಬಾಣಾದಿಗಳಿಗೆ ತೋರಲೆಲ್ಲಾ ಹ । ರುಷಬಟ್ಟು ನಲಿದರಾಗಾ ॥ 3 ॥ ಕುಂಭಾಂಡ ಕೇಳಯ್ಯಾ ಯೀವೂರ ಧೊರೆತನ । ಶಂಬರಾರಿಯಸುತಗಿತ್ತೂ ॥ ಹಂಬಲಿಸದೆ ಯಾತನೊಡನೆ ನಿನೋಡೆಂದು । ಅಂಬುಜಾಕ್ಷನು ಪೇಳಿದಾ ॥ 4 ॥ ಜೀಯಹಸಾದವೆನುತ ಮಂತ್ರಿ । ನಾಯಕ ಪುರ । ಕೈದಲಾಕ್ಷಣದೀ ॥ ಕಾಯಜಾದ್ಯರುಸಹ ಜನಸಿರ್ದರಾ ಖಗ । ರಾಯನು ಯುದ್ದನಂದೂ ॥ 5 ॥

॥ ರಾಗ ಸೌರಾಷ್ಟ ತ್ರಿವಿಡೆತಾಳ ॥

ದೇವದುಂದುಭಿವೊಳಗೆ ದೇವರ । ದೇವರೆಲ್ಲರು ಸಹಿತಲಾ ದ್ವಾ । ರಾವತಿಗೆ ನಡೆತಂದನತ್ಯಾ । ನಂದದಿಂ ಬಳಿಕಾ ॥ 1 ॥ ಶ್ರೀವರನು ಐತಂದ ನೆನೆ ವಸು । ದೇವ ಕೇಳುತ ತೋಷ ಬಡುತಲೆ । ದೇವಕಿಯ ನೊಡಗೊಂಡಿದಿರ್ಗೊಳ । ಲೆಂದು ಪೊರವಂಟಾ ॥ 2 ॥

॥ ರಾಗ ನವರೋಜ ಆದಿತಾಳ ॥

ಕಳಹಂಸ ಗಮನೆಯರೂ । ಜಲಜ ಸುಗಂಧಿಯರೂ । ಕಲಶಕುಚದ ಭಾರಕೆ ನಡುಬಳಕಲು । ಕಲಶಕಂನಡಿಯಂ ಪಿಡಿದೆತ್ತಿತಂದರೂ ॥ 1 ॥ ವಸುದೇವ ಬರುವದನೂ । ಬಿಸಜನೇತ್ರನು ತಾನೂ । ಕುಶಲದಿ ಕಾಣುತ್ತ ಖಗವರನುನಿಳಿದು । ನಸುನಗೆಯಿಂದಲಿ । ತಂದೆಗೆ ನಮಿಸಿದನೂ ॥ 2 ॥ ಯರಗಿಪ್ಪ ತರುಣನನೂ । ಶಿರಪಿಡಿದೆತ್ತಿದನೂ । ಮುರಹರಪುನರಪಿಮಾತೆಗೆ ವಂದಿಸೆ । ಹರಸುತ್ತಲಣುಗನ ನಲವಿಂದ ॥ 3 ॥ ಅನಿರುದ್ಧ ಉಷೆಯರನ್ನೂ । ವನಜಾತಾಲೋಚನನೂ । ಜನಕಜನನಿಯರ । ಅನುಮತಿಯಿಂ । ಸನುಮತ ದಿಂದೆತ್ತುತ । ಪರಸಿದನೂ ॥ 4 ॥

॥ ಕಂದಪದ್ಯ ॥

ಸ್ಮರಸುತಗಂ ಬಾಣಜೆಯಂ । ಪರಿಕಿಸಿ ವಸುದೇವ ಮುಖ್ಯರೆಲ್ಲರು ಮನದೊಳು । ಹರುಷಂಪಟ್ಟು ಮನದೊಳು ಕೃಷ್ಣಾದ್ಯ । ರೆಲ್ಲರೇಳ್ತಂದರತಿ ವೇಗದೊಳಂ ॥ 1 ॥

॥ ರಾಗ ಮಾರವಿ ಏಕತಾಳ ॥

ವಾರಿಜಾಕ್ಷನಿರುದ್ಧ ಬಾಣಜೆಯರ । ನೇರಿಸಿ ಯಂದಣದೀ । ಭೂರಿಸುವಾದ್ಯ ಘೋಷದೊಳಂದು ಯಾದವ ವಾರಸಹಿತ ಭರದೀ ॥ 1 ॥ ನಡೆತರುತಿರಲಂದಂಗಜ ತನುಜನ । ಮಡದಿಯ ನೀಕ್ಷಿಸಲೂ ॥ ವಡನೈತಂದರು ಪುರಜನರೆಲ್ಲರು । ಕಡುಸಂತೋಷದೊಳೂ ॥ 2 ॥ ಬಂದು ಬಂದಡಿಗೆರಗುವರನು ಮಂನಿಸಿ । ತಂದು ಮುರಾಂತಕನೂ ॥ ಅಂದಣವೇರಿಯೇ ಬರುತಿರ್ದರು ಯೇ । ನೆಂದು ಪೊಗಳ್ವೆ ನಾನೂ ॥ 3 ॥ ಉಷೆಯಂದವ ಬಂಣಿಪಡರಿದು ಶೋ । ಭಿಸುತಿರುವಂದಣದೀ ॥ ಮಿಸುನಿಬೊಂಬೆಯು ಮಂಡಿಸಿದುದೊಯಂಬಂ । ತೆಸೆದಳು ನೋಳ್ಪರಿಗೇ ॥ 4 ॥

## ॥ ಕಂದಪದ್ಯ ॥

ಹರಿಯಿಂತೆಲ್ಲರು ಸಹಿತಂ । ಹರುಷದೊಳರಮನೆಗೈತಂದು ಅ । ನಿರುದ್ಧನಿಗಂ ವರಶುಭ ಲಗ್ನದೊಳುಷೆಯಂ । ಪರಿಣಯವಂ ಮಾಡಿಸಿದನತಿ ವೈಭವದಿಂ ॥ 1 ॥

## ॥ ದ್ವಿಪದೆ ॥

ಅಂದು ರುಕ್ಮಿಣಿಸಹಿತ ಭಾಮೆಯರು ಮುದದೀ । ಕಂದರ್ಪ ನರಸಿಯಂ ನೊಡಗೊಂಡು ಭರದೀ ॥ 1 ॥ ಚಾರು ಮೌಕ್ತಿಕದಿಂದ ಹಸೆಮಣೆಯ ಮಾಡಿ । ಮಾರತನುಜಾತನನು ಬಾಣಜೆಯು ಕೂಡೀ ॥ 2 ॥ ನಲವಿನಿಂಕುಳ್ಳಿರಿಸಿ ಅರಶಿನೆಂಣೆಯನು । ಚಲುವಿನಿಂದೆಸಗಿದರು ಪೊಗಳಲೇ ನಿಂನೂ ॥ 3 ॥ ಯಿಂತು ಭವನದೊಳು ದಿನನಾಲ್ಕಾಗಲಾಗಾ । ಕಾಂತೆಯರು ಮಜ್ಜನವ ಮಾಡಿಸಲು ಬೇಗಾ ॥ 4 ॥ ಹರಿಬಳಿಕ ಅನಿರುದ್ಧವುಷೆಯರಿಗೆ ಬೇಗಾ । ಸುರಚಿರಾಭರಣಗಳ್ ತೊಡಿಸಿ ಸಂತಸದೀ ॥ 5 ॥ ನವದೂಕುಲವನುಡಿಸಿ ನೋಡ ಲವದಿರುಗಳೂ । ದಿವಸಧಿಪನಂತೆಸವುತ್ತಿರ್ದರಾಗಾ ॥ 6 ॥ ಮದು ಮಕ್ಕಳನು ಕುಳ್ಳಿರಿಸಿ ಸತಿಯರಂದೂ । ಮುದದಿಂದ ಆರತಿಯ ಬೆಳಗಿದರುನಿಂದೂ ॥ 7 ॥

## ॥ ರಾಗ ಢವಳಾರತಿ ॥

ಕಾಮನ ಪುತ್ರಗೆ ಬಾಣಜೆಗೆ । ರಾಮಾನುಜ ಪೌತ್ರಗೆ ಉಷೆಗೆ ॥ ಕಾಮಿನಿಯರೆಲ್ಲ ನಲವಿಂದ ಪಾಡುತ । ಹೇಮಾದಾರತೀಯಾ ಬೆಳಗೀರೆ ॥ 1 ॥ ಚಂದಿರವದನೆಗೆ ಶುಕವಾಣಿಗೆ । ಕುಂದರರದನೆಗೆ ಸುಪ್ರಕಾಶಗೇ ॥ ಕಂದರ್ಪನ ತನುಜನಿಗೇ । ಮಂದಗಮನೆಯರೆಲ್ಲರು । ಕುಂದಣದಾರತಿಯಾ ಬೆಳಗೀರೇ ॥ 2 ॥ ಕರಿವಾರವ ತರಿದೋಡಿದಗೆ । ದುರಳರ ಶಿರಗಳ ಮುರಿದವಗೆ ॥ ಶರಬಾಣಸುತೆಯಾ ರಮಣಗೇ । ಸೀಮಂತಿನಿಯರು । ಕುರುಜಿನಾರತಿಯಾ ಬೆಳಗೀರೇ ॥ 3 ॥

## ॥ ಭಾಮಿನಿ ॥

ಅರಸ ಕೇಳಿಂತಚ್ಚುತನು ವಿ । ಸ್ತರದಿ ವೈವಾಹವನು ಮಾಡಿಸಿ । ಪರಿಪರಿಯ ದಕ್ಷಿಣೆಯನಿತ್ತನು । ವಿಪ್ರಸಂತತಿಗೇ ॥ ಪುರಜನವ ಪರಿಜನವ ಪೋಷಿಸು । ತ್ತಿರಲು ಸ್ಮರಜನು ಸತಿಯನೊಡಗೊಂ । ಡಿರದೆ ಚರಣಕೆ ನಮಿಸಲೆತ್ತಿದನ । ಸುರರಿಪು ನಗುತಾ ॥ 1 ॥

## ॥ ರಾಗ ಸೌರಾಷ್ಟ್ರ ತ್ರಿವಿಡೆತಾಳ ॥

ನಿರುತವೀ ಪರಿವಿಭವದಲಿ ಸಿರಿ । ಯರಸನಿರ್ದನೆನುತ್ತ ಭೂಮಿಪ । ವರಪರೀಕ್ಷಿತಗೆಂದ ಶುಕಮುನಿ । ಕರುಣದಿಂದಾ ॥ 1 ॥ ಧರೆಯೊಳೀ ಕಥೆಯಂನುಪೇಳ್ದರ । ದುರಿತವನು ಪರಿಹರಿಸಿ ಕಾಮ್ಯವ । ನಿಂದೆ ಪಾಲಿ ಪನಜಸುರಾಧೀಶ್ವರನು ಸತತಾ ॥ 2 ॥

## ॥ ರಾಗ ಢವಳಾರತಿ ॥

ನಾರಿಯರೆತ್ತಿದರಾರತಿಯಾ । ವೀರಕಿರೀಟಿಯ ಸಾರಥಿಗೇ । ನಾರಿಯರೆತ್ತಿದರಾರತಿಯಾ ॥ ಪಲ್ಲ ॥ ದಶರಥಸುತ ಶ್ರೀರಾಮನಿಗೆ । ಪಶುಪತಿಸನ್ನೂತ ಪ್ರೇಮನಿಗೇ । ಯಸವಯೋಧ್ಯಾ ಪಾಲನಿಗೇ । ಶಶಿಮುಖಿ ಸೀತೆಯ ಲೋಲನಿಗೇ । ಮಂಗಲಂ ಜಯ । ಮಂಗಲಂ ಶುಭ ॥ 1 ॥ ನಂದನ ಮೋಹನ ತನಯನಿಗೆ । ಚಂದಿರಸಖಿಸುತ ವಿನಯನಿಗೆ । ಮಂಧರಾಧರ ಗೋವಿಂದನಿಗೆ । ಸಿಂಧುಶಯನ ಮುನಿವಂದ್ಯನಿಗೆ ॥ ಮಂಗಲಂ ॥ 2 ॥ ಶ್ರೀದಾಮೋದರ ದೇವನಿಗೆ । ವೇದರಾಧಿತ ಮಹಿಮನಿಗೆ । ಆದರ ನೀಲ ಪ್ರಾಣನಿಗೆ । ಶ್ರೀಧರ ವೆಂಕಟರಮಣನಿಗೆ ॥ ಮಂಗಲಂ ॥

ಅಂತು ಸಂಧಿ 1 ಕ್ಕೆ ಪದ 415 ಕ್ಕೆ

## ॥ ಮಂಗಲಮಸ್ತು ॥



ಯಕ್ಷಗಾನ ಪ್ರದರ್ಶನಗಳಿಗೆ ಆಧಾರಭೂತವಾಗಿರುವವು ಪ್ರಸಂಗಕೃತಿಗಳು. ಕನ್ನಡ ಸಾಹಿತ್ಯ ನಂದನದಲ್ಲಿ ವಿಕಸನಗೊಂಡ ವಿವಿಧ ಛಂದೋಕುಸುಮಗಳ ಗ್ರಥನದಿಂದ ಸಿದ್ಧಗೊಂಡ ಅನುಪಮ ಕಾವ್ಯಗಳು ಇವು. ಅಲ್ಲಿನ ಪದ್ಯಗಗಳ ಚೌಕಟ್ಟಿನಲ್ಲಿಯೇ ಆಶುಸಂಭಾಷಣೆಗಳು ನಡೆಯುತ್ತವೆ. ಆಶುಸಂಭಾಷಣೆಗೆ ಸೀಮಾರೇಖೆಯನ್ನೆಳೆದು ಕಥಾಪ್ರವಾಹದ ಗತಿಯನ್ನು ನಿಯಂತ್ರಿಸುವ ಕಾರ್ಯ ಅವುಗಳದು. ಉತ್ತಮವಾದ ಪ್ರಸಂಗ ಕಾವ್ಯ ರಚನೆಯು ಕವಿಯ ಪ್ರತಿಭೆ ಪಾಂಡಿತ್ಯಗಳಿಗೆ ನಿಕಷವೆನಿಸುತ್ತದೆ. ಅಂತೆಯೇ ಉತ್ತಮವಾದ ಪ್ರಸಂಗವು ಸಾವಿರಾರು ವರ್ಷಗಳುರುಳಿದರೂ ನಿತ್ಯನೂತನವೆನಿಸುತ್ತದೆ. ಅಂಥ ಕೃತಿಗಳ ಶೋಧನೆ, ಪ್ರಕಟಣೆಗಳು ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅದ್ಯ ಕರ್ತವ್ಯವೆಂದು ಭಾವಿಸಲಾಗಿದೆ.

**ಸಂಪಾದಕರ ಮಾತು**

ಮಂಜಯ್ಯ ಗಣಪತಿ ಶೇಣ್ವಿಯವರು ಮೂಲತಃ ಅಂಕೋಲೆಯವರು. ಅಂಕೋಲೆಯಲ್ಲಿ ನಮ್ಮ ಮನತನದ ಒಂದು ದೊಡ್ಡ ಚಹದಂಗಡಿ, ಸ್ವಲ್ಪ ಭೂಮಿ ಇತ್ತು ಅದು ಅವರ ತಾತನ ಕಾಲದಿಂದಲೂ ನಡೆದು ಬಂದದ್ದು. ಇವರ ತಾಯಿ ರುಕ್ಮಿಣಿ ಮಂಜಯ್ಯನವರು 1908ರಲ್ಲಿ ಅಂಕೋಲೆಯಲ್ಲಿ ಹುಟ್ಟಿದರು. ಮುಲ್ಕಿಯಲ್ಲಿ ಪರೀಕ್ಷೆ ಪಾಸಾಗಿ ಎಸ್.ಎಸ್.ಎಲ್.ಸಿಯವರೆಗೆ ಅಂಕೋಲೆಯಲ್ಲಿಯೇ ಓದಿದರು ಅವರ ಮನೆ ಮಾತು ಕೊಂಕಣಿಯಾದರೂ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಒಳ್ಳೆಯ ಪ್ರಭುತ್ವವಿತ್ತು. ಅವರ ಕನ್ನಡ ಅಕ್ಷರಗಳಂತೂ ತುಂಬಾ ಸುಂದರವಾಗಿದ್ದವು.

ಬಹುಶಃ ಇದರಿಂದಾಗಿ ಅವರಲ್ಲಿ ಕಾವ್ಯ ಕಟ್ಟುವ ಯಕ್ಷಗಾನ ಬರೆಯುವ ಹವ್ಯಾಸ ಬೆಳೆದು ಬಂದಿರಬೇಕು. ಅವರು ಕಾವ್ಯದ ಒಂದೊಂದು ಪದ್ಯ ಓದಿ ಅರ್ಥವಿವರಣೆ ಕೊಡುತ್ತಿದ್ದರು. ಕೆಲವು ಬಾರಿ ಅವರನ್ನು ತಾಳಮದ್ದಳೆಯ ಕಾರ್ಯಕ್ರಮಕ್ಕೂ ಕರೆದೊಯ್ಯುತ್ತಿದ್ದರಂತೆ.

ಅವರು ಬರೆದ ಯಕ್ಷಗಾನಗಳಲ್ಲಿ ರತ್ನಾವತಿ ಕಲ್ಯಾಣ, ಉಷಾ ಪರಿಣಯ ಮಾತ್ರ ನನ್ನ ಬಳಿ ಇವೆ. ಅದಲ್ಲದೆ ಅವರು ಅದಕ್ಕೂ ಮೊದಲು ಚಂದ್ರಹಾಸ ಚರಿತ್ರೆ, ಧ್ರುವಚರಿತ್ರೆ, ಜಯಪ್ರದೆ ಕಲ್ಯಾಣ, ದೇವಯಾನೆ ಕಲ್ಯಾಣ ಪ್ರಸಂಗಗಳನ್ನು ಬರೆದು ಪ್ರಕಟಿಸಿದ ಸಂಗ್ರಹ ಸ್ತೋತ್ರ ಸಂಗ್ರಹ ಭಾಗ-1 ನ್ನೂ ಪ್ರಕಟಿಸಿದ ದಾಖಲೆಗಳಿವೆ. ಇಲ್ಲಿರುವ ರತ್ನಾವತಿ ಕಲ್ಯಾಣ ಮತ್ತು ಉಷಾಪರಿಣಯ ಪ್ರಸಂಗಗಳು ಕ್ರಿ.ಶ 1932ರಲ್ಲಿ ಕಾರವಾರದ ಸೆಂಟ್ರಲ್ ಪ್ರೆಸ್ಸಿನಲ್ಲಿ ಮುದ್ರಣಗೊಂಡಿವೆ. ಇದೀಗ ಪುನಃ ಮುದ್ರಣವಾಗುತ್ತಿದೆ.

**ಶಾ. ಮಂ. ಕೃಷ್ಣರಾಯ**

ನಂ.500, ಸಾಹಿತ್ಯ ಸದನ, 11ನೇ ಕ್ರಾಸ್,

ಗಿರಿನಗರ, ಬೆಂಗಳೂರು 85, ಮೊ: 94817-88832

**ಕರ್ನಾಟಕ ಯಕ್ಷಗಾನ ಅಕಾಡೆಮಿ**

ಬೆಲೆ : ೮೦.೦೦

೨ನೇ ಮಹಡಿ ಚಾಲುಕ್ಯ ವಿಭಾಗ, ಕನ್ನಡ ಭವನ,

ಜೆ.ಸಿ ರಸ್ತೆ, ಬೆಂಗಳೂರು ೫೬೦ ೦೦೨